ಶುಕ್ರವಾರ, ಆಗಸ್ಟ್ 19, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ

ಕೋಲ್ಕತ್ತದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ದೋಬಾರಾ' ಸಿನಿಮಾದ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ತಾಪ್ಸಿ ಪನ್ನು ಪಾಲ್ಗೊಂಡಿದ್ದರು





ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

75 ಸ್ವಾತಂತ್ರ್ಯದ ಅಮೃತಮಹೋತ್ಸವ

ಕರ್ನಾಟಕ ಸರ್ಕಾರ

ಇಂಧನ ಇಲಾಖೆ

ನವ ಭಾರತಕ್ಕಾಗಿ ನವ ಕರ್ನಾಟಕ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಬದ್ಧತೆಯ ಕೆಲಸ - ಭರವಸೆಯ ಬೆಳಕು

ಶ್ರೀ ವಿ. ಸುನಿಲ್ ಕುಮಾರ್ ಇಂಧನ ಇಲಾಖೆಯ ಸಚಿವರಾಗಿ ಅಧಿಕಾರ ಸ್ವೀಕರಿಸಿ ಒಂದು ವರ್ಷ ಪೂರ್ಣಗೊಳ್ಳುತ್ತಿದೆ ಈ ಸಂದರ್ಭದಲ್ಲಿ, ಇಂಧನ ಇಲಾಖೆಯಲ್ಲಿ ಅವರು ಕೈಗೊಂಡ ಸುಧಾರಣಾ ಕ್ರಮಗಳು ಅನೇಕ. ಹಲವು ಸವಾಲಿನ ಹಾಗೂ ಜನಪರ ಕೆಲಸಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಕಳೆದ ಒಂದು ವರ್ಷದಲ್ಲಿ ಪಾರದರ್ಶಕ ಹಾಗೂ ಭ್ರಷ್ಟಾಚಾರ ರಹಿತ ಜನಸ್ನೇಹಿ ಆಡಳಿತವನ್ನು ನೀಡುವಲ್ಲಿ ಯಶಸ್ವಿಯಾಗಿದ್ದಾರೆ.



ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ಉದ್ಘಾಟಿಸಿದ **'ಬೆಳಕು ಯೋಜನೆ'** ಕಾರ್ಯಕ್ರಮದಲ್ಲಿ **ಶ್ರೀ. ವಿ. ಸುನಿಲ್ ಕುಮಾರ್** ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಭಾಗವಹಿಸಿರುವುದು.

ಬೆಳಕಿಗಿಲ್ಲ ಬಡವಬಲ್ಲಿದನೆಂಬ ಭೇದ

- ಇಂದಿಗೂ ಸಹ ವಿದ್ಯುತ್ ಸಂಪರ್ಕ ಕಾಣದ ರಾಜ್ಯದ ಲಕ್ಷಾಂತರ ಮನೆಗಳಿಗೆ ತ್ವರಿತವಾಗಿ ಕಾಲಮಿತಿಯೊಳಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಯೋಜನೆಯೇ 'ಬೆಳಕು'.
- ವಿಶೇಷ ಯೋಜನೆಯಡಿ ವಿದ್ಯುತ್ ರಹಿತ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಮಹತ್ವದ ನಿರ್ಧಾರ ತೆಗೆದುಕೊಂಡು ವಿದ್ಯುತ್ ರಹಿತ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ವ್ಯವಸ್ಥೆ ಮಾಡಲಾಗಿದೆ.
- ಇಲ್ಲಿಯವರೆಗೆ 1,52,617 ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ.
- ಈ ಯೋಜನೆಯ ಸಂಪೂರ್ಣ ವೆಚ್ಚವನ್ನು ವಿದ್ಯುತ್ ಸರಬರಾಜು ಕಂಪನಿಗಳು ಭರಿಸುತ್ತಿವೆ. ಕಾಲ ಮಿತಿಯಲ್ಲಿ ವಿದ್ಯುತ್ ಸಂಪರ್ಕ ನೀಡುವುದು ಕಡ್ಡಾಯ.

ಉಚಿತ ವಿದ್ಯುತ್


- ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ನೀಡುವ ಉಚಿತ ವಿದ್ಯುತ್ ಪ್ರಮಾಣ ಹೆಚ್ಚಳ.
- 40 ಯುನಿಟ್ ನಿಂದ 75 ಯುನಿಟ್‌ಗೆ ಹೆಚ್ಚಳ.
- ಸುಮಾರು ನಲವತ್ತು ಲಕ್ಷ ಕುಟುಂಬಕ್ಕೆ ಅನುಕೂಲ.
- 979 ಕೋಟಿ ರೂ. ಸಬ್ಸಿಡಿ ರೂಪದಲ್ಲಿ ವೆಚ್ಚ.

ಟ್ರಾನ್ಸ್‌ಫಾರ್ಮರ್ ಬದಲಾವಣೆ

- ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳನ್ನು 24 ಗಂಟೆಯೊಳಗಾಗಿ ಬದಲಾಯಿಸುವುದಕ್ಕೆ ಕ್ರಮ.
- ಇದಕ್ಕಾಗಿ ರಾಜ್ಯದ ಎಲ್ಲಾ ಕಂಪನಿ ವ್ಯಾಪ್ತಿಯಲ್ಲಿ ಟ್ರಾನ್ಸ್‌ಫಾರ್ಮರ್ ಬ್ಯಾಂಕ್.
- ಟ್ರಾನ್ಸ್‌ಫಾರ್ಮರ್ ಸಾಗಾಣಿಕೆಗೆ ಸರ್ಕಾರದಿಂದ ವ್ಯವಸ್ಥೆ.
- ದೂರು ದಾಖಲಾದ 24 ಗಂಟೆಯೊಳಗೆ ಟಿಸಿ ಬದಲಾವಣೆ.

ವಿದ್ಯುತ್ ಸಂಪರ್ಕಕ್ಕೆ ಸ್ವಾಧೀನ ಪತ್ರ, ಓಸಿ ಬೇಕಿಲ್ಲ

- ಇನ್ನು ಮುಂದೆ ಬೆಂಗಳೂರು ನಗರದಲ್ಲಿ ವಾಣಿಜ್ಯ ಮತ್ತು ಗೃಹಬಳಕೆ ಸಂಪರ್ಕಕ್ಕೆ ಓಸಿ ಬೇಕಿಲ್ಲ.
- ಒಟ್ಟು 5 ಲಕ್ಷಕ್ಕೂ ಅಧಿಕ ಕುಟುಂಬಗಳಿಗೆ ಇದರಿಂದ ಅನುಕೂಲ.
- ಹಿಂದಿನ ಸರ್ಕಾರದ ಅಧಿಕಾರಾವಧಿಯಲ್ಲಿ ಅದ ಸಮಸ್ಯೆಗೆ ಪರಿಹಾರ ಕೊಟ್ಟ ಸಚಿವ.



ವಿದ್ಯುತ್ ಅದಾಲತ್

- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಿದ್ಯುತ್ ಅದಾಲತ್.
- ಪ್ರತಿ 3ನೇ ಶನಿವಾರ ವಿದ್ಯುತ್ ಅದಾಲತ್.
- ಗ್ರಾಮೀಣ ವಿದ್ಯುತ್ ಸಮಸ್ಯೆಗೆ ಶೀಘ್ರ ಪರಿಹಾರ.
- ವಿದ್ಯುತ್ ಅದಾಲತ್ ಮೂಲಕ ಇದುವರೆಗೆ 7911 ಪ್ರಕರಣಕ್ಕೆ ಪರಿಹಾರ.

ಇವಿ ಚಾರ್ಜಿಂಗ್ ಸ್ಟೇಷನ್

- ಬೆಂಗಳೂರಿನಲ್ಲಿ ಇದೇ ಮೊದಲ ಬಾರಿಗೆ ಇವಿ ಎಕ್ಸ್‌ಪೋ ಆಯೋಜನೆ.
- ರಾಜ್ಯಾದ್ಯಂತ 1000 ಇವಿ ಚಾರ್ಜಿಂಗ್ ಸ್ಟೇಷನ್ ಸ್ಥಾಪನೆಗೆ ಚಾಲನೆ.
- ಇವಿ ಸ್ಟೇಷನ್ ನಿರ್ಮಾಣಕ್ಕೆ ನೋಡಲ್ ಏಜೆನ್ಸಿಯಾಗಿ ಬೆಸ್ಕಾಂ.
- ಭವಿಷ್ಯದ ಬೇಡಿಕೆಗೆ ಈಗಲೇ ಹೂಡಿಕೆ.

ಕಲ್ಲಿದ್ದಲು ಕೊರತೆಗೆ ಪರಿಹಾರ

- ಎಲ್ಲಾ ವಿದ್ಯುತ್ ಸ್ಥಾವರಗಳು 11 ದಿನ ಕಾರ್ಯ ನಿರ್ವಹಿಸುವುದಕ್ಕೆ ಅಗತ್ಯವಾದ ಕಲ್ಲಿದ್ದಲು ದಾಸ್ತಾನು.
- ಕಲ್ಲಿದ್ದಲು ನಿರ್ವಹಣೆಗೆ ಪಾರದರ್ಶಕ ಕ್ರಮ.
- ಒಟ್ಟು 176.61 ಲಕ್ಷ ಮೆಟ್ರಿಕ್ ಟನ್ ಲಭ್ಯತೆ.

ವಿದ್ಯುತ್ ಮಾರಾಟ

- 9,000 ಮಿಲಿಯನ್ ಯುನಿಟ್ ಹೊರ ರಾಜ್ಯಗಳಿಗೆ ಮಾರಾಟ.
- ಮಾರಾಟದಿಂದ ರೂ.4,691 ಕೋಟಿಗಳಿಕೆ.
- ವಿದ್ಯುತ್ ಉತ್ಪಾದನೆ, ಕೊರತೆಯಿಂದ ಮಿಗತೆಗೆ.

ಹಸಿರು ಇಂಧನ

- ಹವಾಮಾನ ಬದಲಾವಣೆ, ಜಾಗತಿಕ ತಾಪಮಾನದ ಏರಿಕೆ ಮತ್ತು ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡುವುದಕ್ಕಾಗಿ ನವೀಕರಿಸಬಹುದಾದ ಇಂಧನ ಶೇಕಡಾವಾರು ಪಾಲು 62.87 ಕ್ಕೆ ಹೆಚ್ಚಳ.
- ದೇಶದಲ್ಲೇ ಅತಿ ಹೆಚ್ಚು ನವೀಕರಿಸಬಹುದಾದ ಇಂಧನ ಮೂಲಗಳ ಸ್ಥಾಪಿತ ಸಾಮರ್ಥ್ಯವನ್ನು ಹೊಂದಿರುವ ನಾಲ್ಕನೇ ರಾಜ್ಯ ಕರ್ನಾಟಕ.
- ಹೈಬ್ರಿಡ್ ಯೋಜನೆ, ತೇಲುವ ಸೌರಯೋಜನೆ, ಬ್ಯಾಟರಿ ಶೇಖರಣೆ ಯೋಜನೆ, ನವೀಕರಿಸಬಹುದಾದ ಇಂಧನ ಪಾರ್ಕ್‌ಗಳ ಅನುಷ್ಠಾನ.

ರಾಜ್ಯದ ಪ್ರಗತಿಯಲ್ಲಿ ಇಂಧನಶಕ್ತಿ

ರಾಜ್ಯದ ಜಿಲ್ಲೆಗಳಿಗೆ ವಿದ್ಯುತ್ ಪ್ರಸರಣ ಸಾಮಾಜಿಕ-ಆರ್ಥಿಕ ಪ್ರಗತಿಯ ಹಾದಿಯ ಅನಾವರಣ

ವಿದ್ಯುತ್ ಪ್ರಸರಣ ಕ್ಷೇತ್ರದ (ಕೆಪಿಟಿಸಿಎಲ್) ವಿವರಗಳು

- ವಿದ್ಯುತ್ ಪ್ರಸರಣ ಜಾಲದ ಬಲವರ್ಧನೆಗಾಗಿ ಒಟ್ಟು 38 ಹೊಸ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಲಾಗಿದೆ.
- 204 ಉಪಕೇಂದ್ರಗಳನ್ನು ಉನ್ನತೀಕರಿಸಲಾಗಿದೆ ಹಾಗೂ 1867 ಸರ್ಕ್ಯೂಟ್ ಕಿ.ಮೀಗಳ ಪ್ರಸರಣ ಮಾರ್ಗಗಳನ್ನು ವಿದ್ಯುತ್ ಜಾಲಕ್ಕೆ ಸೇರ್ಪಡೆ ಗೊಳಿಸಲಾಗಿದೆ.

ಶಾಲಾ/ಕಾಲೇಜುಗಳ ಮೇಲೆ ಹಾದುಹೋಗಿರುವ ವಿದ್ಯುತ್ ಮಾರ್ಗಗಳನ್ನು ಸ್ಥಳಾಂತರಿಸುವುದು:

- ಶಾಲಾ ಕಾಲೇಜುಗಳ ಬಳಿ ಹಾದು ಹೋದ ಅಪಾಯಕಾರಿ ವಿದ್ಯುತ್ ಮಾರ್ಗಗಳ ಸ್ಥಳಾಂತರ.
- 7,778 ಇಂಥ ಮಾರ್ಗಗಳನ್ನು ಗುರುತಿಸಲಾಗಿದ್ದು, ಇದುವರೆಗೆ 6,874 ಮಾರ್ಗಗಳನ್ನು ಸ್ಥಳಾಂತರಿಸಲಾಗಿದೆ.

ಜಿ. ಕುಮಾರ ನಾಯಕ, ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ.

ಎಮ್. ಎಸ್. ಶ್ರೀಕರ್, ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

ಡಾ. ಎನ್. ಮಂಜುಳ ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಮಹಾಂತೇಶ ಬೀಳಗಿ, ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು,
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಡಿ. ಭಾರತಿ, ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು,
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಪ್ರಶಾಂತ್ ಕುಮಾರ್ ಮಿಶ್ರಾ, ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು,
ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಪಾಂಡ್ವೆ ರಾಹುಲ್ ತುಕಾರಾಂ, ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು,
ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಜಯವಿಭವ ಸ್ವಾಮಿ, ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು,
ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಕೆ. ಪಿ. ರುದ್ರಪ್ಪಯ್ಯ
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

ಎಲ್ಲ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ದಿಟ್ಟ ಹೆಜ್ಜೆ-ಪಾರದರ್ಶಕ ಆಡಳಿತ

ಕೋವಿಡ್-19, ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶ್ರೀಕೃಷ್ಣ ಜನ್ಮಾಷ್ಟಮಿಯ ಶುಭಾಶಯಗಳು

ಚಿನ್ನ (Std. 10g) ₹53,560 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹58,900 (ಬೆಂಗಳೂರು)

ಸಿನಿಮಾ ಪುರವಣಿ
ಧನು ಹರ್ಷ ಬಲವರ್ಧಿಸಿದ ಎಡಗೈಯ ಕಥೆ...



ಬ್ರೇಕ್ ಇನ್‌ಸ್ಪೆಕ್ಟರ್ ಆಯ್ಕೆಗೆ ಕೆಪಿಎಸ್‌ಸಿ ಪಟ್ಟಿ: 'ಅಕ್ರಮ'ಕ್ಕೆ ದಾರಿ ಆರೋಪ

ಅನರ್ಹರಿಗೆ 'ಅರ್ಹತೆ'?

• ರಾಜೇಶ್ ರೈ ಚಟ್ಲ

ಬೆಂಗಳೂರು: ಮೋಟಾರು ವಾಹನ ನಿರೀಕ್ಷಕ (ಐಎಂವಿ– ಬ್ರೇಕ್ ಇನ್‌ಸ್ಪೆಕ್ಟರ್) ಹುದ್ದೆಗೆ ಕೆಪಿಎಸ್‌ಸಿ ಪ್ರಕಟಿಸಿರುವ ಪರಿಷ್ಕೃತ ಅಂತಿಮ ಆಯ್ಕೆ ಪಟ್ಟಿಯಲ್ಲಿರುವ 141 ಅಭ್ಯರ್ಥಿಗಳಲ್ಲಿ, ಈ ಹುದ್ದೆಗೆ 'ಅನರ್ಹ'ರೆಂದು ಕೆಪಿಎಸ್‌ಸಿಯೇ ಗುರುತಿಸಿದ್ದ 107 ಅಭ್ಯರ್ಥಿಗಳ ಹೆಸರುಗಳಿರುವುದು ಸಂಶಯಕ್ಕೆ ಕಾರಣವಾಗಿದೆ.

ಅನರ್ಹರೆಂದು ಗುರುತಿಸಲಾಗಿದ್ದವರ ಪೈಕಿ ಕೆಲವರಿಗೆ ಸಾರಿಗೆ ಇಲಾಖೆಯೇ 'ಅರ್ಹತೆ'ಯ ಪ್ರಮಾಣ ಪತ್ರ ನೀಡಲು ಮುಂದಾಗಿದೆ ಎಂದೂ ಆರೋಪಿಸಲಾಗಿದೆ.

ಕೆಪಿಎಸ್‌ಸಿ 2019 ಜುಲೈ 4ರಂದು ಪ್ರಕಟಿಸಿದ್ದ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಎಂಜಿನ್ ಹೊಂದಿದ ಭಾರಿ ಮತ್ತು ಲಘು ವಾಹನ ದುರಸ್ತಿಯ ಸೇವಾನುಭವದ ನಕಲಿ ಪ್ರಮಾಣಪತ್ರ ಸಲ್ಲಿಸಿದ್ದ ಅಭ್ಯರ್ಥಿಗಳಿದ್ದಾರೆ ಎಂದು ಆರೋಪಿಸಿ ಕೆಲವು ಅಭ್ಯರ್ಥಿಗಳು ಕೋರ್ಟ್ ಮೆಟ್ಟಿಲೇರಿದ್ದರು. 1,710 ಅಭ್ಯರ್ಥಿಗಳನ್ನು ಮೊದಲ ಪಟ್ಟಿಯಲ್ಲೇ ಅನರ್ಹರು ಎಂದು ಕೆಪಿಎಸ್‌ಸಿ ತಿರಸ್ಕರಿಸಿತ್ತು. ಹೈಕೋರ್ಟ್ ನಿರ್ದೇಶನದಂತೆ ಏಪ್ರಿಲ್ 30ರಂದು ಪ್ರಕಟಿಸಿರುವ ಪರಿಷ್ಕೃತ ಪಟ್ಟಿಯಲ್ಲಿ ಅನರ್ಹರ ಹೆಸರುಗಳೂ ಇವೆ!

ಪರಿಷ್ಕೃತ ಪಟ್ಟಿಯಲ್ಲಿರುವವರಿಗೆ ನೇಮಕಾತಿ ಆದೇಶ ನೀಡುವ ಮೊದಲು ಅಭ್ಯರ್ಥಿಗಳ ವಯೋಮಿತಿ, ವಿದ್ಯಾರ್ಹತೆ, ಮೀಸಲಾತಿ, ದೈಹಿಕ ಕ್ಷಮತೆ, ವಾಹನ ಪರವಾನಗಿ ಮತ್ತು ಸೇವಾನುಭವಗಳಿಗೆ ಸಂಬಂಧಿಸಿದಂತೆ ಮೂಲ ದಾಖಲೆ ಮತ್ತು ಅವುಗಳ ನೈಜತೆ ಬಗ್ಗೆ ಸಿಂಧುತ್ವ ಪ್ರಮಾಣಪತ್ರ ಪಡೆಯುವಂತೆ ಸಾರಿಗೆ ಇಲಾಖೆಗೆ ಕೆಪಿಎಸ್‌ಸಿ ಸೂಚಿಸಿದೆ.

ಪರಿಷ್ಕೃತ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಮೇ 6ರವರೆಗೆ ಸಮಯ ನೀಡಿದ್ದರೂ, ಸಾರಿಗೆ ಆಯುಕ್ತರು ಆ ಪಟ್ಟಿಯಲ್ಲಿದ್ದ ಅಭ್ಯರ್ಥಿಗಳ ಪೊಲೀಸ್ ಪರಿಶೀಲನೆಗೆ ಮೇ 4ರಂದೇ ಸೂಚಿಸಿದ್ದರು. ಜಿಲ್ಲಾಧಿಕಾರಿಗಳು ಮತ್ತು ವೈದ್ಯಕೀಯ ಮಂಡಳಿ ಮೂಲಕ ಎಲ್ಲ 141 ಅಭ್ಯರ್ಥಿಗಳ ವೈದ್ಯಕೀಯ ಪರೀಕ್ಷೆ, ಸೇವಾನುಭವ ಪ್ರಮಾಣಪತ್ರಗಳ ಮೂಲ ದಾಖಲೆಗಳ ಪರಿಶೀಲನೆಗೆ ಸಾರಿಗೆ ಇಲಾಖೆ ಮುಂದಾಗಿದೆ. ಇದು ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಡಲಿದ್ದು, ಅನರ್ಹರಿಗೂ 'ಅರ್ಹತೆ'ಯ ಪ್ರಮಾಣಪತ್ರ ಸಿಗುವ ಸಾಧ್ಯತೆ ಇದೆ' ಎಂದು ಹುದ್ದೆ ವಂಚಿತ ಅಭ್ಯರ್ಥಿಗಳು ಅನುಮಾನ ವ್ಯಕ್ತಪಡಿಸಿದ್ದಾರೆ.

ಕೆಪಿಎಸ್‌ಸಿ ತಾತ್ಕಾಲಿಕ ಆಯ್ಕೆ ಪ್ರಕಟಿಸಿದ್ದ ಸಂದರ್ಭದಲ್ಲಿಯೇ, ಸೇವಾನುಭವ ಪ್ರಮಾಣಪತ್ರಗಳ ಪರಿಶೀಲನೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ಕೆಲವು ಅಭ್ಯರ್ಥಿಗಳು ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ದೂರು ನೀಡಿದ್ದರು. ತನಿಖೆ ನಡೆಸಿದ್ದ ಎಸಿಬಿ, 42 ಅಭ್ಯರ್ಥಿಗಳ ಕುರಿತು ಮಧ್ಯಂತರ ವರದಿ ನೀಡಿತ್ತು. ಅದಾದ ಬಳಿಕ, 'ಈ ವಿಷಯ ತಮ್ಮ ವ್ಯಾಪ್ತಿಗೆ ಬರುವುದಿಲ್ಲ. ಹೀಗಾಗಿ, ಅಭ್ಯರ್ಥಿಗಳು ಸಲ್ಲಿಸಿದ್ದ ಪ್ರಮಾಣಪತ್ರ ನೈಜವಾಗಿಲ್ಲ ಎಂದು ನೀಡಿದ್ದ ವರದಿಯನ್ನು ಪರಿಗಣಿಸಬಾರದು' ಎಂದು ಎಸಿಬಿ ಹೇಳಿತ್ತು.

ಈ ಮಧ್ಯೆ, ನಕಲಿ ಸೇವಾನುಭವ ಪ್ರಮಾಣಪತ್ರ ಸಲ್ಲಿಸಿದವರು ಆಯ್ಕೆಯಾಗಿದ್ದರೆಂದು ಆರೋಪಿಸಿ ಕರ್ನಾಟಕ ಆಡಳಿತ ನ್ಯಾಯಮಂಡಳಿಯ (ಕೆಎಟಿ) ಮೊರೆ ಹೋಗಿದ್ದರು. ಆ ಬಳಿಕ, ಕೆಪಿಎಸ್‌ಸಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿತ್ತು. ಪ್ರಕರಣದ ವಿಚಾರಣೆಯ ಮಧ್ಯೆ, ಸರ್ಕಾರಕ್ಕೆ ಪತ್ರ ಬರೆದಿದ್ದ ಕೆಪಿಎಸ್‌ಸಿ, ಭಾರಿ ವಾಹನಗಳ ದುರಸ್ತಿ ಕಾರ್ಯಾಗಾರದ ಬಗ್ಗೆ ಸ್ಪಷ್ಟೀಕರಣ ಕೇಳಿತ್ತು. ಇದು ಗೊಂದಲಕ್ಕೆ ಕಾರಣವಾಗಿತ್ತು. ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ತಿರಸ್ಕೃತ ಪಟ್ಟಿಯ ಬಗ್ಗೆ ಪ್ರಸ್ತಾಪಿಸದ ಹೈಕೋರ್ಟ್, ನಿಯಮಾನುಸಾರ ಮುಂದುವರಿಯಿರಿ ಎಂದು ಕೆಪಿಎಸ್‌ಸಿಗೆ ನಿರ್ದೇಶನ ನೀಡಿತ್ತು. ಆದರೆ, ಕೆಪಿಎಸ್‌ಸಿ ಅಭ್ಯರ್ಥಿಗಳ ಅಂಕಗಳ ಆಧಾರದಲ್ಲಿ ಪರಿಷ್ಕೃತ ಪಟ್ಟಿ ಸಿದ್ಧಪಡಿಸಿತ್ತು.

'ಈ ನೇಮಕಾತಿ ಪ್ರಕ್ರಿಯೆ ಆರಂಭಗೊಂಡು ಆರು ವರ್ಷ ದಾಟಿದೆ. ಅರ್ಜಿ ಸಲ್ಲಿಸಿದವರ ಮೂಲ ದಾಖಲಾತಿಗಳ ಪರಿಶೀಲನೆಗೆ ಕೆಪಿಎಸ್‌ಸಿ ಮೂರೂವರೆ ವರ್ಷ ತೆಗೆದುಕೊಂಡಿತ್ತು. ಈ ಹಿಂದೆ, ಜಿಲ್ಲಾಧಿಕಾರಿಗಳು ಮತ್ತು ಆರ್‌ಟಿಒಗಳು ಪರಿಶೀಲಿಸಿ ಅರ್ಹರೆಂದು ಗುರುತಿಸಿದ್ದ ಅಭ್ಯರ್ಥಿಗಳ ಹೆಸರು ಆರು ವರ್ಷಗಳ ಬಳಿಕ ಪ್ರಕಟಿಸಿದ ಅಂತಿಮ ಆಯ್ಕೆ ಪಟ್ಟಿಯಲ್ಲಿ ಇಲ್ಲ. ಇದರಿಂದ ಅನ್ಯಾಯವಾಗಿದೆ' ಎಂದು ಕೆಲವು ಅಭ್ಯರ್ಥಿಗಳು ದೂರಿದ್ದಾರೆ.

ಪ್ರಜಾವಾಣಿ ವಿಶೇಷ

2,347 ಅಭ್ಯರ್ಥಿಗಳಲ್ಲಿ 1,710 'ಅನರ್ಹ'

ಐಎಂವಿ 150 ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ 2016ರ ಫೆ. 4ರಂದು ಅಧಿಸೂಚನೆ ಹೊರಡಿಸಿತ್ತು. 2,347 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. 2016ರ ಜೂನ್ 26ರಂದು ನಡೆದಿದ್ದ ಆಯ್ಕೆ ಪರೀಕ್ಷೆಗೆ 2,048 ಮಂದಿ ಹಾಜರಾಗಿದ್ದರು. ಈ ಪೈಕಿ, ಮೂಲ ದಾಖಲೆಗಳ ಪರಿಶೀಲನೆಗೆ 1,905 ಅಭ್ಯರ್ಥಿಗಳು ಹಾಜರಾಗಿದ್ದರು. ಕೆಪಿಎಸ್‌ಸಿ ಕೋರಿಕೆಯಂತೆ ಅಭ್ಯರ್ಥಿಗಳ ದೈಹಿಕ ಕ್ಷಮತೆ ಮತ್ತು ಸೇವಾನುಭವ ಪ್ರಮಾಣಪತ್ರವನ್ನು ವೈದ್ಯಕೀಯ ಮಂಡಳಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು (ಆರ್‌ಟಿಒ) ಮತ್ತು ಜಿಲ್ಲಾಧಿಕಾರಿಗಳು ಪರಿಶೀಲಿಸಿದ್ದರು. ಆಗ ಸೇವಾನುಭವ ಹೊಂದಿಲ್ಲದ 631, ದೈಹಿಕ ಕ್ಷಮತೆ ಇಲ್ಲದ 435, ವಿದ್ಯಾರ್ಹತೆ ಪಡೆಯುವ ಪೂರ್ವದಲ್ಲಿ ಸೇವಾನುಭವ ಹೊಂದಿದ್ದ 16, ಅಪೂರ್ಣ ಸೇವಾನುಭವದ ಕಾರಣಕ್ಕೆ ಇಬ್ಬರು ಸೇರಿ ಒಟ್ಟು 1,710 ಅಭ್ಯರ್ಥಿಗಳನ್ನು ಅನರ್ಹರೆಂದು ಕೆಪಿಎಸ್‌ಸಿ ತಿರಸ್ಕರಿಸಿತ್ತು. ಉಳಿದ, 195 ಅಭ್ಯರ್ಥಿಗಳು ಹುದ್ದೆಗೆ ಅರ್ಹತೆ ಪಡೆದರೂ ಜ್ಯೇಷ್ಠತೆಯ ಕಾರಣಕ್ಕೆ 66 ಅಭ್ಯರ್ಥಿಗಳು ಪಟ್ಟಿಯಿಂದ ಹೊರಗುಳಿದು, ಕೆಪಿಎಸ್‌ಸಿ 129 ಅಭ್ಯರ್ಥಿಗಳ (11 ಅಭ್ಯರ್ಥಿಗಳು ಹೈ–ಕ) ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿತ್ತು.

ರಸ್ತೆಯಲ್ಲಿ ಪೆಂಡಾಲ್ ನಿರ್ಮಾಣ ಬೇಡ: ಎನ್‌ಜಿಟಿ ಆದೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಗಣೇಶ ಚತುರ್ಥಿ, ದುರ್ಗಾಪೂಜೆ ಸೇರಿ ಹಬ್ಬಗಳ ಆಚರಣೆ ವೇಳೆ ಪೆಂಡಾಲ್‌ಗಳು, ತಾತ್ಕಾಲಿಕ ಡೇರೆಗಳು ಮತ್ತು ಸ್ವಾಗತ ಕಮಾನುಗಳನ್ನು ರಸ್ತೆಗಳಲ್ಲಿ ನಿರ್ಮಿಸಲು ಅವಕಾಶ ನೀಡದಂತೆ ರಾಷ್ಟ್ರೀಯ ಹಸಿರು ನ್ಯಾಯಪೀಠವು (ಎನ್‌ಜಿಟಿ) ಜಿಲ್ಲಾಡಳಿತಗಳಿಗೆ ಆದೇಶ ನೀಡಿದೆ.

'ರಸ್ತೆಗಳಲ್ಲಿ ಪೆಂಡಾಲ್‌ಗಳು ಮತ್ತು ಸ್ವಾಗತ ಕಮಾನುಗಳನ್ನು ನಿರ್ಮಿಸುವ ವಿಚಾರವನ್ನು ಜಿಲ್ಲಾಡಳಿತಗಳು ಗಂಭೀರವಾಗಿ ಪರಿಗಣಿಸಬೇಕು. ರಸ್ತೆಗಳ ಮೇಲೆ ಅಂಥವನ್ನು ನಿರ್ಮಿಸಲು ಅನುಮತಿ ನೀಡಬಾರದು' ಎಂದು ಸೂಚಿಸಿದೆ.



'ಅನುಮತಿ ಇಲ್ಲದೇ ಪೆಂಡಾಲ್‌ಗಳನ್ನು ನಿರ್ಮಿಸಿದ್ದರೆ ಅವುಗಳನ್ನು ಕೂಡಲೇ ತೆರವುಗೊಳಿಸಬೇಕು ಮತ್ತು ನಿರ್ಮಿಸಿದವರಿಗೆ ದಂಡ ವಿಧಿಸಬೇಕು' ಎಂದು ಆದೇಶದಲ್ಲಿ ಹೇಳಲಾಗಿದೆ.

ಪೆಂಡಾಲ್‌ಗಳಂಥ ನಿರ್ಮಾಣಗಳು ಸಾರ್ವಜನಿಕರಿಗೆ ತೊಂದರೆ ಉಂಟು ಮಾಡುತ್ತವೆ ಎಂದು ಛತ್ತೀಸಗಡದ 'ನಾಗರಿಕ ಸಂಘರ್ಷ ಸಮಿತಿ'ಯು ಎನ್‌ಜಿಟಿಗೆ ಅರ್ಜಿ ಸಲ್ಲಿಸಿತ್ತು. ಅರ್ಜಿ ವಿಚಾರಣೆ ನಡೆಸಿದ ಎನ್‌ಜಿಟಿ ಈ ಆದೇಶ ಹೊರಡಿಸಿದೆ.

ಕಾರ್ಯಕ್ರಮಗಳ ಆಯೋಜಕರು ಶಬ್ದಮಾಲಿನ್ಯ ತಡೆ ನಿಯಮಗಳನ್ನು ಪಾಲಿಸುವಂತೆ ಮತ್ತು ವಾಹನ ಸಂಚಾರಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳುವಂತೆ ಸ್ಥಳೀಯ ಆಡಳಿತಗಳು ನಿಗಾವಹಿಸಬೇಕು ಎಂದೂ ಅದು ಹೇಳಿದೆ.

ರಾಣಿ ಚನ್ನಮ್ಮ, ಟಿಪ್ಪು ಹೆಸರಿಗೆ ಸುಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮಾಣೆಕ್ ಶಾ ಮೈದಾನದಲ್ಲಿನ ಎರಡು ದ್ವಾರಗಳಿಗೆ ನಾಮಕರಣ ಮಾಡಲಾಗಿದ್ದ ರಾಣಿ ಚನ್ನಮ್ಮ ಮತ್ತು ಟಿಪ್ಪು ಸುಲ್ತಾನ್ ಹೆಸರುಗಳನ್ನು ಅಳಿಸಿ ಹಾಕಿರುವುದು ಆಕ್ರೋಶಕ್ಕೆ ಕಾರಣವಾಗಿದೆ.

ಮಾಣೆಕ್ ಶಾ ಮೈದಾನದಲ್ಲಿ ಪ್ರತಿ ವರ್ಷ ಸಂಭ್ರಮದಿಂದ ನಡೆಯುವ ಸ್ವಾತಂತ್ರ್ಯ ದಿನಕ್ಕೆ ಬಿಬಿಎಂಪಿ ಮತ್ತು ಜಿಲ್ಲಾಡಳಿತ ಈ ಮೈದಾನವನ್ನು ಸಿದ್ಧಪಡಿಸುತ್ತವೆ. ಟಿಪ್ಪು ಸುಲ್ತಾನ್ ಮತ್ತು ಕಿತ್ತೂರು ರಾಣಿ ಚನ್ನಮ್ಮ ಅವರ ಹೆಸರುಗಳನ್ನು ಕೋಟೆ ಮಾದರಿ ದ್ವಾರಗಳಿಗೆ ಇರಿಸಲಾಗಿತ್ತು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲೇ ಇಬ್ಬರು ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ಅಳಿಸಿ ಹಾಕಿರುವುದು ಖಂಡನೀಯ ಎಂದು ಸರ್ಕಾರದ ವಿರುದ್ಧ ಕಾಂಗ್ರೆಸ್ ಕಿಡಿಕಾರಿದೆ.

5ನೇ ಪುಟ ನೋಡಿ

ಹೊರ ರಾಜ್ಯ

ಈಶಾನ್ಯದಲ್ಲಿ ಮತ್ತೆ ಪ್ರತಿರೋಧದ ಕಿಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಆರೋಗ್ಯ ಇಲಾಖೆಯಿಂದ 577 ಆಸ್ಪತ್ರೆಗಳಿಗೆ ನೋಟಿಸ್ ಜಾರಿ • ರೋಗಿಗಳ ಕುಟುಂಬಸ್ಥರಿಗೆ ₹ 1.58 ಕೋಟಿ ಪಾವತಿ

ಕೋವಿಡ್ ಚಿಕಿತ್ಸೆ: 'ಖಾಸಗಿ' ಆಸ್ಪತ್ರೆ ವಸೂಲಿ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೋವಿಡ್‌ಗೆ ಚಿಕಿತ್ಸೆ ನೀಡಲು ಕೆಲವು ಖಾಸಗಿ ಆಸ್ಪತ್ರೆ ಗಳು ಸರ್ಕಾರದಿಂದ ಹಣ ಪಡೆಯುವ ಜತೆಗೆ ರೋಗಿಗಳ ಕಡೆಯವರಿಂದಲೂ ಚಿಕಿತ್ಸಾ ವೆಚ್ಚವನ್ನು ವಸೂಲಿ ಮಾಡಿವೆ. ರೋಗಿಗಳ ಕುಟುಂಬಸ್ಥರು ಆರೋಗ್ಯ ಇಲಾಖೆಗೆ ನೀಡಿರುವ ದೂರುಗಳ ಪ್ರಕಾರ ಒಟ್ಟು ₹ 18.87 ಕೋಟಿಯಷ್ಟು ಹಣವನ್ನು ಆಸ್ಪತ್ರೆಗಳು ಹೆಚ್ಚುವರಿಯಾಗಿ ಪಡೆದಿವೆ.

ಹಣ ವಸೂಲಿಗೆ ಸಂಬಂಧಿಸಿದಂತೆ ಇಲಾಖೆಯು ಈವರೆಗೆ 577 ಖಾಸಗಿ ಆಸ್ಪತ್ರೆಗಳಿಗೆ ನೋಟಿಸ್ ಜಾರಿ ಮಾಡಿ, 403 ರೋಗಿಗಳ ಕುಟುಂಬಗಳಿಗೆ ₹ 1.58 ಕೋಟಿ ಹಣವನ್ನು ಹಿಂದಿರುಗಿಸಿದೆ. ರೋಗಿಗಳಿಂದ ಹಣ ವಸೂಲಿ ಮಾಡಿದ ಆಸ್ಪತ್ರೆಗಳ ಪಟ್ಟಿ 'ಪ್ರಜಾವಾಣಿ'ಗೆ ಲಭ್ಯವಾಗಿದ್ದು, ಬೆಂಗಳೂರಿನ ಬಹುತೇಕ ಆಸ್ಪತ್ರೆಗಳು ಹೆಚ್ಚುವರಿಯಾಗಿ ಹಣ ಪಡೆದಿವೆ. ಹಣ ವಸೂಲಿಗೆ ಸಂಬಂಧಿಸಿದ ಕೆಲ ಪ್ರಕರಣಗಳಲ್ಲಿ ಸತ್ಯಾಸತ್ಯತೆ ಪರಿಶೀಲನೆಗೆ ಜಿಲ್ಲಾ ಮಟ್ಟದ ಕುಂದು ಕೊರತೆ ಕಮಿಟಿಗೆ (ಡಿಜಿಆರ್‌ಸಿ) ಸೂಚಿಸಲಾಗಿದೆ.

ಆಯುಷ್ಮಾನ್ ಭಾರತ-ಆರೋಗ್ಯ ಕರ್ನಾಟಕ ಯೋಜನೆಯಡಿ ರೆಫರಲ್ ಆಧಾರದಲ್ಲಿ ಕೋವಿಡ್ ಚಿಕಿತ್ಸೆ ಒದಗಿಸಲಾಗಿದೆ. ಖಾಸಗಿ ಆಸ್ಪತ್ರೆ ಗಳಿಗೆ ಪ್ರಕರಣಗಳ ಅನುಸಾರ ಚಿಕಿತ್ಸಾ ವೆಚ್ಚವನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸಾಸ್ಟ್) ಪಾವತಿಸುತ್ತಿದೆ. ರೆಫರಲ್ ಆಧಾರದಲ್ಲಿ ದಾಖಲಾದ ಪ್ರಕರಣಗಳಲ್ಲಿ ಚಿಕಿತ್ಸೆ ಸಂಬಂಧ ಕೆಲ ಖಾಸಗಿ ಆಸ್ಪತ್ರೆಗಳು ರೋಗಿಗಳ ಕಡೆಯವರಿಂದಲೂ ಹಣ ವಸೂಲಿ ಮಾಡಿವೆ. ಟ್ರಸ್ಟ್‌ನಿಂದಲೂ ಚಿಕಿತ್ಸಾ ವೆಚ್ಚವನ್ನು ಪಡೆದುಕೊಂಡಿವೆ. ಈ ಬಗ್ಗೆ 2,692 ದೂರುಗಳನ್ನು ಟ್ರಸ್ಟ್ ಸ್ವೀಕರಿಸಿದೆ. ಈ ಪ್ರಕರಣಗಳನ್ನು ಪರಿಶೀಲಿಸಿ, ರೋಗಿಗಳ ಕುಟುಂಬದವರಿಗೆ ಹಣ ಮರುಪಾವತಿ-ಸಲಾಗುತ್ತಿದೆ.

ರೆಫರಲ್ ಆಧಾರ ಚಿಕಿತ್ಸೆ: ರಾಜ್ಯದಲ್ಲಿ 2020ರ ಮಾ.8ರಂದು ಮೊದಲ ಕೋವಿಡ್ ಪ್ರಕರಣ ವರದಿಯಾಗಿತ್ತು. ಕೊರೊನಾ ಸೋಂಕಿತರ ಸಂಖ್ಯೆ ಏರಿದಂತೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ದರ ನಿಗದಿಪಡಿಸಿ, ಶೇ 50ರಷ್ಟು ಹಾಸಿಗೆಗಳನ್ನು ಜಿಲ್ಲಾಡಳಿತ ಶಿಫಾರಸು ಮಾಡುವ ರೋಗಿಗಳಿಗೆ ಮೀಸಲಿಡುವಂತೆ ಆದೇಶ ಹೊರಡಿಸಿತ್ತು. ರಾಜ್ಯದಲ್ಲಿ 400ಕ್ಕೂ ಅಧಿಕ ಖಾಸಗಿ ಆಸ್ಪತ್ರೆಗಳನ್ನು ಗುರುತಿಸಲಾಗಿತ್ತು. ಈ ಆಸ್ಪತ್ರೆಗಳಲ್ಲಿ ಅರ್ಧದಷ್ಟು ಹಾಸಿಗೆಗಳನ್ನು ಶಿಫಾರಸು ಮಾಡುವ ರೋಗಿಗಳಿಗೆ ಮೀಸಲಿಡುವಂತೆ ಸೂಚಿಸಲಾಗಿತ್ತು.

ರೆಫರಲ್ ಆಧಾರಿತ ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದಂತೆ ಪ್ರಕರಣಗಳ ಅನುಸಾರ ಖಾಸಗಿ ಆಸ್ಪತ್ರೆಗಳಿಗೆ ಟ್ರಸ್ಟ್ ಹಣ ಪಾವತಿಸುತ್ತಿದೆ. ಆಯುಷ್ಮಾನ್ ಭಾರತ-ಆರೋಗ್ಯ ಕರ್ನಾಟಕ ಯೋಜನೆಯಡಿ ಖಾಸಗಿ ಆಸ್ಪತ್ರೆಗಳು ಕೋವಿಡ್ ಪ್ರಾರಂಭವಾದಾಗಿನಿಂದ 2022ರ ಜೂನ್ ಅಂತ್ಯಕ್ಕೆ 2.39 ಲಕ್ಷ ಕೋವಿಡ್ ಪೀಡಿತರಿಗೆ ಚಿಕಿತ್ಸೆ ಒದಗಿಸಿವೆ. ಚಿಕಿತ್ಸೆ ನೀಡಿದ ಆಸ್ಪತ್ರೆಗಳಿಗೆ ಟ್ರಸ್ಟ್ ಮೂಲಕ ₹ 779.83 ಕೋಟಿ ಪಾವತಿಸಲಾಗಿದೆ.

ಈ ವರ್ಷ ಏಪ್ರಿಲ್‌ನಿಂದ ಜೂನ್ ಅಂತ್ಯಕ್ಕೆ 653 ಕೋವಿಡ್ ಪೀಡಿತರಿಗೆ ಚಿಕಿತ್ಸೆ ನೀಡಲಾಗಿದೆ. ಚಿಕಿತ್ಸಾ ವೆಚ್ಚ ₹ 2.83 ಕೋಟಿಯನ್ನು ಖಾಸಗಿ ಆಸ್ಪತ್ರೆ-ಗಳಿಗೆ ಪಾವತಿಸಲಾಗಿದೆ.

ದೂರಿನ ಅನುಸಾರ ಕ್ರಮ

ಖಾಸಗಿ ಆಸ್ಪತ್ರೆಗಳು ಕೋವಿಡ್ ಚಿಕಿತ್ಸೆಗೆ ಅಧಿಕ ಹಣ ಪಡೆದಿರುವ ಬಗ್ಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ರಾಜ್ಯದ ಎಲ್ಲೆಡೆಯಿಂದ ದೂರುಗಳು ಬಂದಿವೆ. ಇ-ಮೇಲ್ ಮೂಲಕ 274 ಮಂದಿ 54 ಆಸ್ಪತ್ರೆಗಳ ವಿರುದ್ಧ ದೂರು ದಾಖಲಿಸಿದ್ದಾರೆ. ಕಾಲ್ ಸೆಂಟರ್ ಮೂಲಕ 2,401 ಮಂದಿ 200ಕ್ಕೂ ಅಧಿಕ ಆಸ್ಪತ್ರೆಗಳ ಬಗ್ಗೆ ಮಾಹಿತಿ ಒದಗಿಸಿದ್ದಾರೆ. 911 ಪ್ರಕರಣಗಳನ್ನು ಜಿಲ್ಲಾ ಮಟ್ಟದ ಕುಂದು ಕೊರತೆ ಸಮಿತಿಗೆ ವರ್ಗಾಯಿಸಲಾಗಿದೆ. ದೂರಿನ ಅನುಸಾರ ಹಣ ಹಿಂದಿರುಗಿಸಲು ಇಲಾಖೆ ಕ್ರಮ ವಹಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.


ಸಾಸ್ಟ್ ಪಾವತಿಸಿದ ಮೊತ್ತದ ವಿವರ

ಅವಧಿ	ಚಿಕಿತ್ಸೆ ಪಡೆದವರು	ಪಾವತಿಸಿದ ಮೊತ್ತ
ಮೊದಲ ಅಲೆ (ಮಾರ್ಚ್ 2020-ಮಾರ್ಚ್ 2021)	1,17,930	₹ 391.26 ಕೋಟಿ
ಎರಡನೇ ಅಲೆ (ಏಪ್ರಿಲ್ 2021-ಡಿಸೆಂಬರ್ 2021)	1,14,690	₹ 376.76 ಕೋಟಿ
ಮೂರನೇ ಅಲೆ (ಜನವರಿ 2022-ಮಾರ್ಚ್ 2022)	7,116	₹ 11.80 ಕೋಟಿ

ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದಂತೆ ರೋಗಿಗಳ ಕಡೆಯವರಿಂದಲೂ ಹಣ ಪಡೆದ ಖಾಸಗಿ ಆಸ್ಪತ್ರೆಗಳಿಗೆ ನೋಟಿಸ್ ನೀಡಲಾಗಿದೆ. ದೂರುಗಳನ್ನು ಪರಿಶೀಲಿಸಿ, ಕುಟುಂಬಸ್ಥರಿಗೆ ಆಸ್ಪತ್ರೆಗಳಿಂದ ಹಣ ಹಿಂದಿರುಗಿಸಲಾಗುತ್ತಿದೆ

ಡಾ.ಕೆ. ಸುಧಾಕರ್
ಆರೋಗ್ಯ ಸಚಿವ

ಕೋವಿಡ್: ಪ್ರಕರಣ ಹೆಚ್ಚಳ



ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗಿದ್ದು, ಗುರುವಾರ 2,329 ಮಂದಿ ಕೊರೊನಾ ಸೋಂಕಿತರಾಗಿರುವುದು ಹಾಗೂ ನಾಲ್ವರು ಮೃತಪಟ್ಟಿರುವುದು ದೃಢಪಟ್ಟಿದೆ.

ಒಂದು ದಿನದ ಅವಧಿಯಲ್ಲಿ 29,904 ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 7.78 ರಷ್ಟು ವರದಿಯಾಗಿದೆ. ಬೀದರ್ ಹೊರತುಪಡಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 1,606 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಮೈಸೂರಿನಲ್ಲಿ 168, ರಾಯಚೂರಿನಲ್ಲಿ 52, ಧಾರವಾಡ ಹಾಗೂ ರಾಮನಗರದಲ್ಲಿ ತಲಾ 48, ಹಾಸನದಲ್ಲಿ 47 ಹಾಗೂ ಬಳ್ಳಾರಿಯಲ್ಲಿ 44 ಪ್ರಕರಣಗಳು ಪತ್ತೆಯಾಗಿವೆ. ಉಳಿದೆಡೆ ಈ ಸಂಖ್ಯೆ 40ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ವರದಿಯಾಗಿವೆ.

ಕೋವಿಡ್ ಪೀಡಿತರಲ್ಲಿ ಧಾರವಾಡದ 71 ವರ್ಷದ ವೃದ್ಧ, ಕೊಪ್ಪಳದ 50 ವರ್ಷದ ಮಹಿಳೆ, ಹಾವೇರಿಯಲ್ಲಿ 30 ವರ್ಷ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ 35 ವರ್ಷದ ವ್ಯಕ್ತಿ ಮೃತಪಟ್ಟಿದ್ದಾರೆ.

ಕಥಾ ಸ್ಪರ್ಧೆ: ವಿಜೇತರಿಗೆ ಬಹುಮಾನ ವಿತರಣೆ

ಪ್ರಜಾವಾಣಿ ವಾರ್ತೆ



ಪೂರ್ಣಿಮಾ ಮಾಳಗಿಮನಿ ಅವರಿಗೆ ದಾಮೋದರ ಮಾವಜೊ ಬಹುಮಾನ ವಿತರಿಸಿದರು. ಸಂದೀಪ್ ನಾಯಕ್ ಇದ್ದಾರೆ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಪ್ರಯುಕ್ತ 'ಬುಕ್ ಬ್ರಹ್ಮ' ಆಯೋಜಿಸಿದ್ದ ಕಥಾ ಸ್ಪರ್ಧೆಯ ವಿಜೇತರಿಗೆ ನಗರದಲ್ಲಿ ನಡೆದ ಕಾರ್ಯಕ್ರಮಲ್ಲಿ ಕೊಂಕಣಿ ಕಥೆಗಾರ ದಾಮೋದರ ಮಾವಜೊ ಬಹುಮಾನ ವಿತರಿಸಿದರು.

'ವಿನ್ನರ್ ವಿನ್ನರ್ ಚಿಕನ್ ಡಿನ್ನರ್' ಕಥೆಗಾಗಿ ಪೂರ್ಣಿಮಾ ಮಾಳಗಿಮನಿ ಅವರು ಪ್ರಥಮ ಬಹುಮಾನ ಪಡೆದರು. 'ನೆರಳ ನರ್ತನ' ಕಥೆಗಾಗಿ ಬಸವಣ್ಣೆಪ್ಪ ಕಂಬಾರ ದ್ವಿತೀಯ ಬಹುಮಾನ, 'ಚಂದ್ರಶಾಲೆಯಲ್ಲಿ ನಿಂತ ತೇರು' ಕಥೆಗಾಗಿ 'ಮಯೂರ' ಮಾಸ ಪತ್ರಿಕೆಯ ಮುಖ್ಯ ಉಪಸಂಪಾದಕ ಸಂದೀಪ್ ನಾಯಕ್ ತೃತೀಯ ಬಹುಮಾನ ಪಡೆದರು. ಈ ಬಹುಮಾನಗಳು ಕ್ರಮವಾಗಿ ₹ 51 ಸಾವಿರ, ₹ 25 ಸಾವಿರ ಹಾಗೂ ₹ 15 ಸಾವಿರ ನಗದು ಒಳಗೊಂಡಿವೆ.

'ಕುಂತ್ಯಮ್ಮಳ ಮಾರಾಪು' ಕಥೆಗಾಗಿ ಅನುಪಮಾ ಪ್ರಸಾದ್, 'ಒಂಟಿ ಓಲೆಯ ಮುತ್ತು' ಕಥೆಗಾಗಿ ಮೌನೇಶ ಬಡಿಗೇರ ಹಾಗೂ 'ಬಾಗಿದ ರೆಪ್ಪೆಯ ಅಡಗುತಾಣದಲ್ಲಿ' ಕಥೆಗಾಗಿ ನಂದಿನಿ ಹೆದ್ದುರ್ಗ ಅವರು ತಲಾ ₹ 5 ಸಾವಿರ ಒಳಗೊಂಡ ಸಮಾಧಾನಕರ ಬಹುಮಾನ ಪಡೆದರು.

ವಿದ್ಯುತ್ ಖರೀದಿ ಒಪ್ಪಂದ ಮರುಪರಿಶೀಲನೆಗೆ ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಈ ಹಿಂದೆ ನಡೆದ ವಿದ್ಯುತ್ ಖರೀದಿ ಒಪ್ಪಂದದಲ್ಲಿ (ಪಿಪಿಎ) ದರ ನಿಗದಿ ವಿಧಾನ ಅವೈಜ್ಞಾನಿಕವಾಗಿದ್ದು, ಈ ಒಪ್ಪಂದಗಳನ್ನು ಮುಂದುವರಿಸುವ ಬಗ್ಗೆ ಕಾನೂನು ತಜ್ಞರ ಸಲಹೆ ಪಡೆಯಲು ಇಂಧನ ಇಲಾಖೆ ತೀರ್ಮಾನಿಸಿದೆ.

2010ರಿಂದ ಇಲ್ಲಿಯವರೆಗೆ ನಡೆದ ದೀರ್ಘಾವಧಿ ಖರೀದಿ ಒಪ್ಪಂದ ಈಗ ಇರುವ ಮಾರುಕಟ್ಟೆ ದರಕ್ಕಿಂತಲೂ ದುಪ್ಪಟ್ಟಾಗಿರುವುದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಅವರ ಗಮನಕ್ಕೆ ಬಂದ ಕಾರಣ ಪಿಪಿಎಗಳ ಹಿಂದಿರುವ ಲೆಕ್ಕಾಚಾರ ಪತ್ತೆ ಮಾಡಲು ಅಧಿಕಾರಿಗಳಿಗೆ ಸೂಚಿಸಿದರು.

'ಈ ಅವೈಜ್ಞಾನಿಕ ಒಪ್ಪಂದದಿಂದಾಗಿ ಎಸ್ಕಾಂಗಳಿಗೆ ಭಾರಿ ಪ್ರಮಾಣದಲ್ಲಿ ಹೊರೆಯಾಗುತ್ತಿದೆ. ಸರ್ಕಾರದ ಬೊಕ್ಕಸಕ್ಕೆ ಪ್ರತಿ ವರ್ಷವೂ ಆಗುತ್ತಿರುವ ನಷ್ಟ ತಪ್ಪಿಸಲು ಒಪ್ಪಂದ ಪುನರ್ ಪರಿಶೀಲನೆ ನಡೆಸುವುದು ಅನಿವಾರ್ಯ' ಎಂದು ಸುನಿಲ್ ಕುಮಾರ್ ಗುರುವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಪ್ರತಿಪಾದಿಸಿದರು.

ಪ್ರತಿ ಯೂನಿಟ್‌ಗೆ ₹5 ಕ್ಕೂ ಮೇಲ್ಪಟ್ಟಿರುವ ಖರೀದಿ ಒಪ್ಪಂದದ ಬಗ್ಗೆ ಪುನರ್ ಪರಿಶೀಲನೆ ನಡೆಸುವಂತೆ ಅವರು ಎಲ್ಲ ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಿದ್ದು, ಸದ್ಯದಲ್ಲೇ ಈ ಸಂಬಂಧ ಮತ್ತೊಂದು ಸುತ್ತಿನ ಸಭೆ ನಡೆಸುವುದಾಗಿಯೂ ಹೇಳಿದರು.

ಬಹುತೇಕ ಒಪ್ಪಂದಗಳು 26 ವರ್ಷಗಳಷ್ಟು ದೀರ್ಘಾವಧಿಯಾಗಿದ್ದು ಪ್ರತಿ ಯೂನಿಟ್‌ಗೆ ₹8.5 ರಿಂದ ₹11 ರವರೆಗೂ ದರ ನಿಗದಿ ಮಾಡಲಾಗಿದೆ. ಇದರಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಭಾರಿ ಪ್ರಮಾಣದ ಹೊರೆಯಾಗಿ ಪರಿಣಮಿಸಿದೆ ಎಂದು ಸುನಿಲ್ ಅಭಿಪ್ರಾಯ ವ್ಯಕ್ತಪಡಿಸಿದರು.

ಸಹಾಯಕ ಪ್ರಾಧ್ಯಾಪಕರ ನೇಮಕಾತಿ ● ಅಭ್ಯರ್ಥಿಗಳಿಗೆ ವಯೋಮಿತಿ ಮೀರುವ ಆತಂಕ

ಇನ್ನಷ್ಟು ಹುದ್ದೆ ಸೇರಿಸಿ; ಆಕಾಂಕ್ಷಿಗಳ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ 1,242 ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿರುವ ಮಧ್ಯೆಯೇ, ಇನ್ನಷ್ಟು ಹುದ್ದೆಗಳನ್ನು ಇದೇ ನೇಮಕಾತಿ ಪ್ರಕ್ರಿಯೆಗೆ ಸೇರ್ಪಡೆಗೊಳಿಸಬೇಕೆಂಬ ಒತ್ತಡ ಹೆಚ್ಚುತ್ತಿದೆ.

ರಾಜ್ಯದಲ್ಲಿ ಕಳೆದ 12 ವರ್ಷಗಳಲ್ಲಿ ಎರಡು ಬಾರಿ ಮಾತ್ರ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ನೇಮಕಾತಿ ನಡೆದಿದೆ. ಹಾಲಿ ನೇಮಕಾತಿ ಪ್ರಕ್ರಿಯೆಯಲ್ಲಿ ಸದ್ಯ ಖಾಲಿಯಿರುವ ಹುದ್ದೆಗಳಿಗೆ ಅನುಗುಣವಾಗಿ ಹುದ್ದೆಗಳು ಇಲ್ಲ. ಹೀಗಾಗಿ, ಹೆಚ್ಚುವರಿಯಾಗಿ 600ರಿಂದ 800 ಹುದ್ದೆಗಳನ್ನು ಇದೇ ನೇಮಕಾತಿಗೆ ಸೇರಿಸಬೇಕು ಎಂದು ಆಗ್ರಹಿಸಿದ್ದಾರೆ.

ಅಭ್ಯರ್ಥಿಗಳ ಈ ಮನವಿಗೆ ಸ್ಪಂದಿಸಿರುವ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ, ಈ ಬಗ್ಗೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳುವಂತೆ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಸೂಚಿಸಿದ್ದಾರೆ. ಅಲ್ಲದೆ, ವಿಧಾನಪರಿಷತ್ ಸದಸ್ಯರಾದ ಬಸವರಾಜ ಹೊರಟ್ಟಿ ಮತ್ತು ಶಶೀಲ್ ಜಿ. ನಮೋಶಿ ಅವರು ಸಿ.ಎಂಗೆ ಪತ್ರ ಬರೆದು, ಸದ್ಯ ನಡೆಯುವ ನೇಮಕಾತಿಗೆ ಇನ್ನೂ 448 ಹುದ್ದೆ ಸೇರಿಸಲು ಕೋರಿದ್ದಾರೆ.

ಸಹಾಯಕ ಪ್ರಾಧ್ಯಾಪಕ ಹುದ್ದೆ ವಿವರ		
ವಿಷಯ	ಹುದ್ದೆ ಖಾಲಿ	ಸದ್ಯ ನೇಮಕಾತಿ
ನಿರ್ವಹಣಾ ಶಾಸ್ತ್ರ	550	01
ವಾಣಿಜ್ಯ ಶಾಸ್ತ್ರ	1,507	134
ಕನ್ನಡ	989	105
ಇಂಗ್ಲಿಷ್	723	34
ರಸಾಯನ ವಿಜ್ಞಾನ	585	82

2015ರಲ್ಲಿ ನಡೆದಿದ್ದ ನೇಮಕಾತಿಯಲ್ಲಿ 1,298 ಹುದ್ದೆಗಳಿಗೆ ಮತ್ತೆ 862 ಹುದ್ದೆಗಳನ್ನು ಹೆಚ್ಚುವರಿಯಾಗಿ ಸೇರಿಸಲಾಗಿತ್ತು. ಆ ವರ್ಷ ಅರ್ಜಿ ಆಹ್ವಾನಿಸಿದ ಹುದ್ದೆಗಳು ಹೆಚ್ಚು ಇತ್ತಾದರೂ ಅರ್ಹ ಅಭ್ಯರ್ಥಿಗಳು ಕಡಿಮೆ ಇದ್ದರು. ಆದರೆ, ಪ್ರಸಕ್ತ ಸಾಲಿನಲ್ಲಿ ಅರ್ಜಿ ಆಹ್ವಾನಿಸಿರುವ ಹುದ್ದೆಗಳ ಸಂಖ್ಯೆ ಸಾವಿರದಷ್ಟು ಕಡಿಮೆ. ಆದರೆ, ಅರ್ಹ ಅಭ್ಯರ್ಥಿಗಳ ಸಂಖ್ಯೆ ಹೆಚ್ಚು ಇದೆ. ಹೀಗಾಗಿ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 10ನೇ ರ‍್ಯಾಂಕ್ ಗಳಿಸಿದ ಅಭ್ಯರ್ಥಿ ಕೂಡಾ ನೇಮಕಾತಿಯಿಂದ ಹೊರಗುಳಿಯುವ ಸಾಧ್ಯತೆ ಇದೆ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ರ‍್ಯಾಂಕ್ ಗಳಿಸಿದರೂ ಹುದ್ದೆ ಸಿಗುವುದು ಅನುಮಾನ. ಮುಂದಿನ ನೇಮಕಾತಿ ವೇಳೆಗೆ ವಯೋಮಿತಿ ಮೀರಲಿದೆ ಎನ್ನುವುದು ಹುದ್ದೆ ಆಕಾಂಕ್ಷಿಗಳ ಆತಂಕ.

‘ಸದ್ಯ ನಡೆದಿರುವ ನೇಮಕಾತಿಯಲ್ಲಿ ಕೆಲವು ವಿಷಯಗಳಿಗೆ ಕನಿಷ್ಠ ಸಂಖ್ಯೆಯ ಹುದ್ದೆಯೂ ಇಲ್ಲ. ನಿರ್ವಹಣಾ ಶಾಸ್ತ್ರ (ಮ್ಯಾನೇಜ್‌ಮೆಂಟ್) ವಿಷಯದಲ್ಲಿ ಕೇವಲ ಒಂದು ಹುದ್ದೆಗಷ್ಟೆ ನೇಮಕಾತಿಗೆ ನಡೆಯುತ್ತಿದೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 9 ಸಾವಿರದಿಂದ 10 ಸಾವಿರ ಪೂರ್ಣಕಾಲಿಕ ಹುದ್ದೆಗಳಿದ್ದು, ಕೇವಲ 1,242 ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದೆ. ಈ ಹುದ್ದೆಗಳಿಗೆ ಅರ್ಹತೆಯಾದ ನೆಟ್, ಸೆಟ್, ಪಿಎಚ್‌.ಡಿ ಪಡೆದಿರುವ ಬಹುತೇಕ ಅರ್ಹ ಅಭ್ಯರ್ಥಿಗಳ ವಯೋಮಿತಿ ಮೀರುತ್ತಿದೆ. ಹೀಗಾಗಿ, ಪ್ರಸಕ್ತ ನೇಮಕಾತಿಯಲ್ಲಿ ಹುದ್ದೆಗಳ ಸಂಖ್ಯೆ ಹೆಚ್ಚಿಸಬೇಕು’ ಎಂದು ಅಭ್ಯರ್ಥಿಯೊಬ್ಬರು ಆಗ್ರಹಿಸಿದರು.

ಮಹಿಳೆಯರಿಗಾಗಿ ‘ಭೂಮಿಕಾ ಕ್ಲಬ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಜೀವನ ಶೈಲಿಯನ್ನು ಉತ್ಕೃಷ್ಟಗೊಳಿಸಲು ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ವಿಶೇಷ ವೇದಿಕೆ ‘ಭೂಮಿಕಾ ಕ್ಲಬ್’ ನಿರ್ಮಿಸಿದ್ದು, ಇದೇ 26ರ ಮಧ್ಯಾಹ್ನ 2.30ಕ್ಕೆ ಈ ಕ್ಲಬ್ ಉದ್ಘಾಟನೆಯಾಗಲಿದೆ.

ಅಶೋಕ ನಗರದಲ್ಲಿರುವ ಸೇಂಟ್ ಜೋಸೆಫ್ಸ್ ಮ್ಯಾನೇಜ್ಮೆಂಟ್ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಗಾಯಕಿ ಎಂ.ಡಿ. ಪಲ್ಲವಿ ಹಾಗೂ ಕಿರುತೆರೆ ಕಲಾವಿದೆ ರಂಜನಿ ರಾಘವನ್ ‘ಭೂಮಿಕಾ ಕ್ಲಬ್’ ಉದ್ಘಾಟಿಸಲಿದ್ದಾರೆ. ಕೂದಲು ಮತ್ತು ಚರ್ಮ ಆರೋಗ್ಯದ ಬಗ್ಗೆ ಮಣಿಪಾಲ್ ಆಸ್ಪತ್ರೆಯ ವೈದ್ಯರಾದ ಡಾ. ದೀಪಾ ಕೃಷ್ಣಮೂರ್ತಿ ಹಾಗೂ ಡಾ. ಸುಚಿಸ್ಮಿತಾ ರಾಜಮಾನ್ಯ ತಿಳಿಸಿಕೊಡಲಿದ್ದಾರೆ.

ಭೂಮಿಕಾ ಕ್ಲಬ್

ವಿವರ ಹಾಗೂ ಹೆಸರು ನೋಂದಣಿಗೆ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಫ್ಯಾಷನ್ ಬಗ್ಗೆ ಶಚಿನ ಹೆಗ್ಗಾರ್, ಮೇಕಪ್ ಬಗ್ಗೆ ಸುಷ್ಮಾ ನಾಣಯ್ಯ ಮಾತನಾಡಲಿದ್ದಾರೆ. ತಾಜ್ ಹೋಟೆಲ್‌ನ ಬಾಣಸಿಗ ಆ್ಯಂಡ್ರಿಯಾ ಜುಡಿತ್ ಡಯಾಸ್ ಅವರು ಅಡುಗೆ ಬಗ್ಗೆ ತಿಳಿಸಿಕೊಡಲಿದ್ದಾರೆ. ಅಶ್ವಿನಿ ರವೀಂದ್ರ ಅವರಿಂದ ಸ್ಟ್ಯಾಂಡಪ್ ಕಾಮಿಡಿ ನಡೆಯಲಿದೆ. ಹಣಕಾಸು ಮತ್ತು ಜೀವನಶೈಲಿಗೆ ಸಂಬಂಧಿಸಿದಂತೆ ತರಬೇತಿಗಳೂ ಇರಲಿವೆ. ವಿವಿಧ ಸ್ಪರ್ಧೆಗಳನ್ನೂ ನಡೆಸಲಾಗುತ್ತದೆ. ಇಲ್ಲಿ ಹೊಸ ಸ್ನೇಹಿತರ ಸಂಗಮಕ್ಕೆ ಅವಕಾಶವಿದ್ದು, ಹರಟೆ, ಉಪಾಹಾರವೂ ಇರಲಿದೆ.

ಸ್ಕೂರ್ ಚಾಕಲೇಟ್‌ನಿಂದ ಬಹುಮಾನ ಹಾಗೂ ಉಡುಗೊರೆ ಗೆಲ್ಲುವ ಅವಕಾಶ ಇದೆ. ಹೆಸರು ನೋಂದಾಯಿಸಿದವರಿಗೆ ಮಾತ್ರ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಕಿದ್ವಾಯಿ: ರಾಮಚಂದ್ರ ಮುಂದುವರಿಕೆಗೆ ಆಗ್ರಹ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ಅವರ ಅಧಿಕಾರಾವಧಿ ವಿಸ್ತರಿಸಲು ಸರ್ಕಾರಕ್ಕೆ ಸಂಸ್ಥೆಯ ಸಿಬ್ಬಂದಿ ಆಗ್ರಹಿಸಿದ್ದಾರೆ.

‘ರಾಮಚಂದ್ರ ಅವರ ಅಧಿಕಾರವಧಿ ಇದೇ 28ಕ್ಕೆ ಕೊನೆಗೊಳ್ಳಲಿದೆ. ಅವರನ್ನು ನಿರ್ದೇಶಕ ಸ್ಥಾನದಲ್ಲಿ ಮುಂದುವರಿಸುವುದರಿಂದ ಬಡ ರೋಗಿಗಳಿಗೆ ಗುಣಮಟ್ಟದ ಸೇವೆ ದೊರೆಯಲಿದೆ. ಕಿದ್ವಾಯಿ ಸಂಸ್ಥೆಯನ್ನು ವಿಶ್ವದರ್ಜೆಗೆ ಏರಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ದೇಶದಲ್ಲಿಯೇ ಕ್ಯಾನ್ಸರ್ ರೋಗಕ್ಕೆ ಅತ್ಯುತ್ತಮ ಗುಣಮಟ್ಟದ ಚಿಕಿತ್ಸೆಯನ್ನು ಸಂಸ್ಥೆ ನೀಡುತ್ತಿದೆ. ಇನ್ಫೊಸಿಸ್ ಸೇರಿ ಅನೇಕ ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ಸಂಸ್ಥೆಯನ್ನು ಅವರು ಅಭಿವೃದ್ಧಿಪಡಿಸಿದ್ದಾರೆ’ ಎಂದು ಸಿಬ್ಬಂದಿ ತಿಳಿಸಿದ್ದಾರೆ.

ಕಛೇರಿಗೆ ಸಂಪರ್ಕಿಸಿ

ಬೆಂಗಳೂರು: ಗಣೇಶೋತ್ಸವ, ರಾಜ್ಯೋತ್ಸವ, ಮದುವೆ, ಅಣ್ಣಮ್ಮ ಉತ್ಸವದಂತಹ ಸಮಾರಂಭಗಳಲ್ಲಿ ಕಾರ್ಯಕ್ರಮ ನೀಡಲು ನುರಿತ ಕಲಾವಿದರಿರುವ ಮಾರ್ಗ ಜ್ಯೋತಿ ಅಂಧರ ವಾದ್ಯ ಗೋಷ್ಠಿಗಾಗಿ ಸಂಪರ್ಕಿಸಬಹುದು ಎಂದು ಮಾರ್ಗ ಜ್ಯೋತಿ ಕ್ಷೇಮಾಭಿವೃದ್ಧಿ ಟ್ರಸ್ಟ್ ವಿನಂತಿಸಿಕೊಂಡಿದೆ. ಈ ಕುರಿತ ಹೆಚ್ಚಿನ ಮಾಹಿತಿಗಾಗಿ 9342321212 ಅನ್ನು ಸಂಪರ್ಕಿಸಿ.

ಲೇಖಕಿಯರ ಸಂಘದ ಚುನಾವಣೆ ಸೆ.18ಕ್ಕೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘದ ಚುನಾವಣೆಯನ್ನು ಸೆ. 18ಕ್ಕೆ ಮುಂದೂಡಲಾಗಿದೆ. ಅಂದು ಬೆಂಗಳೂರಿನ ಎನ್.ಆರ್. ಕಾಲೊನಿಯಲ್ಲಿರುವ ಬಿ.ಎಂ.ಶ್ರೀ ಪ್ರತಿಷ್ಠಾನದ ಸಭಾಂಗಣದಲ್ಲಿ ಚುನಾವಣೆ ನಡೆಯಲಿದೆ ಎಂದು ಸಂಘದ ಅಧ್ಯಕ್ಷೆ ವನಮಾಲಾ ಸಂಪನ್ನಕುಮಾರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅವಧಿ ವಿಸ್ತರಣೆ

ಬೆಂಗಳೂರು: ‘ಡಾ. ಬಿ. ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ’ಯ ವಿವಿಧ ಕೋರ್ಸ್‌ಗಳ ಪ್ರವೇಶಾತಿ ಅವಧಿಯನ್ನು ವಿಸ್ತರಿಸಲಾಗಿದೆ. ಅರ್ಜಿ ಸಲ್ಲಿಸುವ ಅವಧಿಯನ್ನು ಆ. 20ರವರೆಗೆ ವಿಸ್ತರಿಸಲಾಗಿದೆ. ವಿವರಗಳಿಗೆ www.base.ac.in ವೆಬ್‌ಸೈಟ್ ಭೇಟಿ ನೀಡಬಹುದಾಗಿದೆ.

ನೂತನ ಜವಳಿ ನೀತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಕರ್ನಾಟಕದಲ್ಲಿ ಸ್ಥಾಪನೆಯಾಗುವ ಸಿದ್ಧ ಉಡುಪು ತಯಾರಿಕಾ ಘಟಕಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲು ರಾಜ್ಯ ಸರ್ಕಾರ ಮುಂದಾಗಿದ್ದು, ಹೊಸ ಜವಳಿ ನೀತಿಯಲ್ಲಿ ಈ ಅಂಶವನ್ನು ಪ್ರಕಟಿಸಿದೆ.

ಕಲ್ಯಾಣ ಕರ್ನಾಟಕದ ಜಿಲ್ಲೆಗಳಾದ ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳ ಜಿಲ್ಲೆಯಲ್ಲಿನ ಸಿದ್ಧ ಉಡುಪು ತಯಾರಿಕಾ ಘಟಕಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ನೀಡುವ ವೇತನ ಪ್ರೋತ್ಸಾಹ ಧನವನ್ನು ₹1500ರಿಂದ ₹3 ಸಾವಿರಕ್ಕೆ ಹೆಚ್ಚಿಸಲಾಗಿದೆ. ರಾಜ್ಯದ ಇತರೆಡೆಯ ಘಟಕಗಳಲ್ಲಿನ ಕಾರ್ಮಿಕರ ವೇತನ ಪ್ರೋತ್ಸಾಹಧನವನ್ನು ₹1 ಸಾವಿರದಿಂದ ₹2 ಸಾವಿರಕ್ಕೆ ಹೆಚ್ಚಳ ಮಾಡಿದೆ.

₹1,518 ಕೋಟಿ ಹೂಡಿಕೆಗೆ ಒಪ್ಪಂದ

ಹೊಸ ನೀತಿ ಜಾರಿಗೆ ಬಂದ ಕೂಡಲೇ ಜವಳಿ ಉದ್ಯಮದಲ್ಲಿ ₹1,518 ಕೋಟಿ ಬಂಡವಾಳ ಹೂಡಲು ಸಿದ್ಧ ಉಡುಪು ತಯಾರಿಕಾ ಕಂಪನಿಗಳು ಮುಂದೆ ಬಂದಿದ್ದು, ಈ ಪೈಕಿ ನಾಲ್ಕು ಕಂಪನಿಗಳು ಗುರುವಾರ ಒಡಂಬಡಿಕೆ ಮಾಡಿಕೊಂಡವು.

₹20 ಕೋಟಿ ಬಂಡವಾಳ ಹೂಡಿ 2 ಸಾವಿರ ಉದ್ಯೋಗ ಸೃಷ್ಟಿ ಮಾಡಲಾಗುವುದು ಎಂದು ಗೋಕುಲ್ ದಾಸ್ ಎಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್ ಘೋಷಿಸಿತು. ₹ 346 ಕೋಟಿ ಹೂಡಿಕೆ ಮಾಡಲಿರುವ ಮಂಜುಶ್ರೀ ಸ್ಪಿನ್‌ಟೆಕ್, 325 ಉದ್ಯೋಗ ಸೃಷ್ಟಿ ಮಾಡುವುದಾಗಿ ಪ್ರಕಟಿಸಿತು.

₹27 ಕೋಟಿ ಹೂಡಲು ಒಪ್ಪಂದ ಮಾಡಿಕೊಂಡ ಯಾರ್‌ಕಾರ್ ಫ್ಯಾಬ್ರಿಕ್, 100 ಜನರಿಗೆ ಉದ್ಯೋಗ ನೀಡುವುದಾಗಿ ತಿಳಿಸಿತು. ಟೆಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ₹45 ಕೋಟಿ ಬಂಡವಾಳ ಹೂಡಿ 2 ಸಾವಿರ ಜನರಿಗೆ ಉದ್ಯೋಗ ಕಲ್ಪಿಸುವುದಾಗಿ ಪ್ರಕಟಿಸಿದವು.

ಈ ನೀತಿ ಬಗ್ಗೆ ಉದ್ಯಮಿಗಳೊಂದಿಗೆ ಗುರುವಾರ ಸಂವಾದ ನಡೆಸಿದ ಜವಳಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ‘ಜವಳಿ ಉದ್ಯಮಕ್ಕೆ ಪ್ರೋತ್ಸಾಹ ನೀಡಲು ಹೊಸ ನೀತಿ ಪ್ರಕಟಿಸಲಾಗಿದೆ. ಬದಲಾವಣೆ ಬಯಸಿ ಸಲಹೆಗಳನ್ನು ನೀಡಿದರೆ ಪರಿಶೀಲನೆ ನಡೆಸಲು ಸರ್ಕಾರ ಸಿದ್ಧವಿದೆ’ ಎಂದರು.

ಸದನ ಸಮಿತಿ ಅಧಿಕಾರಕ್ಕೆ ಹೈಕೋರ್ಟ್ ಅಸ್ತು

ಬೆಂಗಳೂರು: ‘ನರ್ಸಿಂಗ್ ಕಾಲೇಜು ಮತ್ತು ಇತರೆ ಆರೋಗ್ಯ ಸಂಬಂಧಿ ಸಂಸ್ಥೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವ ಅಧಿಕಾರವನ್ನು ವಿಶೇಷ ಸದನ ಸಮಿತಿ ಹೊಂದಿದೆ’ ಎಂದು ಹೈಕೋರ್ಟ್ ಆದೇಶಿಸಿದೆ.

ಕರ್ನಾಟಕ ನರ್ಸಿಂಗ್ ಸಂಸ್ಥೆಗಳ ಒಕ್ಕೂಟ ಹಾಗೂ ಹೈದರಾಬಾದ್ ಕರ್ನಾಟಕ ನರ್ಸಿಂಗ್ ಆಡಳಿತ ಮಂಡಳಿ ಸಂಸ್ಥೆಗಳು ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ನ್ಯಾಯಪೀಠ ವಿಚಾರಣೆ ನಡೆಸಿ, ಕರ್ನಾಟಕ ವಿಧಾನಪರಿಷತ್ ಕಲಾಪ ಮತ್ತು ನಡಾವಳಿ ನಿಯಮ 242(ಎ) ಉಪ ನಿಯಮ 1ರಡಿ ಸದನ ಸಮಿತಿ ರಚನೆಯನ್ನು ಎತ್ತಿಹಿಡಿದಿದೆ.

‘ಸಂಸ್ಥೆಗಳು, ಭಾರತೀಯ ನರ್ಸಿಂಗ್ ಮಂಡಳಿಯ ನಿರ್ದೇಶನಗಳಂತೆ ನಡೆಯುತ್ತಿದೆಯೇ, ಅಗತ್ಯ ಸೌಕರ್ಯ ಹೊಂದಿವೆಯೋ ಇಲ್ಲವೋ ಎಂಬ ಬಗ್ಗೆ ಪರಿಶೀಲಿಸಲು ಸದನ ಸಮಿತಿ ಅಧಿಕಾರ ಹೊಂದಿದೆ. ಸಮಿತಿ ದಾಖಲೆ, ಸಾಕ್ಷ್ಯಗಳನ್ನೂ ಪರಿಶೀಲಿಸಬಹುದಾಗಿದೆ’ ಎಂದು ನ್ಯಾಯಪೀಠ ವಿವರಿಸಿದೆ.

‘ಪಂಚಾಯತ್ ರಾಜ್ ಪರಿಣಾಮಕಾರಿ ಜಾರಿ ಇಚ್ಛಾಶಕ್ತಿ ಅಗತ್ಯ’

ಬೆಂಗಳೂರು: ‘ಕರ್ನಾಟಕ ಅತ್ಯುತ್ತಮ ಪಂಚಾಯತ್ ರಾಜ್ ಕಾಯ್ದೆ ವ್ಯವಸ್ಥೆಯನ್ನು ಹೊಂದಿದ್ದರೂ ಪರಿಣಾಮಕಾರಿ ಜಾರಿಗೆ ರಾಜಕೀಯ ಇಚ್ಛಾಶಕ್ತಿ ಕೊರತೆ ಇದೆ’ ಎಂದು ಕಾಂಗ್ರೆಸ್ ಮುಖಂಡ ಮಣಿಶಂಕರ್ ಅಯ್ಯರ್ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ‘ಕಾಂಗ್ರೆಸ್ ಹೊರತಾದ ಸರ್ಕಾರಗಳು ಅಧಿಕಾರಕ್ಕೆ ಬಂದಾಗ ಈ ಕಾಯ್ದೆಯನ್ನು ತ್ವರಿತವಾಗಿ ಜಾರಿಗೊಳಿಸದ ಕಾರಣ ಅದರ ಘನತೆ ಅರಿಯದೆ ನಿರ್ಲಕ್ಷಿಸಲಾಗಿದೆ’ ಎಂದು ಹೇಳಿದರು.

‘1993 ಹಾಗೂ ಅದಕ್ಕೂ ಮೊದಲ ಪಂಚಾಯತ್‌ರಾಜ್ ವ್ಯವಸ್ಥೆಗೂ, ಈಗಿನ ವ್ಯವಸ್ಥೆಗೂ ಭಾರಿ ವ್ಯತ್ಯಾಸವಿದೆ. ರಾಜೀವ್ ಗಾಂಧಿ ಅವರು ಸಂವಿಧಾನಕ್ಕೆ ತಿದ್ದುಪಡಿ ತಂದು ವ್ಯವಸ್ಥೆಗೆ ಸಂವಿಧಾನಿಕ ಪಾವಿತ್ರ್ಯ ತಂದುಕೊಟ್ಟರು. ಹೀಗಾಗಿ, ಈ ವ್ಯವಸ್ಥೆ ಕುಗ್ಗಿಸಬಹುದೇ ಹೊರತು ನಿರ್ನಾಮ ಸಾಧ್ಯವಿಲ್ಲ’ ಎಂದರು.

ಪಂಚಾಯತ್ ರಾಜ್ ವ್ಯವಸ್ಥೆ ಯ ಹಕ್ಕು, ಸವಲತ್ತುಗಳನ್ನು ಅವರಿಗೆ ತಿಳಿಸುವುದು ಹೇಗೆ ಎಂಬ ಬಗ್ಗೆ ಕಾಂಗ್ರೆಸ್ ನಾಯಕರ ಜೊತೆಗೂ ಅವರು ಚರ್ಚಿಸಿದರು.

ಒಂದೇ ಕುಟುಂಬದ ಮೂವರ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಣನಕುಂಟೆ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಒಂದೇ ಕುಟುಂಬದ ಮೂವರ ಮೃತದೇಹಗಳು ಗುರುವಾರ ಮಧ್ಯಾಹ್ನ ಪತ್ತೆಯಾಗಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

‘ಚುಂಚನಕಟ್ಟೆ ಎಸ್‌ಬಿಐ ಲೇಔಟ್ ನಿವಾಸಿ ಮಹೇಶ್ ಕುಮಾರ್ (44), ಪತ್ನಿ ಜ್ಯೋತಿ (29) ಹಾಗೂ ಮಗ ನಂದೀಶ್ ಗೌಡ (9) ಅವರ ಮೃತದೇಹ ಪತ್ತೆಯಾಗಿದೆ. ಮಗನನ್ನು ಕೊಂದು ದಂಪತಿ ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.



ಮಗನ ಜೊತೆ ಮಹೇಶ್‌ಕುಮಾರ್ ಹಾಗೂ ಜ್ಯೋತಿ

‘ಮಹೇಶ್‌ಕುಮಾರ್ ಅವರು ಗುತ್ತಿಗೆ ಆಧಾರದಲ್ಲಿ ಎಲೆಕ್ಟ್ರಿಷಿಯನ್ ಕೆಲಸ ಮಾಡುತ್ತಿದ್ದರು. ಗಂಭೀರ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಅವರು, ಅದರಿಂದ ಬೇಸತ್ತು ಕುಟುಂಬ ಸಮೇತ ಆತ್ಮಹತ್ಯೆ ಮಾಡಿಕೊಂಡಿರಬಹುದು’ ಎಂದು ತಿಳಿಸಿವೆ.

‘ಗುರುವಾರ ಬೆಳಿಗ್ಗೆಯಿಂದ ಕುಟುಂಬದವರು ಹೊರಗೆ ಬಂದಿರಲಿಲ್ಲ. ಅನುಮಾನಗೊಂಡ ಸ್ಥಳೀಯರು, ಮನೆ ಬಳಿ ಹೋಗಿ ನೋಡಿದಾಗ ಮೃತದೇಹಗಳು ಕಂಡಿದ್ದವು’ ಎಂದು ಹೇಳಿವೆ.

‘ಕೊಠಡಿಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಮಹೇಶ್ ಮೃತ ದೇಹವಿತ್ತು. ಪತ್ನಿ ಹಾಗೂ ಮಗನ ಮೃತದೇಹಗಳು ಮತ್ತೊಂದು ಕೊಠಡಿಯಲ್ಲಿದ್ದವು. ಅವರಿಬ್ಬರು ವಿಷ ಸೇವನೆಯಿಂದ ಮೃತಪಟ್ಟಿರುವ ಅನುಮಾನವಿದೆ. ಮನೆಯಲ್ಲಿ ಮರಣಪತ್ರ ಸಿಕ್ಕಿದ್ದು, ಪರಿಶೀಲಿಸಲಾಗುತ್ತಿದೆ’ ಎಂದೂ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಪೊಲೀಸ್ ವಶಕ್ಕೆ

ಸಿ.ಎಂ ಮನೆ ಮುತ್ತಿಗೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ವಾರ್ಡ್ ಮೀಸಲಾತಿ ಹಂಚಿಕೆಯಲ್ಲಿ ಅನ್ಯಾಯವಾಗಿದೆ’ ಎಂದು ಆರೋಪಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನೆಗೆ ಮುತ್ತಿಗೆ ಹಾಕಲು ಹೊರಟಿದ್ದ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರನ್ನು ಪೊಲೀಸರು ಗುರುವಾರ ವಶಕ್ಕೆ ಪಡೆದರು.

ನಗರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾರ್ಯಕರ್ತರು, ಸ್ವಾತಂತ್ರ್ಯ ಉದ್ಯಾನದಲ್ಲಿ ಬಹಿರಂಗ ಸಭೆ ನಡೆಸಿದರು. ರಾಜ್ಯ ಸರ್ಕಾರದ ವಿರುದ್ಧ ಘೋಷಣಾ ಫಲಕ ಪ್ರದರ್ಶಿಸಿದರು. ಸಭೆ ಬಳಿಕ ಮೆರವಣಿಗೆ ಮೂಲಕ ಮುಖ್ಯಮಂತ್ರಿ ಮನೆಯತ್ತ ಹೊರಟಿದ್ದರು.

ಉದ್ಯಾನಕ್ಕೆ ಹೊಂದಿಕೊಂಡಿರುವ ಶೇಷಾದ್ರಿ ರಸ್ತೆಯಲ್ಲಿ ಕಾರ್ಯಕರ್ತರನ್ನು ತಡೆದ ಪೊಲೀಸರು, ‘ಮೆರವಣಿಗೆಗೆ ಅವಕಾಶವಿಲ್ಲ. ದಯವಿಟ್ಟು ವಾಪಸು ಹೋಗಿ’ ಎಂದು ಕೋರಿದರು.



‘ಬಿಬಿಎಂಪಿ ವಾರ್ಡ್ ಮೀಸಲಾತಿ ಹಂಚಿಕೆಯಲ್ಲಿ ಅನ್ಯಾಯವಾಗಿದೆ’ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಪೊಲೀಸರ ಮಾತಿಗೆ ಒಪ್ಪದ ಪ್ರತಿಭಟನಕಾರರು, ಮುಖ್ಯಮಂತ್ರಿ ಮನೆಯತ್ತ ಮುನ್ನುಗ್ಗಿದರು. ಈ ವೇಳೆ ತಳ್ಳಾಟ ಉಂಟಾಯಿತು. ಆಗಲೇ ಕಾರ್ಯಕರ್ತರನ್ನು ವಶಕ್ಕೆ ಪಡೆದ ಪೊಲೀಸರು, ವಾಹನಗಳಲ್ಲಿ ಕರೆದೊಯ್ದರು. ಕೆಲ ಗಂಟೆಗಳ ಬಳಿಕ ಎಲ್ಲರನ್ನೂ ಬಿಟ್ಟು ಕಳುಹಿಸಿದರು.

ಬೆಂಗಳೂರು ಕೇಂದ್ರ, ದಕ್ಷಿಣ ಮತ್ತು ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

3 ಸಾವಿರ ಆಕ್ಷೇಪಣೆಗೆ ಸಿಗದ ಮನ್ನಣೆ: ಶಾಸಕ ರಾಮಲಿಂಗಾರೆಡ್ಡಿ, ‘ಬಿಬಿಎಂಪಿ ವಾರ್ಡ್ ಮೀಸಲಾತಿ ಅವೈಜ್ಞಾನಿಕವಾಗಿದೆ. ಇದರ ವಿರುದ್ಧ 3 ಸಾವಿರಕ್ಕೂ ಹೆಚ್ಚು ಆಕ್ಷೇಪಣಾ ಅರ್ಜಿಗಳು ಸಲ್ಲಿಕೆಯಾಗಿವೆ. ಇವುಗಳಿಗೆ ಮನ್ನಣೆ ನೀಡದ ಬಿಜೆಪಿ ಸರ್ಕಾರ, ಜನವಿರೋಧಿ ನೀತಿ ಅನುಸರಿಸುತ್ತಿದೆ’ ಎಂದು ದೂರಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ‘ಮೀಸಲಾತಿ ಪಟ್ಟಿ, ರಾಜಕೀಯ ಪ್ರೇರಿತವಾಗಿದೆ. ಆರ್‌ಎಸ್‌ಎಸ್ ಹೇಳಿದಂತೆ ಮೀಸಲಾತಿ ಪಟ್ಟಿ ಮಾಡಲಾಗಿದೆ. ಈ ಪಟ್ಟಿಯನ್ನು ಕೂಡಲೇ ಹಿಂಪಡೆಯಬೇಕು. ಇದರ ವಿರುದ್ಧ ನಮ್ಮ ಹೋರಾಟ ನಿರಂತರ’ ಎಂದರು.

ಬುದ್ಧಿವಾದ ಹೇಳಿದ್ದಕ್ಕೆ ಇರಿದು ಕೊಲೆ

ಬೆಂಗಳೂರು: ‘ದುಶ್ಚಟ ಮಾಡಿ ಸ್ನೇಹಿತರನ್ನು ಹಾಳು ಮಾಡಬೇಡ’ ಎಂದು ಬುದ್ಧಿವಾದ ಹೇಳಿದ್ದಕ್ಕೆ ಅಜೀಂವುಲ್ಲಾ (43) ಎಂಬುವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಈ ಸಂಬಂಧ ರಾಜಗೋಪಾಲ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಹೆಗ್ಗನಹಳ್ಳಿಯ ಮಾರುತಿನಗರ ನಿವಾಸಿ ಅಜೀಂವುಲ್ಲಾ, ಜಾತ್ರೆಗಳಲ್ಲಿ ರಾಟೆ ಚಕ್ರ (ಜೋಕಾಲಿ) ನಿರ್ವಹಣೆ ಕೆಲಸ ಮಾಡುತ್ತಿದ್ದರು. ಅವರನ್ನು ಬುಧವಾರ ರಾತ್ರಿ ಕೊಲೆ ಮಾಡಲಾಗಿದ್ದು, ಪರಿಚಯಸ್ಥ ಯುವಕನೇ ಕೃತ್ಯ ಎಸಗಿ ಪರಾರಿಯಾಗಿರುವ ಮಾಹಿತಿ ಇದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಯುವಕ, ಮದ್ಯಪಾನ, ಧೂಮಪಾನ ಮಾಡಿ, ಸ್ನೇಹಿತರಿಗೂ ದುಶ್ಚಟ ಮಾಡುವಂತೆ ಪ್ರಚೋದಿಸುತ್ತಿದ್ದ. ರಸ್ತೆಯಲ್ಲಿ ಹೊರಟಿದ್ದ ಯುವಕನನ್ನು ತಡೆದಿದ್ದ ಅಜೀಂವುಲ್ಲಾ, ‘ಸ್ನೇಹಿತರನ್ನು ಹಾಳು ಮಾಡಬೇಡಿ’ ಎಂದು ಬುದ್ಧಿವಾದ ಹೇಳಿ ಕಪಾಳಕ್ಕೆ ಹೊಡೆದಿದ್ದರು. ಸಿಟ್ಟಾಗಿದ್ದ ಯುವಕ, ಮನೆಗೆ ಹೋಗಿ ತನ್ನ ತಂದೆ ಕರೆದುಕೊಂಡು ಬಂದಿದ್ದ. ಅದೇ ಸಂದರ್ಭದಲ್ಲೇ ಯುವಕ, ತನ್ನ ಬಳಿಯ ಚಾಕುವಿನಿಂದ ಅಜೀಂವುಲ್ಲಾ ಎದೆಗೆ ಇರಿದಿದ್ದ’ ಎಂದೂ ಮೂಲಗಳು ಹೇಳಿವೆ.

ಕಾರ್ಮೆಲ್ ಕಾಲೇಜು ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯೋತ್ಸವ ದಿನ ಅನುಮತಿ ಪಡೆಯದೇ ಕಾರ್ಯಕ್ರಮ ಆಯೋಜಿಸಿ ಸಾರ್ವಜನಿಕರಿಗೆ ತೊಂದರೆ ಉಂಟು ಮಾಡಿದ್ದ ಆರೋಪದಡಿ ಮೌಂಟ್ ಕಾರ್ಮೆಲ್ ಕಾಲೇಜಿನ ಪ್ರಾಂಶುಪಾಲ ಹಾಗೂ ಆಡಳಿತ ಮಂಡಳಿ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಆಗಸ್ಟ್ 15ರಂದು ಮಧ್ಯಾಹ್ನ ಕಾಲೇಜು ಎದುರು 6 ಸಾವಿರದಿಂದ 8 ಸಾವಿರ ಜನ ಸೇರಿದ್ದರು. ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಲಾಗಿತ್ತು. ಅಲ್ಲಿಯ ಜನರು ನೀಡಿದ್ದ ಹೇಳಿಕೆ ಆಧರಿಸಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸ್ವಾತಂತ್ರ್ಯೋತ್ಸವ ದಿನದಂದು ಕಾಲೇಜಿನಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲು ತೀರ್ಮಾನಿಸಲಾಗಿತ್ತು. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಟಿಕೆಟ್ ಇರಿಸಲಾಗಿತ್ತು. ವಿದ್ಯಾರ್ಥಿಗಳಿಗೆ ತಲಾ 20 ಟಿಕೆಟ್ ನೀಡಿದ್ದ ಆಡಳಿತ ಮಂಡಳಿ, ₹ 100 ದರದಲ್ಲಿ ಮಾರುವಂತೆ ತಿಳಿಸಿತ್ತು. ಎಲ್ಲ ವಿದ್ಯಾರ್ಥಿಗಳು ಸೇರಿ 10,000 ಟಿಕೆಟ್ ಮಾರಿದ್ದರು.’

‘ಟಿಕೆಟ್ ಪಡೆದಿದ್ದ ಬಹುತೇಕರು ಆಗಸ್ಟ್ 15ರಂದು ಕಾಲೇಜು ಬಳಿ ಬಂದಿದ್ದರು. ಸಭಾಭವನ ಭರ್ತಿಯಾಗಿದ್ದರಿಂದ, ಕ್ರಮೇಣ ಪ್ರವೇಶ ನಿರ್ಬಂಧಿಸಲಾಗಿತ್ತು. ಗೇಟ್ ಬಂದ್ ಮಾಡಿದ್ದರಿಂದ, 6 ಸಾವಿರದಿಂದ 8 ಸಾವಿರ ಜನ ಹೊರಗೆ ರಸ್ತೆ ಮೇಲೆ ನಿಂತಿದ್ದರು. ಒಳಗೆ ಬಿಡುವಂತೆ ಒತ್ತಾಯಿಸಿ ಘೋಷಣೆ ಕೂಗುತ್ತಿದ್ದರು. ಸಾರ್ವಜನಿಕರ ವಾಹನ ಓಡಾಟಕ್ಕೂ ಅಡ್ಡಿಪಡಿಸಿದ್ದರು. ಹೆಚ್ಚಿನ ಸಿಬ್ಬಂದಿ ಸ್ಥಳಕ್ಕೆ ಹೋಗಿ ಪರಿಸ್ಥಿತಿ ನಿಭಾಯಿಸಿದ್ದರು.’

‘ಕಾರ್ಯಕ್ರಮ ನಡೆಸಲು ಕಾಲೇಜಿನವರು ಅನುಮತಿ ಪಡೆದಿರಲಿಲ್ಲ. ಅಕ್ರಮವಾಗಿ ತಡೆಯುವುದು (ಐಪಿಸಿ 341), ಸಾರ್ವಜನಿಕರ ಸಂಚಾರಕ್ಕೆ ಅಡ್ಡಿ (ಐಪಿಸಿ 283) ಹಾಗೂ ಅಕ್ರಮ ಕೂಟ (ಐಪಿಸಿ 143) ಆರೋಪದಡಿ ಕಾಲೇಜು ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ತಿಳಿಸಿವೆ.

ಡಿಕ್ಕಿ: ಉದ್ಯೋಗಿ ಸಾವು

ಬೆಂಗಳೂರು: ಜಾಲಹಳ್ಳಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬುಧವಾರ ರಾತ್ರಿ ಅಪಘಾತ ಸಂಭವಿಸಿ ಸವಾರ ಹೇಮಂತ್ (21) ಮೃತಪಟ್ಟಿದ್ದಾರೆ.

‘ಗುಡಿ ಅಗ್ರಹಾರ ನಿವಾಸಿ ಹೇಮಂತ್, ಕಾರ್ಖಾನೆ ಉದ್ಯೋಗಿ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹ ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಮಹಿಳೆ ಕೊಲೆ: ಆಟೊ ಚಾಲಕ ಬಂಧನ

ಬೆಂಗಳೂರು: ಬೊಮ್ಮನಹಳ್ಳಿ ಠಾಣೆ ವ್ಯಾಪ್ತಿಯ ಕೆರೆ ದಡದಲ್ಲಿ ನಡೆದಿದ್ದ ಮಹಿಳೆ ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಆರೋಪಿ ಇಮ್ರಾನ್ (28) ಎಂಬುವರನ್ನು ಬಂಧಿಸಿದ್ದಾರೆ.

‘ಅಂಜನಾಪುರದ ನಿವಾಸಿ ಇಮ್ರಾನ್ ಆಟೊ ಚಾಲಕ. ಆ. 10ರಂದು ರಾತ್ರಿ ಮಹಿಳೆಯನ್ನು ಕೊಂದು ಪರಾರಿಯಾಗಿದ್ದ. 80 ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿ ಆರೋಪಿ ಬಂಧಿಸಲಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಜೆ.ಪಿ. ನಗರದ ಮಾರೇನಹಳ್ಳಿ ಬಳಿ ನಿಂತಿದ್ದ ಮಹಿಳೆಯನ್ನು ಮಾತನಾಡಿಸಿದ್ದ ಆರೋಪಿ, ಪುಸಲಾಯಿಸಿ ಆಟೊದಲ್ಲಿ ಕೆರೆ ಬಳಿ ಕರೆದೊಯ್ದಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಹಿಳೆ ಬಳಿ ಹೆಚ್ಚು ಹಣವಿರುವುದನ್ನು ದೋಚಬೇಕೆಂದು ಸಂಚು ರೂಪಿಸಿದ್ದ. ನಿರ್ಜನ ಪ್ರದೇಶಕ್ಕೆ ಕರೆದೊಯ್ದು ದೈಹಿಕ ಸಂಪರ್ಕ ಹೊಂದಿದ್ದ. ಅದಾದ ನಂತರ ಹಣ ನೀಡುವಂತೆ ಒತ್ತಾಯಿಸಿದ್ದ. ಮಹಿಳೆ ಒಪ್ಪಿರಲಿಲ್ಲ. ಸಿಟ್ಟಾದ ಆರೋಪಿ, ಮಹಿಳೆಯ ತಲೆ ಹಾಗೂ ಎದೆ ಮೇಲೆ ಕಲ್ಲು ಎತ್ತಿ ಹಾಕಿ ಕೊಂದು ಪರಾರಿಯಾಗಿದ್ದ’ ಎಂದು ತಿಳಿಸಿವೆ.

ಸುದ್ದಿ 2 ನಿಮಿಷ

ಬಿಎಂಟಿಸಿ: ಸ್ವಾತಂತ್ರ್ಯ ದಿನ 61.47 ಲಕ್ಷ ಜನ ಪ್ರಯಾಣ

ಬೆಂಗಳೂರು: ಸ್ವಾತಂತ್ರ್ಯ ದಿನದಂದು ಬಿಎಂಟಿಸಿ ಬಸ್‌ಗಳಲ್ಲಿ ಸಾಮಾನ್ಯ ದಿನಗಳಿಗಿಂತ ದುಪ್ಪಟ್ಟು ಸಂಖ್ಯೆಯಲ್ಲಿ, ಅಂದರೆ 61.47 ಲಕ್ಷ ಪ್ರಯಾಣಿಸಿದ್ದಾರೆ.

‘ಸಾಮಾನ್ಯ ದಿನಗಳಲ್ಲಿ ಹೆಚ್ಚೆಂದರೆ 28 ಲಕ್ಷ ಜನ ಪ್ರಯಾಣಿಸುತ್ತಾರೆ. ಸಂಸ್ಥೆಯ ಬೆಳ್ಳಿ ಹಬ್ಬದ ಪ್ರಯುಕ್ತ ಉಚಿತ ಪ್ರಯಾಣಕ್ಕೆ ಸೋಮವಾರ ಅವಕಾಶ ಕಲ್ಪಿಸಿದ್ದ ದಿನ ನಿರೀಕ್ಷೆಗೂ ಮೀರಿ ಜನ ಪ್ರಯಾಣಿಸಿದ್ದಾರೆ’ ಎಂದು ಬಿಎಂಟಿಸಿ ತಿಳಿಸಿದೆ.

ಸರಣಿ ರಜೆ ಇದ್ದರೂ ಲಾಲ್‌ಬಾಗ್‌ನಲ್ಲಿ ಇದ್ದ ಫಲಪುಷ್ಪ ಪ್ರದರ್ಶನ ಮತ್ತು ಕಾಂಗ್ರೆಸ್ ‘ಸ್ವಾತಂತ್ರ್ಯ ನಡಿಗೆ’ಯೂ ಇದಕ್ಕೆ ಕಾರಣ ಎನ್ನಲಾಗಿದೆ.

ಅಂದು 5,300 ಬಸ್‌ಗಳನ್ನು ಬಿಎಂಟಿಸಿ ಕಾರ್ಯಾಚರಣೆಗೆ ಇಳಿಸಿತ್ತು. ಸಾಮಾನ್ಯ ದಿನಗಳಿಗಿಂತ ಹೆಚ್ಚುವರಿ 500 ಬಸ್‌ಗಳು ರಸ್ತೆಗೆ ಇಳಿದಿದ್ದವು ಎಂದು ಮೂಲಗಳು ತಿಳಿಸಿವೆ.

ಮೂರು ನಿಲ್ದಾಣಗಳ ನಡುವೆ ಜೋಡಿ ಸುರಂಗ ಮಾರ್ಗ ಪೂರ್ಣ



ಬೆಂಗಳೂರು: ಗೊಟ್ಟಿಗೆರೆ–ನಾಗವಾರ ಮೆಟ್ರೊ ರೈಲು ಮಾರ್ಗದಲ್ಲಿ ಮೂರು ನಿಲ್ದಾಣಗಳ ನಡುವೆ ಜೋಡಿ ಸುರಂಗ ಮಾರ್ಗದ ಕಾಮಗಾರಿ ಪೂರ್ಣಗೊಂಡಿದೆ.

ಕಂಟೋನ್ಮೆಂಟ್ ರೈಲು ನಿಲ್ದಾಣದಿಂದ ಶಿವಾಜಿನಗರ, ಶಿವಾಜಿನಗರದಿಂದ ಎಂ.ಜಿ.ರಸ್ತೆ ಮತ್ತು ಕಂಟೋನ್ಮೆಂಟ್ ನಿಲ್ದಾಣದಿಂದ ಪಾಟರಿ ಟೌನ್ ನಡುವೆ ಜೋಡಿ ಸುರಂಗ ಮಾರ್ಗ ಕೊರೆಯುವ ಕಾಮಗಾರಿ (ಒಟ್ಟು 5,622 ಮೀಟರ್) ಪೂರ್ಣಗೊಂಡಿದೆ.

ಈ ಪೈಕಿ ಬಾಕಿ ಇದ್ದ ಕಂಟೋನ್ಮೆಂಟ್ ಮತ್ತು ಪಾಟರಿ ಟೌನ್ ನಡುವಿನ ಸುರಂಗ ಕೊರೆದ ವಿಂಧ್ಯಾ ಟಿಬಿಎಂ (ಟನಲ್ ಬೋರಿಂಗ್ ಮಷಿನ್) ಗುರವಾರ ಹೊರ ಬಂದಿದೆ. ಇದರಿಂದಾಗಿ ಕಂಟೋನ್ಮೆಂಟ್ ಮತ್ತು ಪಾಟರಿ ಟೌನ್ ನಡುವೆ ಜೋಡಿ ಸುರಂಗ ಮಾರ್ಗ ಪೂರ್ಣಗೊಂಡಂತಾಗಿದೆ.

2022ರ ಫೆಬ್ರುವರಿ 15ರಂದು ಕಾಮಗಾರಿ ಆರಂಭಿಸಲಾಗಿತ್ತು. ಆರು ತಿಂಗಳಲ್ಲಿ 900 ಮೀಟರ್ ಸುರಂಗ ಕೊರೆಯುವಲ್ಲಿ ‘ವಿಂಧ್ಯಾ’ ಯಶಸ್ವಿಯಾಗಿದೆ. ಒಟ್ಟಾರೆ ವಿಂಧ್ಯಾ ಟಿಬಿಎಂ 1755 ಮೀಟರ್ ಸುರಂಗ ಕೊರೆದಿದೆ. ಜೂನ್ 30ರಲ್ಲಿ ಒಂದು ಮಾರ್ಗವನ್ನು ‘ಊರ್ಜಾ’ ಟಿಬಿಎಂ ಪೂರ್ಣಗೊಳಿಸಿತ್ತು.

ಗೊಟ್ಟಿಗೆರೆ–ನಾಗವಾರ ಮಾರ್ಗದಲ್ಲಿ ಡೇರಿ ವೃತ್ತದಿಂದ ನಾಗವಾರ ತನಕ ಒಟ್ಟು 21,255 ಮೀಟರ್ ಉದ್ದ ಜೋಡಿ ಸುರಂಗ ಮಾರ್ಗ ನಿರ್ಮಾಣ ಆಗಬೇಕಿದೆ. ಈ ಪೈಕಿ ಈವರೆಗೆ 12,241 ಮೀಟರ್ ಕೊರೆಯುವಲ್ಲಿ ಟಿಬಿಎಂಗಳು ಯಶಸ್ವಿಯಾಗಿದೆ.

ಬಿಎಂಟಿಸಿಗೆ ಮತ್ತೆ 921 ಎಲೆಕ್ಟ್ರಿಕ್ ಬಸ್

ಬೆಂಗಳೂರು: ಸಿಲಿಕಾನ್ ಸಿಟಿಗೆ ಶೀಘ್ರದಲ್ಲೇ ಇನ್ನಷ್ಟು ಎಲೆಕ್ಟ್ರಿಕ್ ಬಸ್‌ಗಳನ್ನು ಬಿಎಂಟಿಸಿ ಪರಿಚಯಿಸಲಿದ್ದು, 12 ಮೀಟರ್ ಉದ್ದದ 921 ಬಸ್‌ಗಳನ್ನು ಒದಗಿಸುವ ಗುತ್ತಿಗೆಯು ಟಾಟಾ ಮೋಟರ್ಸ್ ಕಂಪನಿ ಪಾಲಾಗಿದೆ.

ಅತಿ ಕಡಿಮೆ ಬಿಡ್ ದಾಖಲಿಸಿದ್ದ ಟಾಟಾ ಮೋಟರ್ಸ್ ಈ ಗುತ್ತಿಗೆ ತನ್ನದಾಗಿಸಿಕೊಂಡಿದ್ದು, ವಿವಿಧ ಹಂತಗಳಲ್ಲಿ ಬಸ್‌ಗಳನ್ನು ಪೂರೈಸಲಿದೆ.

ಚಾಲಕ ಮತ್ತು ನಿರ್ವಹಣೆ ಜವಾಬ್ದಾರಿಯನ್ನು ಟಾಟಾ ಮೋಟರ್ಸ್ ಕಂಪನಿಯೇ ನೋಡಿಕೊಳ್ಳಲಿದ್ದು, ನಿರ್ವಾಹಕರು ಮಾತ್ರ ಬಿಎಂಟಿಸಿ ಸಿಬ್ಬಂದಿ ಇರಲಿದ್ದಾರೆ. ಈ ಬಸ್‌ಗಳ ವಿನ್ಯಾಸವನ್ನು ದೇಶೀಯವಾಗಿ ಅಭಿವೃದ್ಧಿಪಡಿಸಿ ನಿರ್ಮಿಸುತ್ತಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಟಾಟಾ ಮೋಟಾರ್ಸ್ ಉಪಾಧ್ಯಕ್ಷ(ಬಸ್ ತಯಾರಿಕೆ) ರೋಹಿತ್ ಶ್ರೀವಾಸ್ತವ್, ‘ಇ-ಬಸ್ ಪೂರೈಸಲು ಗುತ್ತಿಗೆ ಸಿಕ್ಕಿರುವುದು ಸಂತಸದ ವಿಷಯ. ದೆಹಲಿ ಸಾರಿಗೆ ನಿಗಮದಿಂದ 1,500 ಬಸ್‌ಗಳು, ಪಶ್ಚಿಮ ಬಂಗಾಳದಿಂದ 1,180 ಬಸ್‌ಗಳ ಪೂರೈಕೆಗೆ ಗುತ್ತಿಗೆ ದೊರತಿದೆ. 30 ದಿನಗಳ ಅಂತರದಲ್ಲಿ ಒಟ್ಟಾರೆ 3,600 ಇ-ಬಸ್‌ಗಳನ್ನು ಪೂರೈಸಲು ಕಾರ್ಯಾದೇಶ ಸಿಕ್ಕಿದೆ’ ಎಂದು ಹೇಳಿದರು.

‘ಜಾಗತಿಕ ಟೆಂಡರ್‌ನಲ್ಲಿ ಭಾಗವಹಿಸಿದ್ದ ಟಾಟಾ ಮೋಟಾರ್ಸ್ ಕಂಪನಿಗೆ ಈ ಗುತ್ತಿಗೆ ದೊರೆತಿದೆ. 921 ಎಲೆಕ್ಟ್ರಿಕ್ ಬಸ್‌ಗಳನ್ನು ವಿವಿಧ ಹಂತಗಳಲ್ಲಿ ಆ ಕಂಪನಿ ಪೂರೈಸಲಿದೆ’ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ ಸ್ಪಷ್ಟಪಡಿಸಿದರು.



ಪೀಣ್ಯ ದಾಸರಹಳ್ಳಿ ಸಮೀಪದ ಸುಂಕದಕಟ್ಟೆಯ ವಿದ್ಯಾನಿಕೇತನ ಪಬ್ಲಿಕ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಪುಟಾಣಿ ಮಕ್ಕಳು ಕೃಷ್ಣ ರಾಧೆ ವೇಷ ಧರಿಸಿ ಸಂಭ್ರಮಿಸಿದರು.

ಕೋರ್ಟ್: ವಾಹನ ನಿಲುಗಡೆಗೆ ಸ್ಟಿಕ್ಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹೈಕೋರ್ಟ್ ಸೇರಿ ಬೆಂಗಳೂರಿನ ನಾಲ್ಕೂ ಕೋರ್ಟ್ ಘಟಕಗಳಲ್ಲಿ ಬಾಂಬೆ ಮತ್ತು ದೆಹಲಿ ಹೈಕೋರ್ಟ್‌ಗಳ ಮಾದರಿಯಲ್ಲಿನ ವಕೀಲರ ಸಂಘದ ಸ್ಟಿಕ್ಕರ್ ಹೊಂದಿದ ವಾಹನ ನಿಲುಗಡೆ ವ್ಯವಸ್ಥೆಯನ್ನು ಸೆಪ್ಟೆಂಬರ್ 15ರಿಂದ ಜಾರಿಗೆ ತರಲಾಗುತ್ತಿದೆ.

ಬೆಂಗಳೂರು ವಕೀಲರ ಸಂಘದ ವತಿಯಿಂದ ಜಾರಿಗೆ ತರಲಾಗಿರುವ ಈ ನೂತನ ಆ್ಯಪ್ ತಂತ್ರಜ್ಞಾನ ಆಧಾರಿತ ಪದ್ಧತಿಗೆ ಸಂಘದ ಸದಸ್ಯರಿಗೆ ನೀಡಲಾಗುವ ಸ್ಟಿಕ್ಕರ್‌ಗಳು ಕಡ್ಡಾಯ.ಈ ಸ್ಟಿಕ್ಕರ್‌ಗಳ ಲಾಂಛನವನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ಗುರುವಾರ ಹೈಕೋರ್ಟ್‌ನ ವಕೀಲರ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಬಿಡುಗಡೆ ಮಾಡಿದರು.

ಈ ವೇಳೆ ಮಾತನಾಡಿದ ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ‘ಹೊಸ ಸ್ಟಿಕ್ಕರ್ ವ್ಯವಸ್ಥೆಯಿಂದ ಇನ್ನು ಮುಂದೆ ಹೈಕೋರ್ಟ್, ಸಿಟಿ ಸಿವಿಲ್ ಕೋರ್ಟ್, ಎಸಿಎಂಎಂ ಕೋರ್ಟ್ ಹಾಗೂ ಮೆಯೊ ಹಾಲ್‌ಗಳಲ್ಲಿನ ವಾಹನ ನಿಲುಗಡೆ ಸಮಸ್ಯೆ ಬಹುತೇಕ ನಿರಾಳವಾಗಲಿದೆ’ ಎಂದರು.



ಬೆಂಗಳೂರು ವಕೀಲರ ಸಂಘ ಗುರುವಾರ ಹೈಕೋರ್ಟ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ (ಎಡದಿಂದ ಮೂರನೇಯವರು) ವಕೀಲರ ವಾಹನಗಳ ಪಾರ್ಕಿಂಗ್ ಸ್ಟಿಕ್ಕರ್‌ಗಳನ್ನು ಬಿಡುಗಡೆ ಮಾಡಿದರು. ಹಿರಿಯ ವಕೀಲ ಕೆ.ಎನ್. ಫಣೀಂದ್ರ, ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ ಹಾಗೂ ಖಜಾಂಚಿ ಹರೀಶ ಎಂ.ಟಿ. ಇದ್ದಾರೆ. ಪ್ರಜಾವಾಣಿ ಚಿತ್ರ

ಸ್ಟಿಕ್ಕರ್ ಬಳಕೆ ವಾಹನ ನಿಲುಗಡೆ ಯೋಜನೆಯ ಕಾರ್ಯಭಾರದ ನೇತೃತ್ವ ವಹಿಸಿದ್ದ ಹೈಕೋರ್ಟ್‌ನ ಹಿರಿಯ ವಕೀಲ ಕೆ.ಎನ್.ಫಣೀಂದ್ರ ಮಾತನಾಡಿ, ‘ಇಂದು ವಕೀಲರಲ್ಲಿ ವಾಹನ ಖರೀದಿ ಪ್ರಮಾಣ ಹೆಚ್ಚಿದೆ. ಹಾಗಾಗಿ, ಈಗ ರೂಪಿಸಲಾಗಿರುವ ಆ್ಯಪ್ ತಂತ್ರಜ್ಞಾನ ಆಧಾರಿತ ವ್ಯವಸ್ಥೆ ಸಂಪೂರ್ಣ ದೋಷರಹಿತವಾಗಿದ್ದು, ಇನ್ನು ಮುಂದೆ ಕೋರ್ಟ್‌ಗಳಲ್ಲಿ ಬೇಕಾಬಿಟ್ಟಿ ವಾಹನಗಳ ಪ್ರವೇಶ ಮತ್ತು ಜಾಗದ ಸಮಸ್ಯೆ ಇರುವುದಿಲ್ಲ’ ಎಂದರು.

ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ, ‘ಸಂಘದ ಕಾರ್ಯ ಶ್ಲಾಘನೀಯ. ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ವಕೀಲರು ಸಹಕರಿಸಬೇಕು’ ಎಂದರು.

ನೀರಿನ ಸಂಪಿನಲ್ಲಿ ಮೃತದೇಹ ಪತ್ತೆ

ಬೆಂಗಳೂರು: ವಿಧಾನಸೌಧಕ್ಕೆ ಹೊಂದಿಕೊಂಡಿರುವ ಬಹುಮಹಡಿ ಕಟ್ಟಡದ ನೀರಿನ ಸಂಪಿನಲ್ಲಿ ವ್ಯಕ್ತಿಯೊಬ್ಬರ ಮೃತದೇಹa ಕೊಳೆತ ಸ್ಥಿತಿಯಲ್ಲಿ ಗುರುವಾರ ಬೆಳಿಗ್ಗೆ ಪತ್ತೆಯಾಗಿದೆ.

‘ಮೃತ ವ್ಯಕ್ತಿಯ ಹೆಸರು ಗೊತ್ತಾಗಿಲ್ಲ. 30 ರಿಂದ 35 ವರ್ಷ ವಯಸ್ಸಿರಬಹುದೆಂದು ಅಂದಾಜಿಸಲಾಗಿದೆ. ಮೃತ ದೇಹದ ಫೋಟೊಗಳನ್ನು ನಗರ ಹಾಗೂ ಹೊರ ಜಿಲ್ಲೆಗಳ ಠಾಣೆಗಳಿಗೆ ಕಳುಹಿಸಲಾಗಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ವಿಧಾನಸೌಧ ಹಾಗೂ ವಿಕಾಸಸೌಧದಲ್ಲಿ ಬೆಂಕಿ ಅವಘಡಗಳು ಸಂಭವಿಸಿದಾಗ ತುರ್ತು ಬಳಕೆಗೆಂದು ನೀರಿನ ಸಂಪು ನಿರ್ಮಿಸಲಾಗಿದೆ. ಬಹುಮಹಡಿ ಕಟ್ಟಡ ಹಾಗೂ ವಿಕಾಸಸೌಧದ ನಡುವಿನ ಜಾಗದಲ್ಲಿ ಸಂಪು ಇದ್ದು, ಇದರ ಬಳಿ ಜನರ ಓಡಾಟ ಕಡಿಮೆ ಇರುತ್ತದೆ’ ಎಂದೂ ತಿಳಿಸಿದರು.

ಪಾದಚಾರಿ ಮಾರ್ಗ: ಸಾಮಗ್ರಿ ತೆರವಿಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಬದಿ ಮತ್ತು ಪಾದಚಾರಿ ಮಾರ್ಗದಲ್ಲಿರುವ ಪೈಪ್ ಹಾಗೂ ಕಟ್ಟಡ ನಿರ್ಮಾಣ ವಸ್ತುಗಳನ್ನು ತೆರವುಗೊಳಿಸಲು ಆ.21ರ ಭಾನುವಾರದವರೆಗೆ ಗಡುವು ನೀಡಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶಿಸಿದ್ದಾರೆ.

ಕಟ್ಟಡ ನಿರ್ಮಾಣದ ವಸ್ತು ಮತ್ತು ಪೈಪ್‌ಗಳಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿದೆ. ಆದ್ದರಿಂದ ಆಯಾ ವಲಯದ ಎಲ್ಲಾ ಮುಖ್ಯ ಎಂಜಿನಿಯರ್‌ಗಳು ತೆರವುಗೊಳಿಸುವ ಕಾರ್ಯವನ್ನು ಕೂಡಲೇ ಆರಂಭಿಸಬೇಕು ಎಂದು ಸೂಚಿಸಿದ್ದಾರೆ.

ತೆರವುಗೊಳಿಸಿರುವ ಬಗ್ಗೆ ಜಿಯೋ ಟ್ಯಾಗ್ ಫೋಟೊಸಹಿತ ವರದಿಯನ್ನು ಎಲ್ಲಾ ವಿಭಾಗಗಳ ಕಾರ್ಯಪಾಲಕ ಎಂಜಿನಿಯರ್‌ಗಳು ಆ.21ರ ಸಂಜೆ 4ರೊಳಗೆ ಪ್ರಧಾನ ಎಂಜಿನಿಯರ್‌ಗೆ ವರದಿ ನೀಡಬೇಕು. ತೆರವುಗೊಳಿಸುವಲ್ಲಿ ವಿಫಲವಾದರೆ ಅಥವಾ ವರದಿ ನೀಡದಿದ್ದರೆ ಸಂಬಂಧಪಟ್ಟ ಮುಖ್ಯ ಎಂಜಿನಿಯರ್ ಮತ್ತು ಕಾರ್ಯಪಾಲಕ ಎಂಜಿನಿಯರ್‌ಗಳ ಮೇಲೆ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಸುಲಿಗೆಗೆ ಯತ್ನ: ಆರೋಪಿ ಬಂಧನ

ಬೆಂಗಳೂರು: ಗಂಗಾನಗರ ಮುಖ್ಯರಸ್ತೆಯ ತರಕಾರಿ ಮಾರಾಟ ಮಳಿಗೆಗೆ ಮಾರಕಾಸ್ತ್ರ ಸಮೇತ ನುಗ್ಗಿ ಸುಲಿಗೆ ಮಾಡಲು ಯತ್ನಿಸಿದ್ದ ಆರೋಪಿ ತಬ್ರೇಜ್ ಎಂಬಾತನನ್ನು ಆರ್.ಟಿ.ನಗರ ಪೊಲೀಸರು ಬಂಧಿಸಿದ್ದಾರೆ.

‘ಕೆ.ಜಿ.ಹಳ್ಳಿ ನಿವಾಸಿ ತಬ್ರೇಜ್, ಅಪರಾಧ ಪ್ರಕರಣವೊಂದರಲ್ಲಿ ಜೈಲಿಗೆ ಹೋಗಿದ್ದ. ಜಾಮೀನು ಪಡೆದು ಮೂರು ದಿನಗಳ ಹಿಂದೆಯಷ್ಟೇ ಜೈಲಿನಿಂದ ಹೊರಗೆ ಬಂದಿದ್ದ. ಬುಧವಾರ ಬೆಳಿಗ್ಗೆ ಸುಲಿಗೆಗೆ ಯತ್ನಿಸಿದ್ದ ಆತನನ್ನು ಜನರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ’ ಎಂದು ಆರ್.ಟಿ.ನಗರ ಠಾಣೆ ಮೂಲಗಳು ಹೇಳಿವೆ.

‘ಜೈಲಿಗೆ ಹೋಗಿ ಬಂದಿರುವುದಾಗಿ ಹೇಳಿಕೊಂಡು ಮಚ್ಚು ಹಿಡಿದು ಸುತ್ತಾಡುತ್ತಿದ್ದ ಆರೋಪಿ, ಜನರನ್ನು ಬೆದರಿಸುತ್ತಿದ್ದ. ಅಂಗಡಿಗಳಲ್ಲಿ ನುಗ್ಗಿ ಹಣ ಕಿತ್ತುಕೊಳ್ಳುತ್ತಿದ್ದ. ಗಂಗಾನಗರದ ಮುಖ್ಯರಸ್ತೆಯಲ್ಲಿರುವ ಶಿವರಾಜು ಎಂಬುವರ ತರಕಾರಿ ಮಾರಾಟ ಮಳಿಗೆಗೂ ಬುಧವಾರ ಬೆಳಿಗ್ಗೆ ನುಗ್ಗಿದ್ದ.’

‘ಶಿವರಾಜು ಮೇಲೆಹಲ್ಲೆ ನಡೆಸಿದ್ದ ಆರೋಪಿ, ಮಾರ ಕಾಸ್ತ್ರದಿಂದ ಹೊಡೆಯಲು ಮುಂದಾಗಿದ್ದ. ಸಾರ್ವಜನಿಕರು, ಆರೋಪಿಯನ್ನು ಹಿಡಿದುಕೊಂಡಿದ್ದರು' ಎಂದು ಮೂಲಗಳು ತಿಳಿಸಿವೆ.

ಆನೇಕಲ್ ತಾಲ್ಲೂಕಿನಲ್ಲಿ 11 ಕೆರೆಗಳಿಗೆ ಸಂಪರ್ಕ • ಶ್ರಮದಾನಕ್ಕೆ ಸಿದ್ಧತೆ

ಸ್ಥಳೀಯ ಸಂಘಟನೆಗಳಿಂದಲೇ ರಾಜಕಾಲುವೆ ಪುನರುಜ್ಜೀವನ

• ಆರ್. ಮಂಜುನಾಥ್

ಬೆಂಗಳೂರು: ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನಲ್ಲಿ ಸಮುದಾಯದೊಂದಿಗೆ 11 ಕೆರೆಗಳಿಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆಯನ್ನು ಪುನರುಜ್ಜೀವನಗೊಳಿಸುವ ಕಾರ್ಯ ಮಳೆಗಾಲ ಮುಗಿದ ಕೂಡಲೇ ಆರಂಭವಾಗಲಿದೆ.

ಮಣ್ಣು, ತ್ಯಾಜ್ಯದಿಂದ ಮುಚ್ಚಿಹೋಗಿರುವ ಸುಮಾರು 15 ಕಿ.ಮೀ. ರಾಜಕಾಲುವೆಯನ್ನು ತೆರವುಗೊಳಿಸುವ ಮೂಲಕ ಮಳೆ ನೀರು ಕೆರೆಯಿಂದ ಕೆರೆಗೆ ಹರಿಯಲು ನೆರವಾಗುವುದು ಪ್ರಮುಖ ಗುರಿ. ಈ ರಾಜಕಾಲುವೆ ಪುನರುಜ್ಜೀವನವಾಗುವುದರಿಂದ ಮಳೆಯ ಸಂದರ್ಭದಲ್ಲಿ ಬಡಾವಣೆ, ಹಳ್ಳಿ, ಮನೆಗೆ ನೀರು ನುಗ್ಗುವ ಸಮಸ್ಯೆ ಕೂಡ ನಿವಾರಣೆಯಾಗಲಿದೆ.

ಆನೇಕಲ್ ತಾಲ್ಲೂಕು ಪರಿಸರ ಸಂರಕ್ಷಣೆ ಫೆಡರೇಷನ್, ಫ್ರೆಂಡ್ಸ್ ಆಫ್ ಲೇಕ್ಸ್, ವಾಟರ್ ಇನ್‌ಸ್ಟಿಟ್ಯೂಟ್ ಆಫ್ ಬೆಂಗಳೂರು ವಿವಿ ಮತ್ತು ಇಂಡಿಯಾ ಕೇರ್ಸ್ ಫೌಂಡೇಷನ್ ವತಿಯಿಂದ ಈ ಸಮುದಾಯ ಆಧಾರಿತ 'ರಾಜಕಾಲುವೆ ಪುನರುಜ್ಜೀವನ' ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸರ್ಕಾರದ ಅನುದಾನ ಹಾಗೂ ಸಣ್ಣ ನೀರಾವರಿ ಇಲಾಖೆಯಿಂದ ಎಲ್ಲ ರೀತಿಯ ಸರ್ವೆ ಕಾರ್ಯ, ಒತ್ತುವರಿ ಗುರುತಿಸಲು ನೆರವಾಗುತ್ತಿದೆ. ಇನ್ನುಳಿದ ತೆರವು ಕಾರ್ಯಾಚರಣೆ ಹಾಗೂ ಮಾನವ ಸಂಪನ್ಮೂಲಕ್ಕೆ ಸಂಸ್ಥೆಗಳೇ ಹಣ ಭರಿಸಲಿವೆ. ಸುಮಾರು ₹3 ಕೋಟಿ ವೆಚ್ಚವಾಗಲಿದೆ.

'ದಕ್ಷಿಣ ಪಿನಾಕಿನಿ ಮೂಲಕ ತಮಿಳು ನಾಡಿಗೆ ಹರಿಯುವ ನಾಲೆಯ ವ್ಯಾಪ್ತಿಯಲ್ಲಿ 11 ಕೆರೆಗಳಿದ್ದು, ಮಳೆಗಾಲದಲ್ಲಿ ನೀರು ರಾಜಕಾಲುವೆಯಲ್ಲಿ ಹರಿಯಲು ಸಾಧ್ಯವಿಲ್ಲ. ಹೀಗಾಗಿ ಮನೆಗಳಿಗೆ ನುಗ್ಗುತ್ತಿದೆ. ಇದನ್ನು ನಿವಾರಿಸುವ ಸಲುವಾಗಿ ಜನರೊಂದಿಗೆ 'ರಾಜಕಾಲುವೆ ಪುನರುಜ್ಜೀವನ' ಕಾರ್ಯ ಆರಂಭಿಸಲಾಗುತ್ತದೆ. ಇದಾದ ಮೇಲೆ ಕೆರೆಗಳು ತುಂಬುವ ಜೊತೆಗೆ 80 ಹಳ್ಳಿಗಳಲ್ಲಿ ಅಂತರ್ಜಲ ಮಟ್ಟ ವೃದ್ಧಿಯಾಗಲಿದೆ. ಯಂತ್ರಗಳ ಜೊತೆಗೆ ಸಾಂಪ್ರದಾಯಿಕವಾಗಿ ನೀರಿನ ಹರಿವು ಬಲ್ಲ 25 ಕುಟುಂಬಗಳು ಈ ಕಾಲುವೆ ಕಾಮಗಾರಿಯಲ್ಲಿ ಭಾಗಿಯಾಗಲಿದ್ದು, ಅವರ ಜೀವನೋಪಾಯಕ್ಕೂ ಸಹಾಯವಾಗಲಿದೆ. ಸ್ಥಳೀಯರೂ ಶ್ರಮದಾನ ಮಾಡಲಿದ್ದಾರೆ' ಎಂದು ಕೆರೆಗಳ ಸಂರಕ್ಷಣೆ ಕಾರ್ಯಕರ್ತ ಹಾಗೂ ಸಹಾಯಕ ಆಯುಕ್ತ ಕ್ಯಾಪ್ಟನ್ ಸಂತೋಷ್‌ಕುಮಾರ್ ತಿಳಿಸಿದರು.

'ಚೋಳರ ಕಾಲದಲ್ಲಿ ನಿರ್ಮಾಣವಾದ ಆನೇಕಲ್‌ನ ದೊಡ್ಡಕೆರೆಯಿಂದ ರಾಜ್ಯದ ಗಡಿಭಾಗದ ಅತ್ತಿಬೆಲೆ ಕೆರೆಯವರೆಗೆ ರಾಜಕಾಲುವೆ ಮರು ನಿರ್ಮಿಸಲಾಗುತ್ತದೆ. ಸಮುದಾಯವೇ ಎಲ್ಲ ವೆಚ್ಚವನ್ನು ಭರಿಸಲಿದ್ದು, ಸರ್ಕಾರ ಇಲಾಖೆಗಳ ಮೇಲ್ವಿಚಾರಣೆಯಲ್ಲಿ ಈ ಕೆಲಸ ನಡೆಯಲಿದೆ. 10 ತಿಂಗಳಲ್ಲಿ ಕಾಮಗಾರಿ ಮುಗಿಸಲಾಗುತ್ತದೆ. ಮುಂದಿನ ಮಳೆಗಾಲದಲ್ಲಿ ನೀರು ರಾಜಕಾಲುವೆಯಲ್ಲಿ ಹರಿಯುವಂತೆ ಮಾಡಲಾಗುತ್ತದೆ. ಮುತ್ತಾನಲ್ಲೂರು ಕೆರೆಯಿಂದ ಬಿದರನಗುಪ್ಪೆ ಕೆರೆಯವರೆಗಿನ ರಾಜಕಾಲುವೆಯನ್ನೂ ತೆರವುಗೊಳಿಸಲಾಗುವುದು' ಎಂದರು.



ರಾಜಕಾಲುವೆ ಮುಚ್ಚಿಹೋಗಿರುವುದರಿಂದ ಆನೇಕಲ್‌ನ ಮುತ್ತಾನಲ್ಲೂರು ಕೆರೆಯಿಂದ ನೀರು ಜಮೀನಿಗೆ ನುಗ್ಗಿರುವುದು

ಸಂಪರ್ಕ ಸಾಧಿಸಲಿರುವ ಕೆರೆಗಳು

ನಂಜುಂಡಯ್ಯನ ಕೆರೆ, ಸಿಡಿಹೊಸಕೋಟೆ, ಆನೇಕಲ್ ದೊಡ್ಡಕೆರೆ, ಕಮ್ಮಸಂದ್ರ ಅಗ್ರಹಾರ ಕೆರೆ, ಬ್ಯಾಗದದೇನಹಳ್ಳಿ ಕೆರೆ, ಮಾರಸೂರು ಕೆರೆ, ಕೂಸ್ ಮಡಿವಾಳ ಕೆರೆ, ಶೆಟ್ಟಹಳ್ಳಿ ಕೆರೆ, ತಟ್ಟನಹಳ್ಳಿ ಕೆರೆ, ಮಾಯಸಂದ್ರ ಕೆರೆ, ಅರೆಹಳ್ಳಿ ಕೆರೆ, ಅತ್ತಿಬೆಲೆ ಮೂಲ ಕೆರೆ

ಮುಂದಿನ ಆಗಸ್ಟ್‌ಗೆ ಸಿದ್ಧ

'ಸಮುದಾಯದೊಂದಿಗೆ ರಾಜಕಾಲುವೆಯ ಒತ್ತುವರಿಯನ್ನು ತೆರವು ಮಾಡುವ ಯೋಜನೆಯನ್ನು ಒಂದೂವರೆ ವರ್ಷದಿಂದ ರೂಪಿಸುತ್ತಿದ್ದೇನೆ. ಇದೀಗ ಅದಕ್ಕೊಂದು ರೂಪು ಸಿಕ್ಕಿದ್ದು, ವಿಸ್ತೃತ ಯೋಜನಾ ವರದಿಗೂ ಸದ್ಯದಲ್ಲಿಯೇ ಸಮ್ಮತಿ ಸಿಗಲಿದೆ. ಮಳೆಗಾಲದ ನಂತರ ರಾಜಕಾಲುವೆ ಒತ್ತುವರಿ ತೆರವು ಹಾಗೂ ಪುನರುಜ್ಜೀವನ ಕಾಮಗಾರಿ ಆರಂಭವಾಗಲಿದೆ. 2023ರ ಆಗಸ್ಟ್ ವೇಳೆಗೆ ಸುಮಾರು 15 ಕಿ.ಮೀ. ರಾಜಕಾಲುವೆ 11 ಕೆರೆಗಳನ್ನು ಪುನರ್ ಸಂಪರ್ಕಿಸಲಿವೆ' ಎಂದು ಕೆರೆಗಳ ಸಂರಕ್ಷಣೆ ಕಾರ್ಯಕರ್ತ ಕ್ಯಾಪ್ಟನ್ ಸಂತೋಷ್‌ಕುಮಾರ್ ತಿಳಿಸಿದರು.

ತಾಂತ್ರಿಕ ನಿರ್ದೇಶನ

ರಾಜಕಾಲುವೆಯಲ್ಲಿ ನೀರು ಸರಾಗವಾಗಿ ಹರಿಯುವಂತೆ ಮಾಡುವಲ್ಲಿ ತಾಂತ್ರಿಕ ನಿರ್ದೇಶನ ನೀಡಲಾಗುತ್ತದೆ. ಸಾರ್ವಜನಿಕ ಹಾಗೂ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ರಾಜಕಾಲುವೆ ಪುನರುಜ್ಜೀವನ ಕಾರ್ಯ ನಡೆಯಲು ಯಾವುದೇ ಅಡೆತಡೆಗಳು ಬಂದರೆ ಅವುಗಳನ್ನು ತುರ್ತಾಗಿ ಪರಿಹರಿಸಲು ಉದ್ದೇಶಿಸಲಾಗಿದೆ. ಕಂದಾಯ ಇಲಾಖೆಯ ಸಹಕಾರದೊಂದಿಗೆ ಸಣ್ಣ ನೀರಾವರಿ ಇಲಾಖೆ ಆನೇಕಲ್ ತಾಲ್ಲೂಕಿನಲ್ಲಿ ರಾಜಕಾಲುವೆಗಳ ಪುನರ್ ಸ್ಥಾಪನೆಯೊಂದಿಗೆ 11 ಕೆರೆಗಳ ಸಂಪರ್ಕ ಕಲ್ಪಿಸಲು ನೆರವು ನೀಡಲಾಗುತ್ತಿದೆ ಎಂದು ಸಣ್ಣ ನೀರಾವರಿ ಇಲಾಖೆಯ ಕಾರ್ಯದರ್ಶಿ ಮೃತ್ಯುಂಜಯ ಸ್ವಾಮಿ ತಿಳಿಸಿದರು.

ಮೊಟ್ಟೆ ಎಸೆತ: ಬೊಮ್ಮಾಯಿ ವಿರೋಧ

ಬೆಂಗಳೂರು: ಯಾರ ಬಗೆಗಾದರೂ ಭಿನ್ನಾಭಿಪ್ರಾಯ ಇದ್ದರೆ, ಅದನ್ನು ಬಲವಾದ ಅಭಿಪ್ರಾಯಗಳೊಂದಿಗೆ ವಿರೋಧಿಸಬೇಕೇ ವಿನಃ ದೈಹಿಕ ಕಾರ್ಯದಿಂದಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಸಿದ್ದರಾಮಯ್ಯನವರ ಕೊಡಗು ಪ್ರವಾಸದ ವೇಳೆ ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಬಗ್ಗೆ, ಟ್ವೀಟ್ ಮಾಡಿರುವ ಬೊಮ್ಮಾಯಿ, ಹೀಗೆ ಹೇಳಿದ್ದಾರೆ.

'ಸಿದ್ದರಾಮಯ್ಯನವರು, ವಿರೋಧ ಪಕ್ಷದ ನಾಯಕರಾಗಿದ್ದು, ಆ ಸ್ಥಾನಕ್ಕೆ ತನ್ನದೇ ಆದ ಗೌರವ ಇದೆ. ಗೌರವಿಸುವುದನ್ನು ಎಲ್ಲರೂ ಪಾಲಿಸಬೇಕು' ಎಂದು ತಮ್ಮ ಪಕ್ಷದ ಕಾರ್ಯಕರ್ತರಿಗೆ ಸೂಚಿಸಿದ್ದಾರೆ.

ಸಾವರ್ಕರ್ ಹೋರಾಟ: ಮುಖ್ಯಮಂತ್ರಿ ಬೊಮ್ಮಾಯಿಗೆ ಸಿದ್ದರಾಮಯ್ಯ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರಿಟಿಷರಿಗೆ ನಾನು ನಿಮ್ಮ ಸೇವಕ ಎಂದಿದ್ದ ಸಾವರ್ಕರ್, ಸ್ವಾತಂತ್ರ್ಯ ಹೋರಾಟಗಾರ ಆಗುವುದು ಹೇಗೆ? ಈ ಕುರಿತು ಬಹಿರಂಗ ಚರ್ಚೆ ನಡೆಯಲಿ. ಆರೆಸ್ಸೆಸ್ಸಿಗೆ ಸಂಪೂರ್ಣ ತಲೆಬಾಗಿದ್ದೇನೆಂದು ಹೇಳುತ್ತಿರುವ ಬೊಮ್ಮಾಯಿಯವರೇ ಚರ್ಚೆಯ ನೇತೃತ್ವ ವಹಿಸಲಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.

'ನಿಜವಾದ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ವಾತಂತ್ರ್ಯ ಹೋರಾಟಗಾರರಲ್ಲ, ಬ್ರಿಟಿಷರಿಗೆ ಗುಲಾಮಗಿರಿ ಮಾಡಿದವರು ಸ್ವಾತಂತ್ರ್ಯ ಹೋರಾಟಗಾರರೆಂದು ಇತಿಹಾಸ ತಿರುಚುವ ದುಷ್ಟ ಹುನ್ನಾರವನ್ನು ಬಿಜೆಪಿ ಮುಂದುವರೆಸಿದೆ. ಇಂದಿನ ಬಿಜೆಪಿಯವರು ಒಂದೊ ಮೆದುಳು, ಹೃದಯಗಳನ್ನು ಕಳೆದುಕೊಂಡಿದ್ದಾರೆ. ಅಧಿಕಾರ ಲಾಲಸೆಗಾಗಿ ಬಲಿ ಬಿದ್ದು ಈ ನೆಲದ ಸಕಲ ಪರಂಪರೆಗೆ ದ್ರೋಹ ಬಗೆಯುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಬಿಜೆಪಿಯವರು ಮೊದಲು ಭಗತ್‌ಸಿಂಗ್‌ರನ್ನು ಆಶ್ರಯಿಸಿದರು. ಆದರೆ, ಭಗತ್‌ಸಿಂಗ್‌ರ ಚಿಂತನೆಗಳು ತಮಗೆ ಡಿಕ್ಕಿ ಹೊಡೆದು ಪುಡಿ ಮಾಡುತ್ತವೆ ಎಂದ ಕೂಡಲೇ ನಿರ್ಲಕ್ಷಿಸಿದರು. ಕೆಲ ಕಾಲ ಸ್ವಾಮಿ ವಿವೇಕಾನಂದರನ್ನು ಗುತ್ತಿಗೆ ತೆಗೆದುಕೊಂಡವರಂತೆ ಓಡಾಡಿದರು. ಆದರೆ, ಸ್ವಾಮಿ ವಿವೇಕಾನಂದರು, ಪುರೋಹಿತಶಾಹಿಗಳ ವಿರುದ್ಧ ಮಾತನಾಡುತ್ತಿದ್ದಂತೆ ಅವರನ್ನೂ ಬಿಟ್ಟುಕೊಟ್ಟರು. ಒಂದಷ್ಟು ಕಾಲ ಸುಭಾಷ್ ಚಂದ್ರ ಬೋಸರನ್ನೂ ಆತುಕೊಂಡು ಬಳಿಕ ಬಿಟ್ಟರು' ಎಂದಿದ್ದಾರೆ.

'ನಾಡಿನ ಯುವಜನರು ಎಚ್ಚೆತ್ತುಕೊಳ್ಳದಿದ್ದರೆ ಈ ನೆಲ ಮತ್ತೊಂದು ಸ್ವಾತಂತ್ರ್ಯ ಹೋರಾಟಕ್ಕೆ ಸಿದ್ಧವಾಗಬೇಕಾಗುತ್ತದೆ. ಬಿಜೆಪಿಯವರು ದೇಶದ ಸಮಸ್ತವನ್ನೂ ಕಾರ್ಪೊರೇಟ್ ಧಣಿಗಳಿಗೆ ಕೊಟ್ಟು ರಾಜ್ಯ ಮತ್ತು ದೇಶದ ಆರ್ಥಿಕತೆಯನ್ನು ಸಂಪೂರ್ಣ ಬರ್ಬಾದು ಮಾಡುತ್ತಿದ್ದಾರೆ. ಯುವಕರು- ಹಿಂದುಳಿದವರು, ದಲಿತರು, ಮಹಿಳೆಯರು ಸೇರಿದಂತೆ ಎಲ್ಲ ವರ್ಗಗಳು ಸಂಕಷ್ಟಕ್ಕೆ ಸಿಲುಕಿವೆ. ಭ್ರಷ್ಟಾಚಾರ ತುದಿಮುಟ್ಟಿದೆ. ಇವುಗಳನ್ನೆಲ್ಲ ಮರೆಮಾಚಿ ಬಿಜೆಪಿಯವರು ಜನರನ್ನು ದಾರಿತಪ್ಪಿಸುವ ಕೆಲಸ ಮಾಡುತ್ತಿದ್ದಾರೆ' ಎಂದೂ ಆರೋಪಿಸಿದ್ದಾರೆ.

'ಇವಿಎಂನಲ್ಲಿ ಬ್ರೈಲ್ ಲಿಪಿ ಇರಲಿ'

ನವದೆಹಲಿ: ವಿದ್ಯುನ್ಮಾನ ಮತಯಂತ್ರಗಳಲ್ಲಿ (ಇವಿಎಂ) ಬ್ರೈಲ್ ಲಿಪಿಯನ್ನು ಅಳವಡಿಸುವ ಮತ್ತು ಅಂಗವಿಕಲರಿಗೆ ಮನೆಯಲ್ಲೇ ಮತದಾನದ ಅವಕಾಶ ಕಲ್ಪಿಸುವ ಸಂಬಂಧ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಹಾಗೂ ಚುನಾವಣಾ ಆಯೋಗದ ಮಧ್ಯೆ ನಡೆದ ಸಭೆಯಲ್ಲಿ ಚರ್ಚಿಸಲಾಗಿದೆ.

ಚುನಾವಣಾ ಪ್ರಕ್ರಿಯೆಯನ್ನು ಅಂಗವಿಕಲ ಸ್ನೇಹಿಯನ್ನಾಗಿಸುವ ಸಂಬಂಧ ಏರ್ಪಡಿಸಲಾಗಿದ್ದ ಸಭೆಯಲ್ಲಿ ಈ ವಿಚಾರಗಳು ಚರ್ಚೆಗೆ ಬಂದಿವೆ. ಇವಿಎಂಗಳಲ್ಲಿ ಮತ್ತು ಮತದಾರರ ಗುರುತಿನ ಚೀಟಿಗಳಲ್ಲಿ ಬ್ರೈಲ್ ಲಿಪಿಯನ್ನು ಅಳವಡಿಸುವ ಸಲಹೆಯನ್ನು ಸಭೆಯಲ್ಲಿ ನೀಡಲಾಗಿದ್ದು, ಪರಿಶೀಲಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಸ್ಪರ್ಧಾತ್ಮಕ ಪರೀಕ್ಷೆ: ಇಂದು ಪ್ರತಿಭಟನೆ

ಬೆಂಗಳೂರು: 'ಕರ್ನಾಟಕ ರಾಜ್ಯ ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳ ಒಕ್ಕೂಟದ ನೇತೃತ್ವದಲ್ಲಿ ಆಗಸ್ಟ್ 19ರಂದು 'ನೊಂದ ಯುವಜನತೆಯ ನಡೆ ರಾಜಭವನದ ಕಡೆ' ಎಂಬ ಬೃಹತ್ ಜಾಥಾ ಹಮ್ಮಿಕೊಳ್ಳಲಾಗಿದೆ' ಎಂದು ಒಕ್ಕೂಟದ ಸಂಚಾಲಕ ಭವ್ಯ ನರಸಿಂಹಮೂರ್ತಿ ತಿಳಿಸಿದರು.

'ಹಂಪಿನಗರದಲ್ಲಿರುವ ಕೇಂದ್ರೀಯ ಗ್ರಂಥಾಲಯದಿಂದ ರಾಜಭವನದವರೆಗೂ ಜಾಥಾ ನಡೆಯಲಿದ್ದು, ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು. ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಾಗುವುದು' ಎಂದು ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

'ಕೆಪಿಎಸ್‌ಸಿ ನಡೆಸುವ ಎಲ್ಲಾ ನೇಮಕಾತಿಗಳನ್ನು ತ್ವರಿತಗತಿಯಲ್ಲಿ ನಡೆಸಬೇಕು. ಮುಂಬರುವ ನೇಮಕಾತಿಗಳನ್ನು ಪೂರ್ವಯೋಜಿತ ವೇಳಾಪಟ್ಟಿಯೊಂದಿಗೆ ಆಯೋಜಿಸಬೇಕು. ಕೇಂದ್ರ ಲೋಕಸೇವಾ ಆಯೋಗ ಮಾದರಿಯ ಪರೀಕ್ಷಾ ಪ್ರಕ್ರಿಯೆ ವಾರ್ಷಿಕ ವೇಳಾಪಟ್ಟಿಯನ್ನು ಪ್ರಕಟಿಸಬೇಕು. ರಾಜ್ಯದಲ್ಲಿ ಖಾಲಿ ಇರುವ 2.44 ಲಕ್ಷ ಹುದ್ದೆಗಳಿಗೆ ಶೀಘ್ರ ಅಧಿಸೂಚನೆ ಹೊರಡಿಸಬೇಕು' ಎಂದು ಆಗ್ರಹಿಸಿದರು.

ನೆಟ್ಟಾರು ಹತ್ಯೆ: ಐವರು ಪೊಲೀಸ್ ವಶಕ್ಕೆ

ಬೆಂಗಳೂರು: ಬಿಜೆಪಿ ಯುವ ಮೋರ್ಚಾ ಕಾರ್ಯಕಾರಿಣಿಯ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ಐವರು ಆರೋಪಿಗಳನ್ನು ಎನ್‌ಐಎ ವಿಶೇಷ ನ್ಯಾಯಾಲಯವು ಇದೇ 23ರವರೆಗೆ ಪೊಲೀಸ್ ವಶಕ್ಕೆ ಒಪ್ಪಿಸಿದೆ.

ಪ್ರಕರಣದ ದಾಖಲೆಗಳು ಮಂಗಳೂರು ಕೋರ್ಟ್‌ನಿಂದ ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಇದೇ 17ರಂದು ವರ್ಗಾವಣೆಯಾಗಿದ್ದು, ಗುರುವಾರ ನ್ಯಾಯಾಧೀಶ ಸಿ.ಎಂ.ಗಂಗಾಧರ ವಿಚಾರಣೆ ನಡೆಸಿದರು. ಈ ವೇಳೆ ಎನ್‌ಐಎ ಪರ ವಕೀಲ ಪಿ.ಪ್ರಸನ್ನ ಕುಮಾರ್, 'ಆರೋಪಿಗಳನ್ನು ಹೆಚ್ಚಿನ ಪೊಲೀಸ್ ತನಿಖೆಗೆ ಒಳಪಡಿಸಬೇಕಾಗಿದ್ದು ಯುಎಪಿ ಕಾಯ್ದೆ-1967ರ ಕಲಂ 43-ಡಿ ಅಡಿಯಲ್ಲಿ ವಶಕ್ಕೆ ನೀಡಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಆರೋಪಿಗಳಾದ ತಂಬಿನ ಮಕ್ಕಿಯ ನೌಫಲ್, ನಾವೂರಿನ ಸೈನುಲ್ ಅಬಿದ್, ನಾವೂರಿನ ಮೊಹಮದ್ ಶಿಯಾಬ್, ಎಲಿಮಲೆಯ ಅಬ್ದುಲ್ ಬಷೀರ್, ಅಂಕತಡ್ಕದ ರಿಯಾಜ್ ಅವರನ್ನು ಆರು ದಿನಗಳ ಕಾಲ ಪೊಲೀಸ್ ವಶಕ್ಕೆ ಒಪ್ಪಿಸಿ ಆದೇಶಿಸಿತು.

ಜುಲೈ 26ರಂದು ಸುಳ್ಯ ತಾಲ್ಲೂಕಿನ ಬೆಳ್ಳಾರೆಯಲ್ಲಿ ಪ್ರವೀಣ್ ನೆಟ್ಟಾರು ಅವರನ್ನು ದುಷ್ಕರ್ಮಿಗಳು ಹತ್ಯೆ ಮಾಡಿದ್ದರು.

ಚಿತ್ರಾವಳಿ



ಕಟ್ಟಡ ನಿರ್ಮಾಣ ಮತ್ತು ಕಾರ್ಮಿಕರ ಸಂಘಟನೆ ಒಕ್ಕೂಟದ ವತಿಯಿಂದ ಕಾರ್ಮಿಕರ ಉಪಯೋಗಕ್ಕೆ ಸಂಚರಿಸಲಿರುವ 'ಕಾರ್ಮಿಕರ ರಥ'ಕ್ಕೆ ವಸತಿ ಸಚಿವ ವಿ. ಸೋಮಣ್ಣ ಚಾಲನೆ ನೀಡಿದರು. ಗೋವಿಂದರಾಜನಗರ ಮಂಡಲ ಬಿಜೆಪಿ ಅಧ್ಯಕ್ಷ ವಿಶ್ವನಾಥಗೌಡ, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಬಿಬಿಎಂಪಿ ಮಾಜಿ ಸದಸ್ಯರಾದ ವಾಗೀಶ್, ಶ್ರೀಧರ್ ಮತ್ತು ರಾಜ್ಯ ನಿವೃತ್ತ ಅಧಿಕಾರಿ ಮತ್ತು ನೌಕರರ ಸಂಘದ ಉಪಾಧ್ಯಕ್ಷ ಡಾ. ಎಂ.ಸೋಮಶೇಖರ್, ಬಿಜೆಪಿ ಮುಖಂಡ ರಾಜಪ್ಪ, ಕಾರ್ಮಿಕರ ಸಂಘದ ಅಧ್ಯಕ್ಷ ದೇವರಾಜ್ ಇದ್ದರು



ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಜಯನಗರದ ಆರ್‌.ವಿ. ಹೆಣ್ಣುಮಕ್ಕಳ ಪ್ರೌಢ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು



ಜೆ.ಸಿ. ನಗರದ ಮುನಿರೆಡ್ಡಿಪಾಳ್ಯದಲ್ಲಿ ₹4 ಕೋಟಿ ವೆಚ್ಚದಲ್ಲಿ ನವೀಕರಣಗೊಂಡಿರುವ ಬಿಬಿಎಂಪಿ ಹೆರಿಗೆ ಆಸ್ಪತ್ರೆಯನ್ನು ಹೆಬ್ಬಾಳ ಕ್ಷೇತ್ರದ ಶಾಸಕ ಬೈರತಿ ಸುರೇಶ್ ಉದ್ಘಾಟಿಸಿದರು. ಬಿಬಿಎಂಪಿ ವಿಶೇಷ ಆಯುಕ್ತ ರವೀಂದ್ರ, ಜಂಟಿ ಆಯುಕ್ತರಾದ ಶಿಲ್ಪಾ, ಲತಾ, ಬಿಬಿಎಂಪಿಯ ಮಾಜಿ ವಿರೋಧ ಪಕ್ಷದ ನಾಯಕ ಅಬ್ದುಲ್ ವಾಜೀದ್, ಕ್ಷೇತ್ರ ಆರೋಗ್ಯಾಧಿಕಾರಿ ಡಾ.ವೇದಾವತಿ, ಕಾರ್ಯಪಾಲಕ ಎಂಜಿನಿಯರ್ ಅಶೋಕ್ ಹಾಜರಿದ್ದರು

'ಬಿಸಿಯೂಟ: ಕನಿಷ್ಠ ವೇತನಕ್ಕೆ ಅರ್ಹರಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಮುಖ್ಯ ಅಡುಗೆ ತಯಾಕರು ಮತ್ತು ಅಡುಗೆ ತಯಾರಕರು ಕನಿಷ್ಠ ವೇತನ ಕಾಯ್ದೆಯಡಿ ವೇತನ ಪಡೆಯಲು ಅರ್ಹರಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಸಾಮಾಜಿಕ ಕಾರ್ಯಕರ್ತ ಎಂ.ಎಸ್. ನೌಹೇರಾ ಶೇಖ್ ಸಲ್ಲಿಸಿದ್ದ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ, 'ಕರ್ನಾಟಕ ಕನಿಷ್ಠ ವೇತನ ನಿಯಮಗಳು-1958ರ ಪ್ರಕಾರ ದಿನದ ಕೆಲಸದ ಅವಧಿ 9 ಗಂಟೆ ಇರಬೇಕು. ಈ ಮಾನದಂಡ ಮುಖ್ಯ ಅಡುಗೆ ತಯಾರಕರು ಮತ್ತು ಅಡುಗೆ ತಯಾರಕರ ವಿಚಾರದಲ್ಲಿ ಪಾಲನೆಯಾಗಿಲ್ಲ' ಎಂದು ಹೇಳಿದೆ.

ಬಿಸಿಯೂಟ ತಯಾರಿಸುವ ಮುಖ್ಯ ಅಡುಗೆ ತಯಾಕರು ಮತ್ತು ಅಡುಗೆ ಸಹಾಯಕರಿಗೆ ಕನಿಷ್ಠ ವೇತನ ಕಾಯ್ದೆ-1948ರ ಅಡಿ ಸೂಕ್ತ ವೇತನ ನಿಗದಿಪಡಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಅರ್ಜಿದಾರರು ಕೋರಿದ್ದರು.

ಪಂಚಮಸಾಲಿ ಮೀಸಲಾತಿ: ಸಮಿತಿಗೆ ತಡೆ

ಬೆಂಗಳೂರು:'ಲಿಂಗಾಯತ ಪಂಚಮಸಾಲಿ ಉಪ ಪಂಗಡವನ್ನು 2-ಎಗೆ ಸೇರ್ಪಡೆ ಮಾಡುವ ವಿಷಯದಲ್ಲಿ ಮುಂದಿನ ಆದೇಶದವರೆಗೆ ಮುಂದುವರಿಯಬಾರದು' ಎಂದು ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ. ಆಡಿ ನೇತೃತ್ವದ ಸಮಿತಿಗೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ 'ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ'ದ ಪ್ರಧಾನ ಕಾರ್ಯದರ್ಶಿ ವೆಂಕಟರಾಮಯ್ಯ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ. ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ಪೀಠ ಈ ಕುರಿತಂತೆ ಇತ್ತೀಚೆಗೆ ಆದೇಶಿಸಿದೆ.

ಅರ್ಜಿಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವನ್ನೂ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಲು ಅರ್ಜಿದಾರರರಿಗೆ ನಿರ್ದೇಶಿಸಲಾಗಿದ್ದು ಇದೇ 24ಕ್ಕೆ ವಿಚಾರಣೆ ಮುಂದೂಡಲಾಗಿದೆ.

'ಸಮಿತಿ ರಚಿಸಿರುವ ರಾಜ್ಯ ಸರ್ಕಾರದ ಕ್ರಮ ಕಾನೂನು ಬಾಹಿರ' ಎಂಬುದು ಅರ್ಜಿದಾರರ ಆಕ್ಷೇಪ.

ಪಂಚಮಸಾಲಿ ಉಪ ಪಂಗಡವನ್ನು 3-ಬಿ ವಿಭಾಗದಿಂದ 2-ಎ ವ್ಯಾಪ್ತಿಗೆ ಸೇರ್ಪಡೆ ಮಾಡಬೇಕೆಂಬ ಬೇಡಿಕೆ ಪರಿಶೀಲಿಸಿ ವರದಿ ಸಲ್ಲಿಸಲು ನ್ಯಾಯಮೂರ್ತಿ ಸುಭಾಷ್ ಆಡಿ ನೇತೃತ್ವದ ಸಮಿತಿ ರಚಿಸಿ ರಾಜ್ಯ ಸರ್ಕಾರ 2021ರ ಜುಲೈ 1ರಂದು ಆದೇಶಿಸಿತ್ತು

'ಚೈತನ್ಯ ಹೆಚ್ಚಿಸಿದ್ದ ಸಿದ್ಧಲಿಂಗಯ್ಯ ಕಾವ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತ ಕವಿ ಸಿದ್ಧಲಿಂಗಯ್ಯ ಅವರ ಕವಿತೆಗಳು ನಾಡಿನ ಚೈತನ್ಯವನ್ನು ಹೆಚ್ಚಿಸಿದ್ದವು' ಎಂದು ಚಿಂತಕ ಪುರುಷೋತ್ತಮ ಬಿಳಿಮಲೆ ಹೇಳಿದರು.

ಜಯನಗರದ ವಿಜಯ ಕಾಲೇಜು ಮತ್ತು ಶಂಪಾ ಪ್ರತಿಷ್ಠಾನ ಆಯೋಜಿಸಿದ್ದ 'ಸಿದ್ದಲಿಂಗಯ್ಯ ಅವರ ಬದುಕು–ಬರಹ' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

'1970 ಮತ್ತು 1980ರ ದಶಕದಲ್ಲಿ ಕಾಲೇಜುಗಳಲ್ಲಿ ಪಠ್ಯದಲ್ಲಿ ಓದುತ್ತಿದ್ದ ಸಾಹಿತ್ಯ ನಮ್ಮಲ್ಲಿ ಸಾಹಿತ್ಯದ ಸೂಕ್ಷ್ಮದ ಬಗ್ಗೆ ತಿಳಿದುಕೊಳ್ಳಲು ನೆರವಾದವು. ಅದೇ ಹೊತ್ತಿನಲ್ಲಿ ಬೀದಿ ಬೀದಿಗಳಲ್ಲಿ, ಗೋಡೆಗಳ ಮೇಲೆ ಸಿದ್ಧಲಿಂಗಯ್ಯನವರ ಪದ್ಯಗಳು ರಾರಾಜಿಸುತ್ತಿದ್ದವು. ಅವು ನಮ್ಮ ಬದುಕಿನ ಭಾಗವೇ ಎನ್ನಿಸುವಂತಿದ್ದವು. ಆದ್ದರಿಂದ ಅವು ನಮ್ಮ ಎದೆಗೆ ಮುಟ್ಟುತ್ತಿದ್ದವು' ಎಂದರು.

ವಿಚಾರ ಸಂಕಿರಣ ಉದ್ಘಾಟಿಸಿದ ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, 'ಸಿದ್ಧಲಿಂಗಯ್ಯ ಅವರು ಚಿಕ್ಕಂದಿನಿಂದಲೇ ಹಸಿವು ಮತ್ತು ಶೋಷಣೆಯನ್ನು ಕಂಡವರು. ಅದರ ವಿರುದ್ಧದ ಆಕ್ರೋಶ ಮುಂದೆ ಪದ್ಯವಾಗಿ ಹೊರ ಬಂದವು' ಎಂದರು.

'ಡಾ.ಸಿದ್ಧಲಿಂಗಯ್ಯ: ಒಡನಾಟದ ರಸನಿಮಿಷಗಳು' ಕುರಿತು ಸಾಹಿತಿ ಬಿ.ಟಿ. ಲಲಿತಾ ನಾಯಕ್, ಸಿದ್ಧಲಿಂಗಯ್ಯನವರ ಆತ್ಮಕತೆ 'ಊರುಕೇರಿ' ಕುರಿತು ಲೇಖಕ ರಾಧಾಕೃಷ್ಣ ಉಳಿಯತ್ತಡ್ಕ ಮಾತನಾಡಿದರು.



ಬೆಳ್ಳಿ ಕಿರಣ ಕೃತಿಯನ್ನು ರಾಜ್ಯಸಭೆ ಸದಸ್ಯ ಕೆ.ನಾರಾಯಣ ಬಿಡುಗಡೆ ಮಾಡಿದರು. ವಿಜಯ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಡಿ.ಆರ್‌ ಸುಧಾ, ಶಂಪಾ ಪ್ರತಿಸ್ಥಾನ ಸಂಸ್ಥಾಪಕ ಅಧ್ಯಕ್ಷೆ ಪ್ರಮೀಳಾ ಮಾಧವ, ಬೈರಮಂಗಲ ರಾಮೇಗೌಡ. ಬಿಎಚ್‌ಎಸ್ ಉನ್ನತ ಶಿಕ್ಷಣ ಸಂಸ್ಥೆಯ ಖಜಾಂಚಿ ಎ.ಕೆ. ಅತ್ರೆ, ಮಾನಸಾ ಸಿದ್ಧಲಿಂಗಯ್ಯ ಮತ್ತು ರಮಾ ಕುಮಾರಿ ಸಿದ್ಧಲಿಂಗಯ್ಯ ಇದ್ದರು —ಪ್ರಜಾವಾಣಿ ಚಿತ್ರ

'ಸ್ವರಾಜ್' ಧಾರಾವಾಹಿ ನಾಳೆಯಿಂದ

ಬೆಂಗಳೂರು: ಸ್ವಾತಂತ್ರ್ಯ ಹೋರಾಟದ ಇತಿಹಾಸ ಬಿಂಬಿಸುವ 'ಸ್ವರಾಜ್ ಭಾರತ್ ಕೆ ಸ್ವತಂತ್ರ ಸಂಗ್ರಾಮ್ ಕಿ ಸಮಗ್ರ ಗಾಥಾ' ಕುರಿತ ಧಾರಾವಾಹಿ ದೂರದರ್ಶನ–ಚಂದನದಲ್ಲಿ ಇದೇ 20ರಿಂದ ಪ್ರಸಾರವಾಗಲಿದೆ.

'ಇದು 75 ಕಂತುಗಳ ಮೆಗಾ ಧಾರಾವಾಹಿ. ವಾಸ್ಕೋ–ಡ–ಗಾಮ ಭಾರತಕ್ಕೆ ಬಂದ ಘಟನೆಯಿಂದ ಆರಂಭಿಸಿ, 15ನೇ ಶತಮಾನದ ನಂತರದ ಭಾರತದ ಸ್ವಾತಂತ್ರ್ಯ ಹೋರಾಟದ ವೈಭವದ ಇತಿಹಾಸವನ್ನು ಈ ಧಾರಾವಾಹಿ ವಿವರಿಸುತ್ತದೆ' ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ವಾರ್ತಾ ಮಾಹಿತಿ ಬ್ಯೂರೊ(ಪಿಐಬಿ) ಹೆಚ್ಚುವರಿ ಮಹಾನಿರ್ದೇಶಕ ಎಸ್‌.ಜೆ. ರವೀಂದ್ರ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಕನ್ನಡ ಸೇರಿ 20 ಭಾಷೆಗಳಲ್ಲಿ ಈ ಧಾರಾವಾಹಿ ಪ್ರಸಾರವಾಗುತ್ತಿದೆ. ಮುಖ್ಯವಾಗಿ ಅನಾಮಧೇಯವಾಗಿ ಉಳಿದಿರುವ ಅನೇಕ ಸ್ವಾತಂತ್ರ್ಯ ವೀರರ ಜೀವನ ಹಾಗೂ ತ್ಯಾಗವನ್ನು ಈ ಧಾರಾವಾಹಿ ಬಿಂಬಿಸುತ್ತದೆ. ಇತಿಹಾಸಕಾರರ ತಂಡದ ಸಂಶೋಧನೆಗಳ ಆಧಾರದ ಮೇಲೆ ಈ ಧಾರಾವಾಹಿಯನ್ನು ಪ್ರಸ್ತುತಪಡಿಸಲಾಗಿದೆ. ಚಲನ ಚಿತ್ರ ನಟ ಮನೋಜ್ ಜೋಶಿ ಅವರು ಸೂತ್ರಧಾರನ ಪಾತ್ರದಲ್ಲಿ ಇದನ್ನು ನಿರೂಪಿಸಿದ್ದಾರೆ' ಎಂದು ವಿವರಿಸಿದರು.

ಕಾರ್ಯಕ್ರಮ ಮುಖ್ಯಸ್ಥರಾದ ನಿರ್ಮಲಾ ಸಿ. ಯಲಿಗಾರ್ ಮಾತನಾಡಿ, 'ಈ ಧಾರಾವಾಹಿಯು ರಾಣಿ ಅಬ್ಬಕ್ಕ, ಚನ್ನಬೈರಾದೇವಿ, ಶಿವಪ್ಪನಾಯಕ, ರಾಮರಾಯರಂತಹ ಅನೇಕ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಬೆಳಕು ಚೆಲ್ಲಲಿದೆ. ಶ್ರೇಷ್ಠ ಗುಣಮಟ್ಟ ಮತ್ತು ದೃಶ್ಯ ವೈಭವದಿಂದ ಈ ಧಾರಾವಾಹಿ ನಿರ್ಮಿಸಲಾಗಿದೆ' ಎಂದು ವಿವರಿಸಿದರು.

ಚಂದನದಲ್ಲಿ ಪ್ರಸಾರವಾಗುವ ಸಮಯ

- ಪ್ರತಿ ಶನಿವಾರ ರಾತ್ರಿ 8ಗಂಟೆಯಿಂದ 9ರವರೆಗೆ
- ಪ್ರತಿ ಸೋಮವಾರ ಸಂಜೆ 5ಗಂಟೆಯಿಂದ 6ರವರೆಗೆ ಮರುಪ್ರಸಾರ
- ಪ್ರತಿ ಬುಧವಾರ ರಾತ್ರಿ 8ಗಂಟೆಯಿಂದ 9ರವರೆಗೆ ಮರುಪ್ರಸಾರ
- ಪ್ರತಿ ಶುಕ್ರವಾರ ಬೆಳಿಗ್ಗೆ 10ರಿಂದ 11ಗಂಟೆಯವರೆಗೆ ಮರುಪ್ರಸಾರ

ಆಕಾಶವಾಣಿಯಲ್ಲಿ ಪ್ರಸಾರದ ಸಮಯ

- ಪ್ರತಿ ಶನಿವಾರ ಬೆಳಿಗ್ಗೆ 11 ಗಂಟೆಯಿಂದ 12ರವರೆಗೆ
- ಪ್ರತಿ ಭಾನುವಾರ ಸಂಜೆ 3 ರಿಂದ 4 ರವರೆಗೆ ಮರುಪ್ರಸಾರ

ಎಂಜಿನ್ ಕೆಟ್ಟು ಸಂಪರ್ಕ ಕ್ರಾಂತಿ ರೈಲು 2 ತಾಸು ವಿಳಂಬ

ದಾವಣಗೆರೆ: ಯಶವಂತಪುರದಿಂದ ದೆಹಲಿಗೆ ಹೋಗುತ್ತಿದ್ದ ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್ ರೈಲಿನ ಎಂಜಿನ್ ಕೆಟ್ಟಿದ್ದರಿಂದ ಚಿಕ್ಕಜಾಜೂರು – ದಾವಣಗೆರೆ ಮಧ್ಯೆ ಹನುಮನಹಳ್ಳಿಯಲ್ಲಿ 2 ಗಂಟೆಗೂ ಅಧಿಕ ಸಮಯ ನಿಂತಿತ್ತು. ಚಿಕ್ಕಜಾಜೂರು ರೈಲು ನಿಲ್ದಾಣದಿಂದ ಎಂಜಿನ್ ತರಿಸಿ ಕೆಟ್ಟಿರುವ ಎಂಜಿನ್ ಬದಲಾಯಿಸಿದ ಬಳಿಕ ರೈಲು ಪ್ರಯಾಣ ಮುಂದುವರಿಸಿತು.

12629 ಸಂಖ್ಯೆಯ ರೈಲು ಯಶವಂತಪುರದಿಂದ ಮಧ್ಯಾಹ್ನ 2.30ಕ್ಕೆ ಹೊರಟಿತ್ತು. 7 ಗಂಟೆಗೆ ದಾವಣಗೆರೆಗೆ ತಲುಪಬೇಕಿತ್ತು. 6.45ರ ಸುಮಾರಿಗೆ ದಾವಣಗೆರೆಗಿಂತ ಸುಮಾರು 15 ಕಿಲೋಮೀಟರ್ ಹಿಂದೆಯೇ ರೈಲು ಕೆಟ್ಟು ನಿಂತಿತು. ಚಲಿಸದ ರೈಲಿನಲ್ಲಿ ಕಾದು ಕುಳಿತು ಪ್ರಯಾಣಿಕರು ಸುಸ್ತಾದರು. ಎಂಜಿನ್ ಬದಲಾಯಿಸಿದ ಬಳಿಕ ರಾತ್ರಿ 9ಕ್ಕೆ ದಾವಣಗೆರೆಗೆ ತಲುಪಿತು.

ದಾವಣಗೆರೆ, ಹರಿಹರ, ರಾಣೆಬೆನ್ನೂರು, ಹಾವೇರಿ ಸಹಿತ ವಿವಿಧ ಪ್ರದೇಶಗಳ ಜನರು ತಡವಾಗಿ ಮನೆ ಸೇರಿದರು.

ಬೆಂಗಳೂರು ರೇಸ್

ದಿ ಸಾವರಿನ್ ಒರ್ಬ್ ಗೆಲ್ಲುವ ನಿರೀಕ್ಷೆ

ಲೀಡಿಂಗ್ ಸ್ಟಡ್ ಸ್ಟೇಕ್ಸ್ ಶುಕ್ರವಾರ ಮುಕ್ತಾಯಗೊಳ್ಳಲಿರುವ ಬೆಂಗಳೂರು ಬೇಸಿಗೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ದಿ ಸಾವರಿನ್ ಒರ್ಬ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು

1ನೇ ರೇಸ್: ಸನ್‌ಶೈನ್ ಪ್ರಿನ್ಸ್ 2, ಎಕೊ ಫ್ರೆಂಡ್ಲಿ 2, ಹ್ಯಾಂಡ್ಸಮ್ ರಾಕಿ 5
2ನೇ ರೇಸ್: ಟಾಪ್ ಡ್ಯಾನ್ಸರ್ 7, ಮೆಷರ್ ಆಫ್ ಟೈಮ್ 1, ನಾಟಿ ಇನ್ ಬ್ಲೂ 2
3ನೇ ರೇಸ್: ಶ್ಯಾಮ್‌ರಾಕ್ 3, ಗೋಲ್ಡನ್ ಡ್ರೀಮ್ 1, ಸಿಲ್ವರ್ ಸ್ವಿಫ್ಟ್ 4
4ನೇ ರೇಸ್: ಶ್ಯಾಮ್‌ರಾಕ್ 4, ಟ್ರೆವಾಲಿಯನ್ 8, ಸ್ಯಾಲೆಂಟೊ 3
5ನೇ ರೇಸ್: ದಿ ಸಾವರಿನ್ ಒರ್ಬ್ 6, ಟ್ರಫಾಲ್ಗರ್ 1, ಅಪ್ಪರ ಸ್ಟಾರ್ 4
6ನೇ ರೇಸ್: ಯುಕಾನ್ 6, ಸ್ಟಾರ್ ಗ್ಲೋರಿ 1, ಮಿಸ್ಟಿಕ್ ಐ 5
7ನೇ ರೇಸ್: ವಿನ್‌ಮೈಲವ್ 3, ಡಾ. ಲೋಗನ್ 6, ಸ್ಟ್ರೈಕಿಂಗ್ ಮೆಮೋರಿ 5

ಉತ್ತಮ ಬೆಟ್: ಶ್ಯಾಮ್‌ರಾಕ್

ಜಾಕ್‌ಪಾಟ್	1ನೇ ಟ್ರೆಬಲ್	2ನೇ ಟ್ರೆಬಲ್
3,4,5,6,7	2,3,4	5,6,7


ನಗರದಲ್ಲಿ ಇಂದು

ವಚನ ಶ್ರಾವಣ: ವಚನ ಗಾಯನ: ಟಿ.ಎಂ. ಜಾನಕಿ, ಉಪನ್ಯಾಸ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಮೂರ್ತಿ. ಜಿ.ಎಂ., ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ವಿವೇಕ ವಿದ್ಯಾಲಯ ಪ್ರೌಢಶಾಲೆ, ಅಂದ್ರಹಳ್ಳಿ, ಪೀಣ್ಯ 2ನೇ ಹಂತ, ಬೆಳಿಗ್ಗೆ 9.30

ಮುನೇಶ್ವರ ಸ್ವಾಮಿ ದೇವಾಲಯದ ವಾರ್ಷಿಕೋತ್ಸವ: ಬೆಳಿಗ್ಗೆ 9: ಕಳಸ ಸ್ಥಾಪನೆ, ವಾಸ್ತು ಹೋಮ, ಗಣ ಹೋಮ, ನವಗ್ರಹ ಹೋಮ, ಶಾಂತಿ ಹೋಮ, ರುದ್ರಹೋಮ, ಮುನೇಶ್ವರ ಹೋಮ, ಅಭಿಷೇಕ ಅಲಂಕಾರ, ಮಹಾಮಂಗಳಾರತಿ, ಮಧ್ಯಾಹ್ನ 1: ಪ್ರಸಾದ ವಿನಿಯೋಗ, ಸ್ಥಳ: ಜ್ಞಾನಭಾರತಿ ಆವರಣ

ಮಧುರ ಸ್ಮೃತಿ–2022: ಅತಿಥಿಗಳು: ಲಿಂಗರಾಜ ಗಾಂಧಿ, ಎಂ. ಮುನಿರಾಜು, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗ, ಸ್ಥಳ: ಜ್ಞಾನ ಜ್ಯೋತಿ ಸಭಾಂಗಣ, ಬೆಳಿಗ್ಗೆ 9.30

ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ ಮಾಲೆ–2: ವಿಷಯ: ಸಿನೆಮಾ ಸಾಹಿತ್ಯ: ಅನುಸಂಧಾನ, ಉಪನ್ಯಾಸ: ಗಿರೀಶ್ ಕಾಸರವಳ್ಳಿ, ಆಯೋಜನೆ: ಕನ್ನಡ ಸಂಘ, ಕ್ರೈಸ್ಟ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಹೊಸೂರು ರಸ್ತೆ, ಮಧ್ಯಾಹ್ನ 3.30



ಗಿರೀಶ್ ಕಾಸರವಳ್ಳಿ

ರಾಜ್ಯ ಮಟ್ಟದ ಲೆಕ್ಕ ಪರಿಶೋಧಕರ ಸಮ್ಮೇಳನ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ದೇಬಶಿಸ್ ಮಿತ್ರಾ, ಶ್ರೀನಿವಾಸ್.ಟಿ., ಆಯೋಜನೆ: ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯ ದಕ್ಷಿಣ ಭಾರತ ಪ್ರಾಂತೀಯ ಮಂಡಳಿ ಬೆಂಗಳೂರು ಶಾಖೆ, ಸ್ಥಳ: ಅನಂತ್ಯ ಅರಮನೆ ಮೈದಾನ, ಗೇಟ್ 9, ಜಯಮಹಲ್, ಬೆಳಿಗ್ಗೆ 10

ವಾರ್ಷಿಕ ಕಲಾಪ್ರದರ್ಶನ ಹಾಗೂ ಗೌರವ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಎಸ್.ಜಿ. ವಾಸುದೇವ್, ಅಧ್ಯಕ್ಷತೆ: ಡಿ. ಮಹೇಂದ್ರ, ಅತಿಥಿಗಳು: ಆರ್.ಬಿ. ಭಾಸ್ಕರನ್, ಕೆ.ಎನ್. ಗಣೇಶಯ್ಯ, ಅಶೋಕ್ ಎನ್. ಚಲವಾದಿ, ಆಯೋಜನೆ: ಕರ್ನಾಟಕ ಲಲಿತ ಕಲಾ ಅಕಾಡೆಮಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಬೆಳಿಗ್ಗೆ 11, ಗೌರವ ಪ್ರಶಸ್ತಿ ಪ್ರದಾನ–ವಾರ್ಷಿಕ ಬಹುಮಾನ ಪ್ರದಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಕೊಳಚೆ ಪ್ರದೇಶದ ನಿವಾಸಿಗಳಿಗೆ ಉಚಿತ ಕ್ಷೌರ ಸೇವೆ, ಅನ್ನದಾನ ಕಾರ್ಯಕ್ರಮ: ಉದ್ಘಾಟನೆ: ಸಿ.ಕೆ. ರಾಮೇಗೌಡ, ಅಧ್ಯಕ್ಷತೆ: ಯು. ಕೃಷ್ಣಮೂರ್ತಿ, ಅತಿಥಿಗಳು: ಶೋಭಾ ಅಂಜನಪ್ಪ, ಕೃಷ್ಣಪ್ಪ ಎನ್., ಆರ್ ನಾರಾಯಣ ಸ್ವಾಮಿ, ಆಯೋಜನೆ: ಅಣ್ಣಾ ಹಜಾರೆ ಸಮಾಜ ಸೇವಾ ಟ್ರಸ್ಟ್, ಸ್ಥಳ: ಟೆಲಿವಿಷನ್ ಆರ್ಟಿಸ್ಟ್ಸ್ ಕ್ಲಬ್ ಪಕ್ಕ, ಭಾರತ್ ಸೊಸೈಟಿ ಲೇಔಟ್, ದೊರೆಕೆರೆ ಹತ್ತಿರ, ಪದ್ಮನಾಭನಗರ, ಮಧ್ಯಾಹ್ನ 12



'ಹಲಗಲಿ ಸಮರ' ನಾಟಕದ ದೃಶ್ಯ

'ಹಲಗಲಿ ಸಮರ' ನಾಟಕ ಪ್ರದರ್ಶನ: ರಚನೆ, ನಿರ್ದೇಶನ: ಅಡ್ಡಂಡ.ಸಿ. ಕಾರ್ಯಪ್ಪ, ಆಯೋಜನೆ: ರಂಗಾಯಣ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಸಂಜೆ 6.30

ಡಾಟಾ ಸೈನ್ಸ್ ಅಟ್ ವರ್ಕ್: ಅತಿಥಿಗಳು: ರೋಹಿತ್ ಆಚಾರ್ಯ, ಆಯೋಜನೆ ಮತ್ತು ಸ್ಥಳ: ಬಿ.ಎನ್. ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಮಧ್ಯಾಹ್ನ 3

ಎಚ್.ಆರ್. ಸುಜಾತಾ ಅವರ 'ಮಣಿಬಾಲೆ' ಕೃತಿ ಬಿಡುಗಡೆ: ಅಧ್ಯಕ್ಷತೆ: ಜಿ.ಎನ್. ರಂಗನಾಥ ರಾವ್, ಕೃತಿ ಬಿಡುಗಡೆ: ಪುರುಷೋತ್ತಮ ಬಿಳಿಮಲೆ, ಕೃತಿ ಪರಿಚಯ: ಎಂ.ಎಸ್. ಆಶಾದೇವಿ, ಉಪಸ್ಥಿತಿ: ಎಚ್.ಆರ್. ಸುಜಾತಾ, ಆಯೋಜನೆ: ಸಂಕಥನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರ ಕೃಪಾ ರಸ್ತೆ, ಸಂಜೆ 5

ಸಂಗೀತ ಕಛೇರಿ: ಪ್ರಸ್ತುತಿ: ಕೊಳಲು: ಎಲ್.ವಿ. ಮುಕುಂದ್, ವೈಲಿನ್: ಶ್ರೀನಿಧಿ, ಮೃದಂಗ: ಜಿ.ಎಸ್. ನಾಗರಾಜ, ಘಟ: ಸುಕನ್ಯಾ ರಾಮಗೋಪಾಲ್, ಆಯೋಜನೆ: ಶಾರದಾ ಸಾಂಸ್ಕೃತಿಕ ಸಂಘ, ಸ್ಥಳ: ಎಸ್‌ಬಿಐ ಆಫೀಸರ್ಸ್ ಕಾಲೊನಿ, ಸಭಾಂಗಣ, ಬಸವೇಶ್ವರನಗರ, ಸಂಜೆ 6.30

ಹರಿನಾಮ ಸಂಕೀರ್ತನೆ: ಗಾಯನ: ರಮ್ಯಾ ಸುಧೀರ್, ತಬಲಾ: ಶ್ರೀನಿವಾಸ ಕಾಖಂಡಕಿ, ಕೀ ಬೋರ್ಡ್: ಅಮಿತ್ ಶರ್ಮಾ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಅಭಯಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 6.30

ಶ್ರೀದೇವಿ ಮಹಾತ್ಮೆ (ಮಹಿಷ ಮರ್ದಿನಿ) ಯಕ್ಷಗಾನ ಕಾರ್ಯಕ್ರಮ: ಮಾರ್ಗದರ್ಶನ: ವಿ.ಸೋಮಣ್ಣ, ಸಂಯೋಜನೆ: ಸಂತೋಷ್ ಶೆಟ್ಟಿ, ಆಯೋಜನೆ: ದರ್ಗಾ ಪರಮೇಶ್ವರಿ ಅಮ್ಮನವರ ದೇವಸ್ಥಾನ ಟ್ರಸ್ಟ್, ಚಂದ್ರಾ ಬಡಾವಣೆ, ಸಂಜೆ 6

'ಚಂದ್ರಮುಖಿ ಸೂರ್ಯಸಖಿ' ಯಕ್ಷಗಾನ ಪ್ರದರ್ಶನ: ಪ್ರಸ್ತುತಿ: ಸಾಲಿಗ್ರಾಮ ಮೇಳ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ



ಚಿಗುರು ನೃತ್ಯಾಲಯ

ಕಲಾವಿತಂಸ–2022: ಅತಿಥಿಗಳು: ಬೃಂದಾ.ಕೆ., ವೈ.ಕೆ. ಸಂಧ್ಯಾ ಶರ್ಮಾ, ರೂಪಶ್ರೀ ಮಧುಸೂದನ್, ಬಿ.ಎಸ್. ಇಂದು ನಾಡಿಗ್, ಎಚ್.ಎನ್. ಗುರುರಾಜ್, ಆಯೋಜನೆ: ಚಿಗುರು ನೃತ್ಯಾಲಯ, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ, ಮಧ್ಯಾಹ್ನ 2.30

ಬಿಜೆಪಿ, ಕಾಂಗ್ರೆಸ್ ನಡುವೆ ಜಟಾಪಟಿ; ಆಗಸ್ಟ್ 26ರಂದು ಎಸ್‌ಪಿ ಕಚೇರಿಗೆ ಕಾಂಗ್ರೆಸ್ ಕಾರ್ಯಕರ್ತರ ಮುತ್ತಿಗೆ

ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆತ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಮಳೆಯಿಂದ ಹಾನಿಗೀಡಾದ ಪ್ರದೇಶಗಳನ್ನು ವೀಕ್ಷಿಸಲು ಗುರುವಾರ ಬಂದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಬಿಜೆಪಿ ಕಾರ್ಯಕರ್ತರು ಘೇರಾವ್ ಹಾಕಿದರು. ಕಪ್ಪು ಬಾವುಟ ಪ್ರದರ್ಶಿಸಿ, ಅವರು ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ಕೋಳಿಮೊಟ್ಟೆ ಎಸೆದು ಆಕ್ರೋಶ ವ್ಯಕ್ತಪಡಿಸಿದರು.

ಮೊದಲಿಗೆ ತಿತಿಮತಿಯಲ್ಲಿ ಕಾರನ್ನು ತಡೆದು, ಕರಪತ್ರ ಒಳಕ್ಕೆ ಎಸೆದು, ಧಿಕ್ಕಾರ ಕೂಗಿದರು. ನಂತರ, ಮಡಿಕೇರಿಯಲ್ಲಿ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಸೇರಿ ಕಾರಿನ ಮೇಲೆ ಕೋಳಿಮೊಟ್ಟೆ ಎಸೆದರು. ಕೆಲವು ಮೊಟ್ಟೆಗಳು ಪತ್ರಕರ್ತರ ಮೇಲೂ ಬಿದ್ದವು.

'ಕೊಡಗು ವಿರೋಧಿ ಸಿದ್ದರಾಮಯ್ಯ', 'ಶಾಂತಿಪ್ರಿಯ ಕೊಡಗಿಗೆ ಸಿದ್ದರಾಮಯ್ಯ ಬರುವುದು ಬೇಡ', 'ಟಿಪ್ಪು ಜಯಂತಿಯನ್ನು ಬಲವಂತವಾಗಿ ಹೇರಿದ ಹಿಂದೂ ವಿರೋಧಿ' ಎಂಬ ಘೋಷಣೆಗಳನ್ನ ಕೂಗಿದರು.

ಅದನ್ನು ಖಂಡಿಸಿದ ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳಕ್ಕೆ ಬಂದು ಬಿಜೆಪಿ ವಿರುದ್ಧ ಧಿಕ್ಕಾರ ಕೂಗಿದರು. ಬಿಜೆಪಿ ಕಾರ್ಯಕರ್ತರತ್ತ ನುಗ್ಗಲು ಯತ್ನಿಸಿದಾಗ, ಪೊಲೀಸರು ವೃತ್ತದ ಎರಡೂ ಬದಿಗಳಲ್ಲಿ ಉಭಯ ಪಕ್ಷದ ಕಾರ್ಯಕರ್ತರನ್ನು ತಡೆದರು.

'ಕೋಳಿಮೊಟ್ಟೆ ಎಸೆದವರನ್ನು ಬಂಧಿಸಿ, ಇಲ್ಲವೇ ನಮ್ಮನ್ನು ಬಂಧಿಸಿ' ಎಂದು ಕಾರ್ಯಕರ್ತರು ವೃತ್ತದಲ್ಲಿ ಕುಳಿತು ಪ್ರತಿಭಟನೆ ನಡೆಸಿದರು. ಪ್ರತಿಯಾಗಿ ಬಿಜೆಪಿ ಕಾರ್ಯಕರ್ತರು, ನಗರ ಸಭೆ ಸದಸ್ಯರು ಕಪ್ಪು ಬಾವುಟ ಹಿಡಿದು ಸಿದ್ದರಾಮಯ್ಯ ವಿರುದ್ಧ ಘೋಷಣೆಗಳನ್ನು ಕೂಗಿದರು.

ಸ್ಥಳಕ್ಕೆ ಬಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ. ಅಯ್ಯಪ್ಪ, ಉಭಯ ಪಕ್ಷದ ನಾಯಕರ ಮನವೊಲಿಸಿದರು. ಇದರಿಂದಾಗಿ 30 ನಿಮಿಷಗಳಿಗೂ ಹೆಚ್ಚು ಕಾಲ ಸಂಚಾರದಟ್ಟಣೆ ಉಂಟಾಗಿತ್ತು.



ಮಡಿಕೇರಿಯ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಗುರುವಾರ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಕಾರಿಗೆ ಬಿಜೆಪಿ ಕಾರ್ಯಕರ್ತರು ಘೇರಾವ್ ಹಾಕಿದರು. ಪ್ರತಿಯಾಗಿ ಕಾಂಗ್ರೆಸ್ ಕಾರ್ಯಕರ್ತರೂ ಘೋಷಣೆಗಳನ್ನು ಕೂಗಿದರು

> **ತಿತಿಮತಿಯಲ್ಲಿ ಪ್ರತಿಭಟಿಸಿದವರನ್ನು ಬಂಧಿಸಿದ್ದರೆ ಇಡೀ ಜಿಲ್ಲೆಯಲ್ಲಿ ಇದು ಮರುಕಳಿಸುತ್ತಿರಲಿಲ್ಲ. ಪೊಲೀಸರು ಆರ್‌ಎಸ್‌ಎಸ್ ಜತೆ ಶಾಮೀಲಾಗಿ ಪಿತೂರಿ ನಡೆಸಿದ್ದಾರೆ**
> **ಸಿದ್ದರಾಮಯ್ಯ,** ವಿರೋಧ ಪಕ್ಷದ ನಾಯಕ

> **ಸಿದ್ದರಾಮಯ್ಯ ಕಾರಿಗೆ ಮೊಟ್ಟೆಯನ್ನು ತೂರಿರುವ ಘಟನೆ ಬಗ್ಗೆ ಅರಿವಿದೆ. ಅವರಿಗೆ ಸೂಕ್ತ ರಕ್ಷಣೆ ಒದಗಿಸಬೇಕು ಎಂದು ರಾಜ್ಯದ ಡಿಜಿ–ಐಜಿಪಿ ಅವರಿಗೆ ಸೂಚಿಸಲಾಗಿದೆ.**
> **ಆರಗ ಜ್ಞಾನೇಂದ್ರ,** ಗೃಹ ಸಚಿವ

> **ಅತಿವೃಷ್ಟಿಯಿಂದ ಹಾನಿಯಾಗಿ ಹಲವು ದಿನಗಳಾಗಿವೆ. ಪರಿಹಾರ ಕೊಟ್ಟ ಮೇಲೆ ಈಗೇಕೆ ಪ್ರವಾಸ ಮಾಡುತ್ತಿದ್ದಾರೋ ಗೊತ್ತಿಲ್ಲ**
> **ಎಸ್.ಟಿ.ಸೋಮಶೇಖರ್,** ಸಹಕಾರ ಸಚಿವ

ನಂತರ ಕಾಂಗ್ರೆಸ್ ಕಾರ್ಯಕರ್ತರು ಸಿದ್ದರಾಮಯ್ಯ ಅವರನ್ನು ಜನರಲ್ ತಿಮ್ಮಯ್ಯ ವೃತ್ತದಿಂದ ಸುದರ್ಶನ ಅತಿಥಿ ಗೃಹದವರೆಗೂ ಮೆರವಣಿಗೆಯಲ್ಲಿ ಕರೆತಂದರು. ನಂತರ ಅವರು ಜಿಲ್ಲಾ ಪ್ರವಾಸ ಮುಗಿಸಿ ಹೊರಡುವಾಗ ಕುಶಾಲನಗರದ ಗುಡ್ಡೆಹೊಸೂರು ಸಮೀಪವೂ ಕಾರನ್ನು ಅಡ್ಡಗಟ್ಟಿ ಘೇರಾವ್ ಮಾಡಲು ಹಾಗೂ ಕಲ್ಲೆಸೆಯಲು ಯತ್ನಿಸಿದವರನ್ನು ಪೊಲೀಸರು ವಶಕ್ಕೆ ಪಡೆದರು. ಸಂಜೆ ಶನಿವಾರಸಂತೆಗೆ ತೆರಳುವ ಮಾರ್ಗದಲ್ಲೂ ಅವರ ವಾಹನ ಬಂದಾಗ ಬಿಜೆಪಿ ಕಾರ್ಯಕರ್ತರು ಕಪ್ಪುಬಾವುಟ ಪ್ರದರ್ಶಿಸಿ ಘೋಷಣೆ ಕೂಗಿದರು.

26ರಂದು ಪ್ರತಿಭಟನೆ: ಅದರಿಂದ ಕೋಪಗೊಂಡ ಸಿದ್ದರಾಮಯ್ಯ, 'ಹೆಜ್ಜೆಹೆಜ್ಜೆಗೂ ಬಿಜೆಪಿ ಕಾರ್ಯಕರ್ತರು ಕಪ್ಪುಬಾವುಟ ಪ್ರದರ್ಶಿಸಿದ್ದಾರೆ. ಪೊಲೀಸ್ ಇಲಾಖೆ ಭದ್ರತೆ ನೀಡಲು ವಿಫಲವಾಗಿದೆ. ಆಗಸ್ಟ್ 26ರಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುವುದು' ಎಂದು ತಿಳಿಸಿದರು.

ಬಿಜೆಪಿ ಕಾರ್ಯಕರ್ತರ ವರ್ತನೆ ಖಂಡಿಸಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ತಿ.ನರಸೀಪುರದ ರಾಷ್ಟ್ರೀಯ ಹೆದ್ದಾರಿಯ ಗರ್ಗೇಶ್ವರಿ ಬಳಿ ಗುರುವಾರ ಸಂಜೆ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು.

ಇದು ಹೇಡಿಗಳ ಕೃತ್ಯ: ಸಿದ್ದರಾಮಯ್ಯ

'ಕೊಡಗಿನಲ್ಲಿ 2018ರಲ್ಲಿ ಮಳೆಯಿಂದ ಮನೆ ಕಳೆದುಕೊಂಡವರಿಗೆ ಮನೆ ನೀಡಿಲ್ಲ. ಜಿಲ್ಲಾಧಿಕಾರಿ ಕಚೇರಿ ತಡೆಗೋಡೆ ಕಳಪೆಯಾಗಿರುವುದು ಗೊತ್ತಾಗಬಾರದು ಎಂದು ಬಿಜೆಪಿ ಕಾರ್ಯಕರ್ತರು ಘೇರಾವ್ ಹಾಕಿ ತಡೆಯುವಂಥ ಹೇಡಿತನದ ಕೆಲಸ ಮಾಡಿದರು' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

'ತಡೆಗೋಡೆಯ ಕಳಪೆ ಕಾಮಗಾರಿಯಲ್ಲಿ ಕಮಿಷನ್ ಹಣ ಜನಪ್ರತಿನಿಧಿಗಳಿಗೂ ಹೋಗಿದೆ. ಕೊಡಗಿನಲ್ಲೂ ಬಿಜೆಪಿ ವಿರುದ್ಧ ಜನಸಾಮಾನ್ಯರಲ್ಲಿ ಆಕ್ರೋಶ ಮಡುಗಟ್ಟಿದ್ದು, ಬದಲಾವಣೆ ಬಯಸಿದ್ದಾರೆ. ಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ಇಲ್ಲಿನ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ನಿಶ್ಚಿತವೆಂಬುದನ್ನು ತಿಳಿದೇ ಹಣ ಕೊಟ್ಟು ಜನರನ್ನು ಕರೆತಂದು ಪ್ರತಿಭಟನೆ ನಡೆಸಿದರು' ಎಂದು ದೂರಿದರು.

'ಹಲವು ಬಾರಿ ಕೊಡಗಿಗೆ ಬಂದಿದ್ದಾಗ ಪ್ರತಿಭಟನೆ ಎದುರಾಗಿರಲಿಲ್ಲ. ಈಗ ಮಾತ್ರ ಪ್ರತಿಭಟಿಸಿರುವುದು ಸರ್ಕಾರ ಹತಾಶಗೊಂಡಿರುವುದರ ಪ್ರತೀಕ. ನಮ್ಮ ಕಾರ್ಯಕರ್ತರು ಮನಸ್ಸು ಮಾಡಿದರೆ ಕೊಡಗಿನಲ್ಲಿ ಬಿಜೆಪಿಯ ಯಾವ ಸಚಿವರನ್ನೂ ಓಡಾಡುವುದಕ್ಕೆ ಬಿಡುವುದಿಲ್ಲ. ಆದರೆ, ಅದು ನಮ್ಮ ಸಂಸ್ಕೃತಿಯಲ್ಲ' ಎಂದರು.

'ಕೋಳಿಮೊಟ್ಟೆ ಎಸೆದಿದ್ದು ನನಗೆ ಗೊತ್ತಿಲ್ಲ. ಆದರೆ, ಕಪ್ಪುಬಾವುಟ ಪ್ರದರ್ಶಿಸಿದ್ದು ಹೌದು' ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ನಾನು ಖುಷಿ ಪಡುವುದಿಲ್ಲ: ಎಚ್‌ಡಿಕೆ

ಹಿರಿಯೂರು (ಚಿತ್ರದುರ್ಗ ಜಿಲ್ಲೆ): 'ಜನರ ಸಮಸ್ಯೆ ಆಲಿಸಲು ತೆರಳಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಮೇಲೆ ಮೊಟ್ಟೆ ಎಸೆದಿರುವುದು ಸರಿಯಲ್ಲ. ಇಂತಹ ಕೃತ್ಯ ಮರುಕಳಿಸಬಾರದು. ಮೊಟ್ಟೆ ಎಸೆದಿರುವುದಕ್ಕೆ ನಾನು ಖುಷಿ ಪಡುವುದಿಲ್ಲ' ಎಂದು ಜೆಡಿಎಸ್ ಶಾಸಕಾಂಗದ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕರ್ನಾಟಕ ಸರ್ವಜನಾಂಗದ ಶಾಂತಿಯ ತೋಟ. ಇಲ್ಲಿ ಶಾಂತಿಯಿಂದ ಬದುಕಲು ಅವಕಾಶ ನೀಡಿ. ಕ್ಷುಲ್ಲಕ ವಿಚಾರ ದೂರವಿಟ್ಟು ಸಮಸ್ಯೆಗಳ ಬಗ್ಗೆ ಚರ್ಚಿಸಿ ಎಂದು ಕಾಂಗ್ರೆಸ್ ಮತ್ತು ಬಿಜೆಪಿಗೆ ಮನವಿ ಮಾಡಿಕೊಳ್ಳುತ್ತೇನೆ' ಎಂದರು.

ಮುಖ್ಯಮಂತ್ರಿ ಹೊಣೆ ಹೊರಲಿ: ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಹಿರಿಯೂರು (ಚಿತ್ರದುರ್ಗ ಜಿಲ್ಲೆ): 'ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದು ಅವಮಾನಿಸಿದ ಕೃತ್ಯದ ಹೊಣೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೊರಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇದು ಸಿದ್ದರಾಮಯ್ಯ ಮಾತ್ರವಲ್ಲ ಇಡೀ ರಾಜ್ಯವನ್ನು ಅವಮಾನಿಸಿದ ಘಟನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿಚಾರ ಹಂಚಿಕೊಳ್ಳುವ ಸ್ವಾತಂತ್ರ್ಯ ಪ್ರತಿಯೊಬ್ಬರಿಗೂ ಇದೆ. ಇಂತಹ ಕೃತ್ಯಗಳನ್ನು ಸಹಿಸುವುದಿಲ್ಲ. ಈ ಬಗ್ಗೆ ಸರ್ಕಾರ ಕಾನೂನು ಕ್ರಮ ಜರುಗಿಸಬೇಕು' ಎಂದರು.

ಸುದ್ದಿ 2 ನಿಮಿಷ

ಸಿಇಟಿ ಗೊಂದಲ: ಪರಿಹಾರ ಸೂತ್ರ

ಬೆಂಗಳೂರು: '2022ನೇ ಸಾಲಿನಲ್ಲಿ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) 2020–21ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆಯ ಅಂಕಗಳನ್ನು ಪರಿಗಣಿಸದೇ ಉಂಟಾಗಿರುವ ಗೊಂದಲಕ್ಕೆ ಹೈಕೋರ್ಟ್ ಪರಿಹಾರ ಸೂತ್ರವೊಂದನ್ನು ಸರ್ಕಾರದ ಮುಂದಿಟ್ಟಿದೆ. 'ಪಿಯು ಮತ್ತು ಸಿಇಟಿ ಅಂಕಗಳನ್ನು 25:75ರ ಅನುಪಾತದಲ್ಲಿ ಪರಿಗಣಿಸುವ ಮೂಲಕ ಸಹಮತದ ಸೂತ್ರವನ್ನು ಕಂಡುಕೊಳ್ಳಬಹುದು' ಎಂದು ಸರ್ಕಾರಕ್ಕೆ ಸಲಹೆ ನೀಡಿದೆ.

ಈ ಸಂಬಂಧ ಚಿಕ್ಕಮಗಳೂರಿನ ಆರ್.ಈಶ್ವರ್ ಸೇರಿದಂತೆ ಹಲವು ವಿದ್ಯಾರ್ಥಿಗಳು ಸಲ್ಲಿಸಿರುವ ಏಳು ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಈ ವೇಳೆ ನ್ಯಾಯಪೀಠ, 'ಕಳೆದ ಶೈಕ್ಷಣಿಕ ವರ್ಷದಲ್ಲಿ ಪರೀಕ್ಷೆ ಬರೆಯದೇ ಉತ್ತೀರ್ಣರಾಗಿರುವ ದ್ವಿತೀಯ ಪಿಯು ವಿದ್ಯಾರ್ಥಿಗಳು ಪಡೆದ ಶೇ 25 ಮತ್ತು ಸಿಇಟಿಯ ಶೇ 75 ಅಂಕಗಳನ್ನು ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಪರಿಗಣಿಸಬಹುದು. 25:75ರ ಈ ಸೂತ್ರಕ್ಕೆ ಸರ್ಕಾರ ಒಪ್ಪಿದರೆ ಇದೊಂದು ಮಾದರಿಯಾಗಲಿದ್ದು, ಪ್ರಕರಣ ಶೇ 90ರಷ್ಟು ಬಗೆಹರಿದಂತಾಗುತ್ತದೆ' ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿತು.

ಇದಕ್ಕೆ ಪ್ರತಿಕ್ರಿಯಿಸಿದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ, 'ಈ ಕುರಿತು ಯಾವುದೇ ನಿರ್ಧಾರ ಕೈಗೊಳ್ಳಲು ಸರ್ಕಾರಕ್ಕೆ ಸಮಯ ಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಿತು.

'ಸಿಇಟಿ ರ‍್ಯಾಂಕ್‌ಗಳಿಗೆ 2021ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳನ್ನು ಪರಿಗಣಿಸುವಂತೆ ಕೆಇಎಗೆ ನಿರ್ದೇಶಿಸಬೇಕು. ಅರ್ಜಿ ಇತ್ಯರ್ಥವಾಗುವವರೆಗೂ ಸಿಇಟಿ ಕೌನ್ಸೆಲಿಂಗ್‌ಗೆ ತಡೆ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.



ಪಂಚಮಸಾಲಿ ಮೀಸಲಾತಿ ಘೋಷಣೆ: 22ರವರೆಗೆ ಗಡುವು

ಬಾಗಲಕೋಟೆ: 'ಪಂಚಮಸಾಲಿ ಸಮುದಾಯಕ್ಕೆ ಆ.22 ರೊಳಗೆ ಮೀಸಲಾತಿ ಘೋಷಿಸದಿದ್ದರೆ, ಶಿಗ್ಗಾವಿಯಲ್ಲಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಿವಾಸದ ಎದುರು ಅನಿರ್ದಿಷ್ಟಾವಧಿ ಧರಣಿ ಆರಂಭಿಸುತ್ತೇವೆ' ಎಂದು ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆ.22ರೊಳಗೆ ವರದಿ ಪಡೆದು, ಮೀಸಲಾತಿ ಬಗ್ಗೆ ತೀರ್ಮಾನ ಪ್ರಕಟಿಸುವುದಾಗಿ ಮುಖ್ಯಮಂತ್ರಿ ಅವರೇ ಹೇಳಿದ್ದರು. ಮೀಸಲಾತಿ ಘೋಷಿಸಿದರೆ ಸಮಾಜದಿಂದ ಸನ್ಮಾನಿಸುತ್ತೇವೆ. ಇಲ್ಲದಿದ್ದರೆ, ಆ.23ರಿಂದ ಧರಣಿ ಆರಂಭಿಸುತ್ತೇವೆ' ಎಂದರು.

'ಪಂಚಮಸಾಲಿ ಸಮುದಾಯಕ್ಕೆ 2ಎ ಹಾಗೂ ಲಿಂಗಾಯತ ಸಮುದಾಯಕ್ಕೆ ಕೇಂದ್ರದಿಂದ ಒಬಿಸಿ ಮೀಸಲಾತಿ ಸಿಗಬೇಕು' ಎಂದು ಹೇಳಿದರು.

ಡಿಕೆಶಿಗೆ ಸಿಎಂ ಸ್ಥಾನ ಒಲಿದರೆ ಅಸೂಯೆಪಡಲ್ಲ

ಒಕ್ಕಲಿಗರ ಜನಜಾಗೃತಿ ಸಮಾವೇಶದಲ್ಲಿ ಜೆಡಿಎಸ್ ನಾಯಕ ಎಚ್‌ಡಿ. ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಹಿರಿಯೂರು (ಚಿತ್ರದುರ್ಗ ಜಿಲ್ಲೆ): 'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್‌ಗೆ ಮುಖ್ಯಮಂತ್ರಿ ಸ್ಥಾನ ಒಲಿದರೆ ನಾನು ಅಸೂಯೆ ಪಡುವುದಿಲ್ಲ. ಆದರೆ, ಅವರ ಪಕ್ಷದಲ್ಲಿ ಹಿಂದುಳಿದ ವರ್ಗದ ಮಹಾನ್ ನಾಯಕರೊಬ್ಬರು ಇದ್ದಾರೆ ಎಂಬುದನ್ನು ಮರೆಯಬಾರದು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಇಲ್ಲಿನ ನೆಹರೂ ಮೈದಾನದಲ್ಲಿ ತಾಲ್ಲೂಕು ಒಕ್ಕಲಿಗರ ಸಂಘ ಗುರುವಾರ ಏರ್ಪಡಿಸಿದ್ದ ನಾಡಪ್ರಭು ಕೆಂಪೇಗೌಡ ಜಯಂತಿ ಹಾಗೂ ತಾಲ್ಲೂಕು ಒಕ್ಕಲಿಗರ ಜನಜಾಗೃತಿ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ಮುಖ್ಯಮಂತ್ರಿ ಗಾದಿಗೆ ಡಿ.ಕೆ. ಶಿವಕುಮಾರ್ ಹೋರಾಟ ನಡೆಸಲಿ. ಈಗಾಗಲೇ ಎರಡು ಬಾರಿ ಮುಖ್ಯಮಂತ್ರಿಯಾಗಿರುವ ನಾನೂ ಹೋರಾಡುತ್ತೇನೆ. ಅಧಿಕಾರ ಯಾರಿಗೆ ಬೇಕಾದರೂ ಸಿಗಲಿ. ಭಗವಂತನ ಅನುಗ್ರಹ, ಸ್ವಾಮೀಜಿಗಳ ಇಚ್ಛೆ ಏನಿದೆಯೊ ನೋಡೋಣ' ಎಂದರು.

ಡಿ.ಕೆ. ಶಿವಕುಮಾರ್ ಸಹ ವೇದಿಕೆಯಲ್ಲಿ ಇದ್ದರು.



ಸಮಾವೇಶವನ್ನು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಪಟ್ಟನಾಯಕನಹಳ್ಳಿಯ ನಂಜಾವಧೂತ ಸ್ವಾಮೀಜಿ ಉದ್ಘಾಟಿಸಿದರು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌ಡಿ. ಕುಮಾರಸ್ವಾಮಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಚಿತ್ರದುರ್ಗ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ. ಯಶೋಧರ ಇದ್ದಾರೆ

'ಒಕ್ಕಲಿಗರೇ ಇಲ್ಲದ ಉತ್ತರ ಕರ್ನಾಟಕದ ನೀರಾವರಿ ಯೋಜನೆ ಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಎಚ್.ಡಿ. ದೇವೇಗೌಡ ಅವರು ಮುಖ್ಯಮಂತ್ರಿಯಾಗಿದ್ದಾಗ ಶ್ರಮಿಸಿದರು. ಇದನ್ನು ಮೆಚ್ಚಿ ಆಲಮಟ್ಟಿ ಭಾಗದ ಸಾಮಾನ್ಯ ರೈತನೊಬ್ಬ 'ಭಾರತರತ್ನ ದೇವೇಗೌಡ' ಎಂದು ಫಲಕ ಹಾಕಿದ್ದ. ಆದರೆ, ಆ ಭಾಗದ ಜನ ಚುನಾವಣೆಯಲ್ಲಿ ನಮಗೆ ಕೊಟ್ಟಿದ್ದೇನು' ಎಂದು ಪ್ರಶ್ನಿಸಿದ ಅವರು, 'ಬಹಳಷ್ಟು ಸಂದರ್ಭಗಳಲ್ಲಿ ನಮ್ಮಿಂದ ಎಲ್ಲವನ್ನೂ ಪಡೆದವರು ನಮ್ಮ ಕತ್ತು ಕೊಯ್ದಿದ್ದಾರೆ' ಎಂದು ಅವರು ಅಸಮಾಧಾನ ಹೊರಹಾಕಿದರು.

'ವಾಲ್ಮೀಕಿ ಸಮುದಾಯದ 15ಕ್ಕೂ ಹೆಚ್ಚು ಶಾಸಕರು ಆಯ್ಕೆಯಾಗುವಂತೆ ಪರಿಶ್ರಮಪಟ್ಟಿದ್ದು ದೇವೇಗೌಡರು. ಆದರೆ, ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಆ ಸಮುದಾಯದವರು ನನ್ನ ವಿರುದ್ಧ ಪಾದಯಾತ್ರೆ ನಡೆಸಿದರು. ಈಗ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ 180 ದಿನಗಳಿಂದ ಧರಣಿ ನಡೆಸುತ್ತಿದ್ದಾರೆ. ಆದರೂ ಸರ್ಕಾರ ಸ್ಪಂದಿಸುತ್ತಿಲ್ಲ' ಎಂದರು.

> **ಬಹುಮತದ ವಿಶ್ವಾಸದಲ್ಲಿ ಡಿ.ಕೆ.ಶಿವಕುಮಾರ್ ಇದ್ದಾರೆ. ಆದರೆ, ಸಿ.ಎಂ ಗಾದಿಗೆ ಸಿದ್ದರಾಮಯ್ಯ ಟವಲ್ ಹಾಕಿದ್ದಾರೆ. ಡಿಕೆಶಿ ಓವರ್ ಟೇಕ್ ಮಾಡುತ್ತಾರಾ ನೋಡೋಣ**
> **ಎಚ್.ಡಿ. ಕುಮಾರಸ್ವಾಮಿ**
> ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಅಪೇಕ್ಷೆ ವ್ಯಕ್ತಪಡಿಸಿದ ಡಿಕೆಶಿ: ರಾಜಕೀಯದ ಬಗ್ಗೆ ಜಾಗರೂಕರಾಗಿ ವಿಷಯ ಪ್ರಸ್ತಾಪಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ಗಾದಿ ಮೇಲಿನ ಅಭಿಲಾಷೆಯನ್ನು ಮಾರ್ಮಿಕವಾಗಿ ವ್ಯಕ್ತಪಡಿಸಿದರು.

'ಕಿಟಕಿ, ಬಾಗಿಲು ತೆರೆದು ಮನೆಯೊಳಗೆ ಬೆಳಕು ಬರುತ್ತಿದೆ. ಬಾಗಿಲು ತೆರೆದು ಲಕ್ಷ್ಮಿಯನ್ನು ಒಳಗೆ ಕರೆದುಕೊಳ್ಳುವಂತೆ ಸಮುದಾಯದ ಇಬ್ಬರೂ ಶ್ರೀಗಳಲ್ಲಿ ಕೈಮುಗಿದು ಬೇಡಿಕೊಂಡಿದ್ದೇನೆ. ಬಾಗಿಲು ತೆರೆದು ಒಳಗೆ ಬರಮಾಡಿಕೊಳ್ಳುವ, ಇಲ್ಲವೇ ಹೊರಗೆ ಓಡಿಸುವ ವಿಚಾರ ಅವರಿಗೆ ಬಿಟ್ಟಿದ್ದು' ಎಂದು ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಪಟ್ಟನಾಯಕನಹಳ್ಳಿಯ ನಂಜಾವಧೂತ ಸ್ವಾಮೀಜಿ ಅವರತ್ತ ದೃಷ್ಟಿ ಹಾಯಿಸಿದರು.

'ಯಾರಿಗೆ ಅಧಿಕಾರ ಸಿಕ್ಕರೂ ಸಂತೋಷ'

'ಅಧಿಕಾರ ಒಕ್ಕಲಿಗರಿಗೆ ಸಿಗುತ್ತದೆ ಎಂಬುದು ಭಗವಂತನ ಇಚ್ಛೆ. ಡಿ.ಕೆ. ಶಿವಕುಮಾರ್ ಅಥವಾ ಎಚ್‌.ಡಿ.ಕುಮಾರಸ್ವಾಮಿ ಅವರಲ್ಲಿ ಯಾರಿಗೆ ಅಧಿಕಾರ ಸಿಕ್ಕರೂ ನಮಗೆ ಸಂತೋಷ' ಎಂದು ಪಟ್ಟನಾಯಕನಹಳ್ಳಿಯ ನಂಜಾವಧೂತ ಸ್ವಾಮೀಜಿ ಹೇಳಿದರು.

'ಇಬ್ಬರಲ್ಲಿ ಒಬ್ಬರಿಗೆ ಅಧಿಕಾರ ಸಿಗುವುದು ನಿಶ್ಚಿತ. ಭಗವಂತ ಯಾರಿಗೇ ಅಧಿಕಾರ ನೀಡಿದರೂ ನಮಗೆ ಖುಷಿ. ಕುಮಾರಸ್ವಾಮಿ ಅವರನ್ನು ಎರಡನೇ ಬಾರಿ ಮುಖ್ಯಮಂತ್ರಿ ಮಾಡುವಾಗ ಡಿ.ಕೆ. ಶಿವಕುಮಾರ್ ಅವರಲ್ಲಿದ್ದ ಉತ್ಸಾಹ ಬಣ್ಣಿಸಲು ಸಾಧ್ಯವಿಲ್ಲ. ಇಂದು ಇಬ್ಬರೂ ಒಂದೆಡೆ ಸೇರಿರುವುದು ಉತ್ತಮ ಬೆಳವಣಿಗೆ. ಇಂತಹ ಹೊಂದಾಣಿಕೆ ಇರಲಿ' ಎಂದರು.

ವೈದ್ಯ ಅಣ್ಣಯ್ಯ ಕುಲಾಲ್‌ಗೆ ದೇವರಾಜ ಅರಸು ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ರಾಜ್ಯಮಟ್ಟದ ಪ್ರಶಸ್ತಿಗೆ ಮಂಗಳೂರಿನ ಡಾ. ಅಣ್ಣಯ್ಯ ಕುಲಾಲ್ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹ 5 ಲಕ್ಷ ನಗದು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶನಿವಾರ (ಆಗಸ್ಟ್ 20) ನಡೆಯಲಿರುವ ಡಿ. ದೇವರಾಜ ಅರಸು ಅವರ 107ನೇ ಜನ್ಮದಿನಾಚರಣೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ಶ್ರಮಿಸಿರುವ ವ್ಯಕ್ತಿ ಅಥವಾ ಸಂಸ್ಥೆಗೆ ರಾಜ್ಯಮಟ್ಟದಲ್ಲಿ ಪ್ರತಿವರ್ಷ ಈ ಪ್ರಶಸ್ತಿ ನೀಡಲಾಗುತ್ತಿದೆ.



ಪರಿಚಯ: ಉಡುಪಿ ಜಿಲ್ಲೆಯ ಕೋಟ ಬಳಿಯ ತೆಕ್ಕಟ್ಟೆಯಲ್ಲಿ ಜನಿಸಿದ ಅಣ್ಣಯ್ಯ ಕುಲಾಲ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯದಲ್ಲಿದ್ದು ಶಿಕ್ಷಣ ಪಡೆದಿದ್ದರು. ವೈದ್ಯಕೀಯ ಪದವಿಯ ಬಳಿಕ ಸಮಾಜಮುಖಿ, ಜಾತ್ಯತೀತ ಚಿಂತನೆಯಿಂದ ಬಡವರ, ನೊಂದವರ, ನಿರ್ಗತಿಕರಿಗೆ ವೈದ್ಯಕೀಯ ಸೇವೆ ನೀಡುವ ಮೂಲಕ ಉತ್ತಮ ವೈದ್ಯ, ಸಮಾಜ ವಿಜ್ಞಾನಿ ಎಂದು ಗುರುತಿಸಿಕೊಂಡಿದ್ದರು. ಸದ್ಯ ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಯಡಿ ಸರ್ಕಾರಿ ವೆನ್‌ಲಾಕ್ ಆಸ್ಪತ್ರೆಯಲ್ಲಿ ಕ್ಯಾನ್ಸರ್‌ಗೆ ಸಂಬಂಧಿಸಿದ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಡಾ.ಬಿ.ಸಿ. ರಾಯ್ ಜೀವಮಾನ ಸಾಧನೆ ಪ್ರಶಸ್ತಿ, ರಾಷ್ಟ್ರೀಯ ಐಎಂಎ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಅವರಿಗೆ ಬಂದಿವೆ. ಶಿವಮೊಗ್ಗ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಗುರುಲಿಂಗಯ್ಯ ಅವರ ಅಧ್ಯಕ್ಷತೆಯ ಸಮಿತಿ ಅಣ್ಣಯ್ಯ ಕುಲಾಲ್ ಅವರನ್ನು ಆಯ್ಕೆ ಮಾಡಿದೆ.

ಕೆಇಎ: ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಆಯ್ಕೆಯಾದವರ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ(ಕೆಇಎ) ಗುರುವಾರ ರಾತ್ರಿ ಪ್ರಕಟಿಸಿದೆ.

ಹುದ್ದೆಗಳ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆಯು ಮಾರ್ಚ್ 12ರಿಂದ 16ರವರೆಗೆ 26 ವಿವಿಧ ವಿಷಯಗಳಿಗೆ ನಡೆದಿತ್ತು.

ಚಿಕ್ಕಪೇಟೆ ಶಾಲೆ ಜಾಗ ಮಾರಾಟಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಪೇಟೆ ಶಾಲೆ ಜಾಗ ಮಾರಾಟ ಮಾಡಲು ಸರ್ಕಾರದ ಅನುಮತಿ ಕೋರಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ನಡೆಗೆ ವಿವಿಧ ಸಂಘಟನೆಗಳು ಹಾಗೂ ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿದ್ದಾರೆ.

ಆ.18ರ ಸಂಚಿಕೆಯಲ್ಲಿ 'ಸರ್ಕಾರಿ ಶಾಲೆ ಮಾರಾಟಕ್ಕಿದೆ' ಎಂಬ ಶೀರ್ಷಿಕೆಯಲ್ಲಿ 'ಪ್ರಜಾವಾಣಿ' ವಿಶೇಷ ವರದಿ ಪ್ರಕಟಿಸಿತ್ತು.

ಈ ಕುರಿತು ಪ್ರತಿಕ್ರಿಯಿಸಿರುವ ಶಿಕ್ಷಣ ತಜ್ಞ ನಿರಂಜನಾರಾಧ್ಯ, 'ಕಡಿಮೆ ಮಕ್ಕಳಿರುವ ಶಾಲೆಗಳನ್ನು ಮುಚ್ಚಲು, ಇತರೆ ಶಾಲೆಗಳ ಜತೆ ವಿಲೀನಗೊಳಿಸಲು ಸರ್ಕಾರ ಯೋಚಿಸದೇ ಶಾಲೆಯ ಬೆಲೆ ಬಾಳುವ ಆಸ್ತಿಗಳನ್ನು ಪಟ್ಟಭದ್ರ ಹಿತಾಸಕ್ತಿಗಳಿಗೆ ನೀಡಲು. ಅದಕ್ಕೆ ಚಿಕ್ಕಪೇಟೆಯ ಬಹುಕೋಟಿ ಬೆಲೆ ಬಾಳುವ ಆಸ್ತಿ ಒಂದು ಉದಾಹರಣೆಯಷ್ಟೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಶಾಲೆಯ ಜಾಗ ಉಳಿಸಲು ಹಲವು ಬಾರಿ ಹೋರಾಟ ನಡೆಸಿದ್ದೇವೆ. ಸರ್ಕಾರ ನಮ್ಮ ಹೋರಾಟಕ್ಕೆ ಮನ್ನಣೆ ನೀಡಿಲ್ಲ. ಮಕ್ಕಳ ಹಿತಾಸಕ್ತಿಗಾಗಿ ಮತ್ತೆ ಹೋರಾಟ ನಡೆಸಲಾಗುವುದು' ಎಂದು ಶಾಲೆಯ ಹಳೆಯ ವಿದ್ಯಾರ್ಥಿಯೂ ಆದ ಬಿಬಿಎಂಪಿ ಮಾಜಿ ಸದಸ್ಯ ಶಿವಕುಮಾರ್ ಎಚ್ಚರಿಸಿದ್ದಾರೆ.

'1962-63ರಲ್ಲಿ ಚಿಕ್ಕಪೇಟೆ ಶಾಲೆಯಲ್ಲಿ ಮಾಧ್ಯಮಿಕ ಶಿಕ್ಷಣ ಪೂರೈಸಿದೆ. ಅಂದು 600ಕ್ಕೂ ಹೆಚ್ಚು ಮಕ್ಕಳಿದ್ದರು. ಅದೇ ಕಟ್ಟಡದಲ್ಲಿ ಬಾಲಕಿಯರ ಮಾಧ್ಯಮಿಕ ಶಾಲೆಯೂ ನಡೆಯುತ್ತಿತ್ತು. ಖಾಸಗಿಯವರಿಗೆ ವಾಣಿಜ್ಯ ಮಳಿಗೆ ನಿರ್ಮಿಸಲು ಸರ್ಕಾರ ಅವಕಾಶ ನೀಡಿದ್ದನ್ನು ಅಂದಿನ ಪ್ರಾಥಮಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ವಿರೋಧಿಸಿದ್ದರು. ನಂತರ ಪ್ರಾಥಮಿಕ ಶಾಲೆಯನ್ನು ಬೇರೆ ಕಡೆ ಸ್ಥಳಾಂತರಿಸಲಾಯಿತು' ಎಂದು ನಿವೃತ್ತ ಪೊಲೀಸ್ ಆರ್. ರಾಚಪ್ಪ ನೆನಪುಗಳನ್ನು ಹಂಚಿಕೊಂಡಿದ್ದಾರೆ.

ಪ್ರಸ್ತುತ ಕಟ್ಟಡದ ಎರಡನೇ ಮಹಡಿಯಲ್ಲಿ ಪ್ರೌಢಶಾಲೆ ನಡೆಯುತ್ತಿದೆ. 66 ಮಕ್ಕಳು ಇದ್ದಾರೆ. ಎಲ್ಲರೂ ಆ ಪ್ರದೇಶದ ಬಡ ಕೂಲಿ ಕಾರ್ಮಿಕರ ಮಕ್ಕಳು.

ಘಟನೆಗಳ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಬಿ.ಸಿ.ನಾಗೇಶ್, 'ಚಿಕ್ಕಪೇಟೆ ಶಾಲೆ ಸೇರಿ ರಾಜ್ಯದ ಯಾವ ಶಾಲೆಗಳ ಒಂದಿಂಚೂ ಜಾಗ ಬಿಟ್ಟುಕೊಡುವುದಿಲ್ಲ. ಸರ್ಕಾರಿ ಶಾಲಾ ಕಾಲೇಜುಗಳ ಆಸ್ತಿ ಸಂರಕ್ಷಣೆಗಾಗಿಯೇ ಇದೇ ತಿಂಗಳಿನಿಂದ ಆಂದೋಲನ ಹಮ್ಮಿಕೊಳ್ಳಲಾಗಿದೆ. ಚಿಕ್ಕಪೇಟೆಯ ಶಾಲಾ ಕಟ್ಟಡವನ್ನು ಖಾತೆ ಮಾಡಿಕೊಡುವಂತೆ ಇಲಾಖೆಯ ಆಯುಕ್ತರು ಈಗಾಗಲೇ ಕಂದಾಯ ಇಲಾಖೆಗೆ ಪತ್ರ ಬರೆದಿದ್ದಾರೆ. ಕಟ್ಟಡ ಸ್ವಾಧೀನಕ್ಕೆ ಪಡೆದ ನಂತರ ವಾಣಿಜ್ಯ ಮಳಿಗೆಗಳ ನಿರ್ವಹಣೆ, ಶಾಲಾ ಪ್ರಗತಿ ಕುರಿತು ಸೂಕ್ತ ಕ್ರಮ ಕೈಗೊಳ್ಳಲಾಗುವುದು. 1979ರಲ್ಲಿ ಶಾಲಾ ಜಾಗ ಖಾಸಗಿಗೆ ನೀಡಿದ್ದೇ ಈ ಎಲ್ಲ ಸಮಸ್ಯೆಗಳಿಗೆ ಕಾರಣ' ಎಂದು ದೂರಿದರು.

ಮಾರಾಟ ಪ್ರಕ್ರಿಯೆ ಕೈಬಿಡಿ: ದೊರೆಸ್ವಾಮಿ

'ದಾನಿಗಳು ಸದ್ಭಾವನೆಯಿಂದ ಶಿಕ್ಷಣಕ್ಕೋಸ್ಕರ ಸದ್ಬಳಕೆಗೆ ಕೊಟ್ಟ ಜಾಗದಲ್ಲಿ ಪ್ರಸ್ತುತ ಇರುವ ಶಾಲೆಯನ್ನು ಯಾವುದೇ ಕಾರಣಕ್ಕೂ ಮಾರಾಟ ಅಥವಾ ಪರಭಾರೆ ಮಾಡಬಾರದು. ಸಂಬಂಧಪಟ್ಟ ಕಂದಾಯಾಧಿಕಾರಿಗಳು ಪ್ರಸ್ತಾವನೆ ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಿರುವುದು ವಿಷಾದನೀಯ' ಎಂದು ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರ ಪ್ರೊ.ಎಂ.ಆರ್. ದೊರೆಸ್ವಾಮಿ ಬೇಸರ ವ್ಯಕ್ತಪಡಿಸಿದ್ದಾರೆ.

'ಈ ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಹಾಗೂ ಕಂದಾಯ ಮಂತ್ರಿ ಮಧ್ಯಪ್ರವೇಶಿಸಿ, ಶಾಲಾ ಶಿಕ್ಷಣದ ಹಿತಾಸಕ್ತಿ ರಕ್ಷಿಸಬೇಕು' ಎಂದೂ ಅವರು ಆಗ್ರಹಿಸಿದ್ದಾರೆ.

ಫೆಲೋಷಿಪ್ ಸಮಿತಿಗೆ ಲಕ್ಷ್ಮೀಶ್



ಶಿರಸಿ: ಕೇಂದ್ರ ಸಂಸ್ಕೃತಿ ಸಚಿವಾಲಯದ ಟಾಗೋರ್ ನ್ಯಾಷನಲ್ ಫೆಲೋಷಿಪ್ ಸಮಿತಿಯ ಸದಸ್ಯ ಮತ್ತು ವಿಷಯ ತಜ್ಞರಾಗಿ ಇತಿಹಾಸಕಾರ ಡಾ.ಲಕ್ಷ್ಮೀಶ್ ಸೋಂದಾ ಆಯ್ಕೆಯಾಗಿದ್ದಾರೆ.

ದೇಶದಲ್ಲಿನ ವಿವಿಧ ಸಂಸ್ಕೃತಿಗಳ ಮತ್ತು ಇತಿಹಾಸದ ಕುರಿತಾಗಿ ಸಂಶೋಧನೆ ನಡೆಸುವವರಿಗೆ ಟಾಗೋರ್ ನ್ಯಾಷನಲ್ ಫೆಲೋಷಿಪ್ ಅಡಿಯಲ್ಲಿ ಧನಸಹಾಯ ಮಾಡುವ ಸಂಸ್ಥೆ ಇದಾಗಿದೆ. ಪ್ರತಿಷ್ಠಿತ ಸಮಿತಿಗೆ ಕರ್ನಾಟಕದಿಂದ ಡಾ.ಸೋಂದಾ ಅವರು ಆಯ್ಕೆಯಾಗಿದ್ದಾರೆ ಎಂದು ಫೆಲೋಷಿಪ್ ಸಮಿತಿ ಉಪ ನಿರ್ದೇಶಕ ಡಾ.ರವಿ ಕೆ.ಮಿಶ್ರಾ ತಿಳಿಸಿದ್ದಾರೆ.

7 ಜನೋತ್ಸವ, 100 ಕ್ಷೇತ್ರಗಳಲ್ಲಿ ಬೊಮ್ಮಾಯಿ, ಕಟೀಲ್ ಪ್ರವಾಸ • ಸಭೆಯಲ್ಲಿ ತೀರ್ಮಾನ

ಬಿಜೆಪಿ ಚುನಾವಣಾ ತಾಲೀಮು ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023 ರ ವಿಧಾನಸಭಾ ಚುನಾವಣೆಗೆ ಪ್ರಚಾರ ಅಲೆ ಎಬ್ಬಿಸಲು ನಿರ್ಧರಿಸಿರುವ ಬಿಜೆಪಿ, ಸೆಪ್ಟೆಂಬರ್ ಮೊದಲ ವಾರದಿಂದ ಅಕ್ಟೋಬರ್ ಎರಡನೇ ವಾರದವರೆಗೆ ರಾಜ್ಯದ ವಿವಿಧೆಡೆ 7 ಬೃಹತ್ 'ಜನೋತ್ಸವ', 100 ವಿಧಾನಸಭಾ ಕ್ಷೇತ್ರಗಳಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಂದ ಪ್ರವಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಮತ್ತು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರ ಉಪಸ್ಥಿತಿಯಲ್ಲಿ ಗುರುವಾರ ಇಡೀ ದಿನ ನಡೆದ ರಾಜ್ಯ ಪದಾಧಿಕಾರಿಗಳ ಸಭೆಯಲ್ಲಿ ಈ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ.

ದೊಡ್ಡಬಳ್ಳಾಪುರದಲ್ಲಿ ಮೊದಲ ಜನೋತ್ಸವ ನಡೆಯಲಿದೆ. ಉಳಿದ ಜನೋತ್ಸವ ಹುಬ್ಬಳ್ಳಿ, ಬೆಂಗಳೂರು, ಮಂಗಳೂರು, ಶಿವಮೊಗ್ಗ, ಕಲ್ಯಾಣ ಕರ್ನಾಟಕದಲ್ಲಿ ನಡೆಯಲಿದ್ದು, ದಿನಾಂಕ ಇನ್ನಷ್ಟೇ ನಿಗದಿ ಮಾಡಬೇಕಾಗಿದೆ. ಪ್ರತಿಯೊಂದು ಜನೋತ್ಸವದಲ್ಲಿ ಕನಿಷ್ಠ 5 ಲಕ್ಷ ಜನರನ್ನು ಸೇರಿಸಲು ಉದ್ದೇಶಿಸಲಾಗಿದೆ ಎಂದು ಬಿಜೆಪಿ ಮುಖ್ಯ ವಕ್ತಾರ ಎಂ.ಜಿ.ಮಹೇಶ್ ಸುದ್ದಿಗಾರರಿಗೆ ತಿಳಿಸಿದರು.

ಅಲ್ಲದೇ, ಹಿಂದಿನ ಚುನಾವಣೆಯಲ್ಲಿ ಬಿಜೆಪಿ ಸೋತಿರುವ 100 ವಿಧಾನಸಭಾ ಕ್ಷೇತ್ರಗಳಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಎರಡು ತಂಡಗಳಲ್ಲಿ ತಲಾ 50 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರವಾಸ ಮಾಡಲಿದ್ದಾರೆ. ಇವುಗಳ ದಿನಾಂಕಗಳನ್ನು ಸದ್ಯದಲ್ಲೇ ನಿರ್ಧರಿಸಲಾಗುವುದು ಎಂದರು.



ಬೆಂಗಳೂರಿನಲ್ಲಿ ಗುರುವಾರ ನಡೆದ ಬಿಜೆಪಿ ರಾಜ್ಯ ಪದಾಧಿಕಾರಿಗಳ ಸಭೆಯಲ್ಲಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಪಾಲ್ಗೊಂಡಿದ್ದರು

ಕರ್ನಾಟಕದ ಪ್ರತಿಯೊಂದು ಬೂತ್‌ನಲ್ಲಿ ಕನಿಷ್ಠ ಶೇ 50ಕ್ಕೂ ಹೆಚ್ಚು ಮತ ಪಡೆಯುವ ಬೂತ್ ಆಗಿ ಪರಿವರ್ತಿಸಬೇಕು. ಇದಕ್ಕಾಗಿ ರಾಜ್ಯ ಮತ್ತು ಜಿಲ್ಲಾ ಪದಾಧಿಕಾರಿಗಳು ತಿಂಗಳಿಗೆ 15 ದಿನ ಪ್ರವಾಸ ಮಾಡುವಂತೆ ಅರುಣ್ ಸಿಂಗ್ ಸೂಚಿಸಿದ್ದಾರೆ. 'ಸರ್ಕಾರ ಮತ್ತು ಪಕ್ಷದ ವಿಚಾರದಲ್ಲಿ ಬಹಿರಂಗವಾಗಿ ಮಾತನಾಡುವುದು ಶಿಸ್ತಿನ ಕಾರ್ಯಕರ್ತರ ಲಕ್ಷಣ ಅಲ್ಲ. ಅಶಿಸ್ತನ್ನು ಪಕ್ಷ ಒಪ್ಪುವುದೂ ಇಲ್ಲ. ಪದೇ ಪದೇ ಈ ರೀತಿ ಮಾತನಾಡುವುದನ್ನು ಸಹಿಸುವುದಿಲ್ಲ. ಅದ್ದರಿಂದ ಎಲ್ಲರೂ ಅಭಿವೃದ್ಧಿಪರ ಕಾರ್ಯಗಳಿಗೆ ಆದ್ಯತೆ ನೀಡಬೇಕು ಎಂಬುದಾಗಿ ಸಲಹೆ ನೀಡಿದ್ದಾರೆ' ಎಂದು ಮಹೇಶ್ ತಿಳಿಸಿದರು.

ಕಾಂಗ್ರೆಸ್ ಪಕ್ಷ ಮತ ಬ್ಯಾಂಕ್ ರಾಜಕೀಯಕ್ಕಾಗಿ ಸಾವರ್ಕರ್ ಅವರನ್ನು ಅವಹೇಳನ ಮಾಡುವುದು ಸರಿಯಲ್ಲ ಎಂದು ನಳಿನ್ ಕುಮಾರ್ ಕಟೀಲ್ ಅಭಿಪ್ರಾಯ ವ್ಯಕ್ತಪಡಿಸಿದ್ದಾಗಿ ಹೇಳಿದರು.


ಬಿಎಸ್‌ವೈ ಭೇಟಿ ಮಾಡಿದ ಅರುಣ್‌ ಸಿಂಗ್: ಅರುಣ್ ಸಿಂಗ್ ಹಿರಿಯ ನಾಯಕ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು. ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಯಡಿಯೂರಪ್ಪ ಅವರನ್ನು ಸಂಸದೀಯ ಮಂಡಳಿ ಸದಸ್ಯರನ್ನಾಗಿ ಮಾಡಿರುವುದರಿಂದ ಕರ್ನಾಟಕ ಮಾತ್ರವಲ್ಲ ಇಡೀ ದಕ್ಷಿಣ ಭಾರತದಲ್ಲಿ ಪಕ್ಷಕ್ಕೆ ಪ್ರಯೋಜನವಾಗಲಿದೆ' ಎಂದರು.

'ಈ ನೇಮಕ ಪಕ್ಷದ ಕಾರ್ಯಕರ್ತರಲ್ಲಿ ಹರ್ಷ ತಂದಿದೆ. ಅವರ ಸುದೀರ್ಘ ರಾಜಕೀಯ ಅನುಭವವು ಪಕ್ಷಕ್ಕೆ ಸಿಗಲಿದೆ. ನಾಲ್ಕು ಬಾರಿ ಮುಖ್ಯಮಂತ್ರಿ, ಮೂರು ಬಾರಿ ವಿರೋಧಪಕ್ಷದ ನಾಯಕ, 8 ಬಾರಿ ಶಾಸಕರಾಗಿ ಕಾರ್ಯನಿರ್ವಹಿಸಿದ್ದಾರೆ. ಸದಾ ಪಕ್ಷದ ಕಾರ್ಯಕರ್ತರನ್ನು ಹುರಿದುಂಬಿಸುತ್ತಲೇ ಬಂದಿದ್ದಾರೆ. ಅವರಿಗೆ ಪಕ್ಷದಲ್ಲಿ ಮಹತ್ವದ ಸ್ಥಾನ ನೀಡಲಾಗಿದೆ' ಎಂದು ಅರುಣ್ ಸಿಂಗ್ ಹೇಳಿದರು.

ರಾಜ್ಯ ಕಾರ್ಯಕಾರಿಣಿ ಸೆ.10–11ಕ್ಕೆ

ಸೆಪ್ಟೆಂಬರ್ 10 ಮತ್ತು 11 ರಂದು ಬೆಂಗಳೂರಿನಲ್ಲಿ ಪಕ್ಷದ ರಾಜ್ಯ ಕಾರ್ಯಕಾರಿಣಿಯನ್ನು ನಡೆಸಲು ತೀರ್ಮಾನಿಸಲಾಗಿದೆ. ಚುನಾವಣೆಗೆ ಸಂಬಂಧಿಸಿದಂತೆ ಕಾರ್ಯತಂತ್ರವನ್ನು ರೂಪಿಸುವ ನಿಟ್ಟಿನಲ್ಲಿ ಈ ಕಾರ್ಯಕಾರಿಣಿ ಮಹತ್ವದ್ದಾಗಿದೆ ಎಂದು ವಕ್ತಾರ ಎಂ.ಜಿ.ಮಹೇಶ್ ಹೇಳಿದರು.

ಜನೋತ್ಸವ ಸಮಾವೇಶಗಳನ್ನು ವಿವಿಧ ಮೋರ್ಚಾಗಳ ವತಿಯಿಂದ ಆಯೋಜಿಸಲಾಗುವುದು. ರೈತ ಸಮಾವೇಶ ಬೆಳಗಾವಿ ಅಥವಾ ಹುಬ್ಬಳ್ಳಿಯಲ್ಲಿ ನಡೆಯಲಿದ್ದು, ಅದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಹ್ವಾನಿಸುವ ಉದ್ದೇಶವಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ್ ಟೆಂಗಿನಕಾಯಿ ತಿಳಿಸಿದರು.



ಶಿವರಾಮು, ಬಳಿಗಾರಗೆ 'ಜಾನಪದ ತಜ್ಞ ಪ್ರಶಸ್ತಿ'

ಜಾನಪದ ಅಕಾಡೆಮಿಯ ವಾರ್ಷಿಕ ಗೌರವ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ



ಶಿವರಾಮು ಶಂಭು ಬಳಿಗಾರ ಚನ್ನಮ್ಮ

ಬೆಂಗಳೂರು: ಕರ್ನಾಟಕ ಜಾನಪದ ಅಕಾಡೆಮಿಯ 2022ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರಕಟವಾಗಿದ್ದು, ಜಾನಪದ ವಿದ್ವಾಂಸರಾದ ಮಂಡ್ಯದ ವ.ನಂ. ಶಿವರಾಮು ಹಾಗೂ ಬಾಗಲಕೋಟೆಯ ಶಂಭು ಬಳಿಗಾರ ಅವರು 'ಜಾನಪದ ತಜ್ಞ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

ಅಕಾಡೆಮಿ ಅಧ್ಯಕ್ಷ ಬಿ. ಮಂಜಮ್ಮ ಜೋಗತಿ ಹಾಗೂ ರಿಜಿಸ್ಟ್ರಾರ್ ಎನ್. ನಮ್ರತಾ ಅವರು ಪ್ರಶಸ್ತಿಗೆ ಆಯ್ಕೆಯಾದವರ ಪಟ್ಟಿಯನ್ನು ಇಲ್ಲಿ ಗುರುವಾರ ಬಿಡುಗಡೆ ಮಾಡಿದರು.

'ವಾರ್ಷಿಕ ಗೌರವ ಪ್ರಶಸ್ತಿ'ಗೆ 30 ಜಿಲ್ಲೆಗಳಿಂದ 30 ಕಲಾವಿದರನ್ನು ಆಯ್ಕೆ ಮಾಡಲಾಗಿದೆ. ಎಲ್ಲ ಜಾತಿಯವರಿಗೂ ಪ್ರಾತಿನಿಧ್ಯ ನೀಡುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಲಾಗಿದೆ. 'ಜಾನಪದ ತಜ್ಞ ಪ್ರಶಸ್ತಿ'ಯು ತಲಾ ₹ 50 ಸಾವಿರ ನಗದು ಹಾಗೂ 'ಗೌರವ ಪ್ರಶಸ್ತಿ'ಯು ತಲಾ ₹ 25 ಸಾವಿರ ನಗದು ಒಳಗೊಂಡಿದೆ' ಎಂದು ಮಂಜಮ್ಮ ಜೋಗತಿ ತಿಳಿಸಿದರು.

'ಮಂಡ್ಯದ 105 ವರ್ಷದ ಚನ್ನಮ್ಮ ಪ್ರಶಸ್ತಿಗೆ ಆಯ್ಕೆಯಾದವರಲ್ಲಿ ಹಿರಿಯರಾಗಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭದ ಸ್ಥಳ ಹಾಗೂ ದಿನಾಂಕವನ್ನು ಶೀಘ್ರದಲ್ಲಿಯೇ ನಿಗದಿ ಮಾಡಲಾಗುವುದು' ಎಂದು ಹೇಳಿದರು.

ಗೌರವ ಪ್ರಶಸ್ತಿಗೆ ಆಯ್ಕೆಯಾದವರು: ಬೆಂಗಳೂರಿನ ಚನ್ನಮ್ಮ (ಜಾನಪದ ಕಥೆ), ಬೆಂಗಳೂರು ಗ್ರಾಮಾಂತರದ ಹುಚ್ಚ ಹನುಮಯ್ಯ (ಜಾನಪದ ವೈದ್ಯ), ರಾಮನಗರದ ಗುರುಮೂರ್ತಿ ಜಿ. (ತತ್ವಪದ), ತುಮಕೂರಿನ ಹನುಮಕ್ಕ (ಸೋಬಾನೆ ಪದ), ಕೋಲಾರದ ಡಿ.ಆರ್. ರಾಜಪ್ಪ (ಜಾನಪದ ಗಾಯನ), ಶಿವಮೊಗ್ಗದ ದೇವೇಂದ್ರಪ್ಪ (ಡೊಳ್ಳು ಕುಣಿತ), ಚಿತ್ರದುರ್ಗದ ಕಾ. ರಾಮೇಶ್ವರಪ್ಪ (ಜಾನಪದ ಗಾಯನ), ದಾವಣಗೆರೆಯ ನಾಗರಾಜಪ್ಪ ಡಿ.ಜಿ. (ಭಜನೆ), ಚಿಕ್ಕಬಳ್ಳಾಪುರದ ನಾರಾಯಣಸ್ವಾಮಿ (ಪಂಡರಿ ಭಜನೆ), ಮಂಡ್ಯದ ಚನ್ನಮ್ಮ (ತತ್ವಪದ), ಮೈಸೂರಿನ ಗುರುರಾಜ್ (ತಂಬೂರಿ ಪದ) ಹಾಸನದ ರಂಗಶೆಟ್ಟಿ (ರಂಗದ ಕುಣಿತ) ಆಯ್ಕೆಯಾಗಿದ್ದಾರೆ.

ದಕ್ಷಿಣ ಕನ್ನಡದ ಅಣ್ಣುಶೆಟ್ಟಿ (ಭೂತಾರಾಧನೆ), ಚಾಮರಾಜನಗರದ ಶಿವರುದ್ರಸ್ವಾಮಿ (ವೀರಭದ್ರನ ಕುಣಿತ), ಚಿಕ್ಕಮಗಳೂರಿನ ರೇವಣಸಿದ್ದಪ್ಪ (ವೀರಗಾಸೆ), ಕೊಡಗಿನ ಕೆ.ಸಿ. ದೇವಕಿ (ಜಾನಪದ ಹಾಡುಗಾರಿಕೆ), ಉಡುಪಿಯ ರಾಧಮ್ಮ (ಜಾನಪದ ಕರಕುಶಲ ಕಲೆ), ಧಾರವಾಡದ ಸಾಂಬಯ್ಯ ಹಿರೇಮಠ (ಹಾಡುಗಾರಿಕೆ), ಗದಗದ ನಾಗಮ್ಮ ಹೊನ್ನಪ್ಪ ಜೋಗಿ (ಸೋಬಾನೆ ಪದ), ವಿಜಯಪುರದ ವೀರಭದ್ರಪ್ಪ ಯಲ್ಲಪ್ಪ ದಳವಾಯಿ (ಏಕತಾರಿ ಪದ), ಬಾಗಲಕೋಟೆಯ ಶಿವಪ್ಪ ಮಲ್ಲಪ್ಪ ಭಾವಿಕಟ್ಟಿ (ಹಂತಿಪದ), ಹಾವೇರಿಯ ಚಂದ್ರಪ್ಪ ಯಲ್ಲಪ್ಪ ಭಜಂತ್ರಿ (ಶಹನಾಯಿ ವಾದನ), ಬೆಳಗಾವಿಯ ಪುಂಡಲೀಕ ಮಾದರ (ಹಲಗೆವಾದನ), ಉತ್ತರ ಕನ್ನಡದ ಶಾರದಾ ಮಹಾದೇವ ಮೊಗೇರ (ಸಂಪ್ರದಾಯದ ಪದ) ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಬಳ್ಳಾರಿಯ ಅಂಜಿನಮ್ಮ ಜೋಗತಿ (ಜೋಗತಿ ನೃತ್ಯ), ರಾಯಚೂರಿನ ಪ್ರಕಾಶಯ್ಯ ನಂದಿ (ಗೀಗೀಪದ), ಕೊಪ್ಪಳದ ದೊಡ್ಡ ಯಮನೂರಪ್ಪ ಭೀಮಪ್ಪ ಭಜಂತ್ರಿ (ಶಹನಾಯಿ ವಾದನ), ಕಲಬುರಗಿಯ ಕರಬಸಯ್ಯ ಶಂಕರಯ್ಯ ಮಠಪತಿ (ತತ್ವಪದ), ಯಾದಗಿರಿಯ ರಾಧಾಬಾಯಿ ಕೃಷ್ಣರಾವ ಮಾಲಿ ಪಾಟೀಲ (ಸಂಪ್ರದಾಯ ಪದ) ಹಾಗೂ ಬೀದರಿನ ಭಾರತಿಬಾಯಿ (ಲಂಬಾಣಿ ನೃತ್ಯ) ಅವರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಬಾಬಾಬುಡನ್ ಗಿರಿ: ಹಿಂದೂ ಅರ್ಚಕರ ನೇಮಕ

ಬೆಂಗಳೂರು: ಚಿಕ್ಕಮಗಳೂರು ಜಿಲ್ಲೆಯ ಶ್ರೀಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾದಲ್ಲಿ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಲು ಮುಜಾವರ್ ಜತೆ ಆಗಮ ಗೊತ್ತಿರುವ ಹಿಂದೂ ಅರ್ಚಕರನ್ನು ನೇಮಕ ಮಾಡಲು ಸರ್ಕಾರ ನಿರ್ಧರಿಸಿದೆ.

ಹಿಂದೂ ಮತ್ತು ಮುಸ್ಲಿಂ ಧರ್ಮದವರನ್ನೊಳಗೊಂಡ ವ್ಯವಸ್ಥಾಪನಾ ಸಮಿತಿ ರಚಿಸಬೇಕು. ಅರ್ಚಕ ಮತ್ತು ಮುಜಾವರ್ ಅವರನ್ನು ಈ ವ್ಯವಸ್ಥಾಪನಾ ಸಮಿತಿಯಿಂದ ನೇಮಿಸಬೇಕು ಎಂದು ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದೆ.

ಗುಹೆಯ ಒಳಗೆ ನಂದಾದೀಪ ಬೆಳಗಿಸಿ, ದತ್ತಾತ್ರೇಯ ಪೀಠ, ಪಾದುಕೆಗಳಿಗೆ ಹೂವುಗಳನ್ನು ಸಮರ್ಪಿಸಿ ಪ್ರತಿನಿತ್ಯದ ಧಾರ್ಮಿಕ ವಿಧಿವಿಧಾನಗಳನ್ನು ನಿರ್ವಹಿಸಲು ವ್ಯವಸ್ಥಾಪನಾ ಸಮಿತಿಯು ಆಗಮ ಶಾಸ್ತ್ರದಲ್ಲಿ ಉತ್ತೀರ್ಣರಾದ ಅರ್ಹ ಹಿಂದೂ ಅರ್ಚಕರನ್ನು ನೇಮಕ ಮಾಡಬೇಕು ಎಂದು ಸೂಚಿಸಲಾಗಿದೆ.

ವ್ಯವಸ್ಥಾಪನಾ ಸಮಿತಿಯಿಂದ ನೇಮಕಗೊಂಡ ಮುಜಾವರ್ ಅವರು ಪ್ರತಿ ಶುಕ್ರವಾರ ಮತ್ತು ಗುರುವಾರ ನಮಾಜ್ ನಂತರ ಹಾಗೂ ಪ್ರತಿ ದಿನ ಸಂಜೆ ದರ್ಗಾಗೆ ಲೋಬಾನ ಹಾಕಬೇಕು ಮತ್ತು ಫತೇಹಾ ಅರ್ಪಿಸಬೇಕು ಎಂದು ತಿಳಿಸಲಾಗಿದೆ.

ದತ್ತ ಮಾಲಾ, ದತ್ತ ಜಯಂತಿ ಮತ್ತು ಇತರ ವಿಶೇಷ ಹಿಂದೂ ಧಾರ್ಮಿಕ ಆಚರಣೆಗಳನ್ನು ಸುಗಮವಾಗಿ ನೆರವೇರಿಸಲು ವ್ಯವಸ್ಥಾಪನಾ ಸಮಿತಿಯು ಕ್ರಮ ಕೈಗೊಳ್ಳಬೇಕು. ಅರ್ಚಕರು, ಮಠಗಳ ಪೀಠಾಧಿಪತಿಗಳು ಅಥವಾ ಗುರುಗಳನ್ನು ಗುಹೆಯ ಒಳಗೆ ಕರೆದೊಯ್ಯು ಪಾದುಕೆಗಳಿಗೆ ಗೌರವ ಸಲ್ಲಿಸಲು ಅವಕಾಶ ಮಾಡಿಕೊಡಬೇಕು ಎಂದು ತಿಳಿಸಲಾಗಿದೆ.

ವ್ಯವಸ್ಥಾಪನಾ ಸಮಿತಿಯು ಒಂದು ವರ್ಷ ಮುಂಚಿತವಾಗಿಯೇ ಹಿಂದೂ ಪಂಚಾಂಗದ ಪ್ರಕಾರ ಘೋಷಿಸುವಂತೆ ಪ್ರತಿ ವರ್ಷ ಹೋಳಿ ಹುಣ್ಣಿಮೆಯ ಮರುದಿನದಿಂದ ಮೂರು ದಿನಗಳ ಕಾಲ ಉರುಸ್ ನಡೆಸಬೇಕು ಎಂದು ಸೂಚಿಸಲಾಗಿದೆ.

ಕರ್ನಾಟಕದ ಸೌಹಾರ್ದ ಕೇಂದ್ರಗಳಲ್ಲಿ ಒಂದಾದ ಬಾಬಾಬುಡನ್‌ಗಿರಿಯಲ್ಲಿ ವೈದಿಕ ಪರಂಪರೆ ಪ್ರಕಾರ ಪೂಜೆ-ಧಾರ್ಮಿಕ ವಿಧಿಗಳು ನಡೆಯಬೇಕು ಎಂದು ಬಿಜೆಪಿ 1998ರಿಂದ ಹೋರಾಟ ಆರಂಭಿಸಿದೆ. ಈ ಬೇಡಿಕೆ ಈಡೇರಿಕೆಗಾಗಿ ಪ್ರತಿವರ್ಷ ದತ್ತ ಮಾಲೆ ಅಭಿಯಾನ, ದತ್ತಜಯಂತಿ ಆಚರಣೆಯನ್ನು ನಡೆಸುತ್ತಿದೆ. ಇದಕ್ಕೂ ಪೂರ್ವದಲ್ಲಿ ಶಾಖಾದ್ರಿ ಅವರು ಬಾಬಾಬುಡನ್‌ಗಿರಿಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದು, ಈಗಲೂ ಅವರೇ ವಿಧಿವಿಧಾನ ನೆರವೇರಿಸುತ್ತಿದ್ದಾರೆ. ವೈದಿಕ ಆಚರಣೆಗೂ ಅವಕಾಶ ಕೊಡಬೇಕೆಂಬ ಬಿಜೆಪಿ ಬೇಡಿಕೆ ಪ್ರಶ್ನಿಸಿ ಅವರು ಕೋರ್ಟ್‌ಗೆ ಹೋಗಿದ್ದರು.

ಬಿಎಸ್‌ವೈ ಮುಖ್ಯಮಂತ್ರಿ ಎಂದು ಘೋಷಿಸಲಿ– ಎಂ.ಬಿ. ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಡಿಯೂರಪ್ಪ ಅವರ ಮೇಲೆ ಬಿಜೆಪಿಯವರಿಗೆ ಪ್ರೀತಿ ಇದ್ದರೆ ಅವರನ್ನು ಮುಖ್ಯಮಂತ್ರಿ ಎಂದು ಘೋಷಿಸಲಿ' ಎಂದು ಬಿಜೆಪಿ ನಾಯಕರಿಗೆ ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಸವಾಲು ಹಾಕಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, '75 ವರ್ಷ ತುಂಬಿದ ಕಾರಣಕ್ಕೆ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿಸಿದ್ದರು. ಅವರ ಬಗ್ಗೆ ಗೌರವ ಇದ್ದಿದ್ದರೆ ಆ ಸ್ಥಾನದಿಂದ ಯಾಕೆ ಇಳಿಸುತ್ತಿದ್ದರು? ಯಡಿಯೂರಪ್ಪ ಮತ್ತೆ ಚುನಾವಣೆಗೆ ನಿಲ್ಲುವುದಿಲ್ಲ. ಮುಖ್ಯಮಂತ್ರಿ ಆಗುವ ಅವಕಾಶವೂ ಇಲ್ಲ' ಎಂದರು.

'ಯಡಿಯೂರಪ್ಪ ಹಿರಿಯರು. ಈಗ ಅವರಿಗೆ ಸಂಸದೀಯ ಮಂಡಳಿಯಲ್ಲಿ ಸ್ಥಾನ ಕೊಟ್ಟಿದ್ದಾರೆ. ಅವರ ಮೇಲೆ ಬಿಜೆಪಿಯವರಿಗೆ ಈಗ ವಿಶೇಷ ಪ್ರೀತಿ ಬಂದಿದೆ' ಎಂದು ವ್ಯಂಗ್ಯವಾಡಿದ ಪಾಟೀಲ, 'ರಾಜ್ಯದಲ್ಲಿ ಬಿಜೆಪಿ ಅಸ್ತಿತ್ವ ಕಳೆದುಕೊಳ್ಳುತ್ತಿದೆ. ಹೀಗಾಗಿ, ಆ ಪಕ್ಷದವರಿಗೆ ಯಡಿಯೂರಪ್ಪ ಬಗ್ಗೆ ಇಲ್ಲದ ಪ್ರೀತಿ ಬಂದಿದೆ' ಎಂದೂ ಅಭಿಪ್ರಾಯಪಟ್ಟರು.

'ಸಿದ್ದರಾಮೋತ್ಸವದಿಂದ ಬಿಜೆಪಿ ನೆಲ ಕಚ್ಚಿದೆ. ಬಿಜೆಪಿ ಬಿಸಿಯಾಗಿದ್ದಿದೆ. ಹೀಗಾಗಿ, ಯಡಿಯೂರಪ್ಪ ಮೇಲೆ ಪ್ರೀತಿ ತೋರಿಸಿದ್ದಾರೆ ಅಷ್ಟೇ. ಮುಂದಿನ ಚುನಾವಣೆಯಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ನೇಮಕ ಮಾಡಿದ್ದಾರೆ' ಎಂದರು.

ಲಿಂಗಾಯತ ಮತ ಸೆಳೆಯಲು ಅಲ್ಲ: 'ಇದೇ 19ರಿಂದ ರಾಜ್ಯಾದ್ಯಂತ ಪ್ರವಾಸ ಕೈಗೊಂಡಿದ್ದೇನೆ. ಹಾಗೆಂದು, ಲಿಂಗಾಯತ ಮತ ಸೆಳೆಯಲು ಈ ಪ್ರವಾಸ ಮಾಡುತ್ತಿಲ್ಲ. ನಮಗೆ ಎಲ್ಲ ಜಾತಿಯವರೂ ಬಹಳ ಮುಖ್ಯ. ಪ್ರವಾಸದ ಸಂದರ್ಭದಲ್ಲಿ ಎಲ್ಲ ಸಮುದಾಯಗಳ ಮಠಗಳಿಗೂ ಭೇಟಿ ನೀಡುತ್ತೇನೆ. ಲಿಂಗಾಯತ ಸಮುದಾಯದವರು ಮೂರ್ಖರಲ್ಲ' ಎಂದೂ ಹೇಳಿದರು.



ಬೆಂಗಳೂರಿನ ಮಾಣೆಕ್ ಶಾ ಪರೇಡ್ ಮೈದಾನದಲ್ಲಿದ್ದ ಟಿಪ್ಪು ಸುಲ್ತಾನ್ ದ್ವಾರ ಮತ್ತು ಕಿತ್ತೂರು ರಾಣಿ ಚನ್ನಮ್ಮ ದ್ವಾರ (ಎಡಚಿತ್ರ). ಹೆಸರುಗಳನ್ನು ಅಳಿಸಿ ಹಾಕಿರುವ ದ್ವಾರಗಳು (ಬಲಚಿತ್ರ)

ರಾಣಿ ಚನ್ನಮ್ಮ, ಟಿಪ್ಪು ಹೆಸರಿಗೆ ಸುಣ್ಣ

ಒಂದನೇ ಪುಟದಿಂದ

'ಟಿಪ್ಪು ಸುಲ್ತಾನ್ ದ್ವಾರ ಮತ್ತು ರಾಣಿ ಚನ್ನಮ್ಮ ದ್ವಾರ' ಎನ್ನುವ ಹೆಸರುಗಳಿಗೆ ಸುಣ್ಣ ಬಳಿಯಲಾಗಿದೆ. ಬಿಜೆಪಿ ಮತ್ತು ಜಿಲ್ಲಾಡಳಿತ ಸ್ವಾತಂತ್ರ್ಯ ಹೋರಾಟಗಾರರಿಗೆ ಅವಮಾನ ಮಾಡಿದೆ' ಎಂದು ದೂರಿದೆ.

'ಮಾಣೆಕ್ ಶಾ ಪರೇಡ್ ಮೈದಾನದಲ್ಲಿ ಎರಡು ದ್ವಾರಗಳಿಗೆ ಇದ್ದ ರಾಣಿ ಚನ್ನಮ್ಮ, ಟಿಪ್ಪು ಸುಲ್ತಾನ್ ಹೆಸರುಗಳನ್ನು ಅಳಿಸಲಾಗಿದೆ. ಧ್ವಜಾರೋಹಣಕ್ಕೂ ಮೊದಲೇ ಹೆಸರುಗಳನ್ನು ಅಳಿಸಿ ಹಾಕಿದ್ದಕ್ಕೆ ಬಸವರಾಜ ಬೊಮ್ಮಾಯಿ ಅವರೇ' ಎಂದು ಕಾಂಗ್ರೆಸ್ ಟ್ವೀಟ್ ಮಾಡಿದೆ.

'ರಾಜ್ಯದ ಮಹನೀಯರ ಬಗ್ಗೆ ಏಕಿಷ್ಟು ಅಸಹನೆ? ಬ್ರಿಟಿಷರ ವಿರುದ್ಧ ಕ್ರಮವಾಗಿ ಪತ್ರ ಬರೆದವನಿಗಿರುವ ಪ್ರಾಮುಖ್ಯ ರಾಜ್ಯದ ಹೋರಾಟಗಾರರಿಗೆ ಏಕಿಲ್ಲ' ಎಂದೂ ಪ್ರಶ್ನಿಸಿದೆ.

'ರಾಜ್ಯೋತ್ಸವ ಪ್ರಶಸ್ತಿಗೆ ಜನರಿಂದಲೇ ಆಯ್ಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ಬಾರಿ ರಾಜ್ಯೋತ್ಸವ ಪ್ರಶಸ್ತಿಗಳಿಗೆ ಅರ್ಜಿಗಳನ್ನು ಆಹ್ವಾನಿಸುವುದಿಲ್ಲ. ಆಯ್ಕೆ ಸಮಿತಿಯ ಸದಸ್ಯರು ರಾಜ್ಯಾದ್ಯಂತ ಸಂಚರಿಸಿ, ಜನರ ಸಲಹೆ ಅನುಸಾರ ರಾಜ್ಯೋತ್ಸವ ಪ್ರಶಸ್ತಿಗೆ ಸಾಧಕರನ್ನು ಆಯ್ಕೆ ಮಾಡಲಿದ್ದಾರೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 'ಅಮೃತ ಭಾರತಿಗೆ ಕನ್ನಡದಾರತಿ' ಅಭಿಯಾನದ ಭಾಗವಾಗಿ ಹಮ್ಮಿಕೊಂಡಿರುವ 'ರಂಗಾಯಣ ನಾಟಕ ತಿರುಗಾಟಕ್ಕೆ' ನಗರದಲ್ಲಿ ಗುರುವಾರ ಚಾಲನೆ ನೀಡಿ, ಮಾತನಾಡಿದರು.

'ಈ ಬಾರಿ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಗುವುದು. ಈಗಿನಿಂದಲೇ ತಯಾರಿ ಪ್ರಾರಂಭಿಸಲಾಗಿದೆ. 'ಪದ್ಮ ಪ್ರಶಸ್ತಿ'ಗೆ ಸಾಧಕರನ್ನು ಆಯ್ಕೆ ಮಾಡಿದ ಮಾದರಿಯಲ್ಲಿಯೇ ರಾಜ್ಯೋತ್ಸವ ಪ್ರಶಸ್ತಿಗೂ ತೆರೆಮರೆಯಲ್ಲಿರುವ ಸಾಧಕರನ್ನು ಗುರುತಿಸಿ, ಗೌರವಿಸಲಾಗುತ್ತದೆ. ಆಯ್ಕೆ ಸಮಿತಿಯನ್ನು ಆದಷ್ಟು ಬೇಗ ರಚನೆ ಮಾಡಲಾಗುವುದು' ಎಂದು ಹೇಳಿದರು.

'ಸೆಪ್ಟೆಂಬರ್ 3ಂಗಳಲ್ಲಿ ನಡೆಯುವ ವಿಧಾನಸಭೆ ಅಧಿವೇಶನದಲ್ಲಿ ಶಾಸಕರಿಗೆ ರಂಗಾಯಣ ಪ್ರಸ್ತುತಪಡಿಸಿದ ನಾಟಕಗಳನ್ನು ಪ್ರದರ್ಶಿಸಲಾಗುತ್ತದೆ' ಎಂದು ಹೇಳಿದರು.

ಶಿವಮೊಗ್ಗ ರಂಗಾಯಣದ ನಿರ್ದೇಶಕ ಸಂದೇಶ್ ಜವಳಿ, 'ಸ್ವಾತಂತ್ರ್ಯದ ಅಮೃತಮಹೋತ್ಸವದ ಪ್ರಯುಕ್ತ ಸಿದ್ಧಪಡಿಸಲಾದ ನಾಟಕಗಳನ್ನು ಇದೇ 30ರವರೆಗೂ ರಾಜ್ಯದ ವಿವಿಧೆಡೆ ಪ್ರದರ್ಶಿಸಲಾಗುತ್ತದೆ' ಎಂದರು.

ಮೈಸೂರು ರಂಗಾಯಣದ ಕಲಾವಿದರು ಅಡ್ಡಂಡ ಕಾರ್ಯಪ್ಪ ಅವರ ನಿರ್ದೇಶನದ 'ಹಲಗಲಿ ಸಮರ' ನಾಟಕ ಪ್ರದರ್ಶಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	123.58	9,144	2,349
ಹಾರಂಗಿ	2,859	2,856.57	2,230	1,400
ಕಬಿನಿ	2,284	2,283.53	4,594	4,000
ಹೇಮಾವತಿ	2,922	2921.85	7,252	7,190
ಲಿಂಗನಮಕ್ಕಿ	1,819	1,812	9,458	5,776
ಸೂಪಾ (ಮೀ)	564	548.32	6,799	1,615
ಮಾಣಿ	595	587	1,105	760
ತುಂಗಭದ್ರಾ	1,633	1,632.99	45,947	48,910
ಮಲಪ್ರಭಾ	2,079.50	2,077.20	4,303	1,344
ಘಟಪ್ರಭಾ	2,175	2,173.50	8,088	4,740
ಭದ್ರಾ	186	183	8,214	4,649
ಆಲಮಟ್ಟಿ (ಮೀ)	519.60	519.17	1,90,751	1,25,000
ನಾರಾಯಣಪುರ (ಮೀ)	492.25	491.74	1,30,000	1,46,126

*ನೀಮಟ್ಟದಿಂದ

ಎಂಟು ಯೂಟ್ಯೂಬ್ ಚಾನೆಲ್‌ಗಳ ನಿಷೇಧ

ನವದೆಹಲಿ (ಪಿಟಿಐ): ದೇಶದ ಭದ್ರತೆಗೆ ಸಂಬಂಧಿಸಿ ತಪ್ಪು ಮಾಹಿತಿ, ಸುಳ್ಳು ಹಾಗೂ ಭಾವೋದ್ರೇಕವನ್ನುಂಟು ಮಾಡುವ ಮಾಹಿತಿ ಪ್ರಸಾರ ಮಾಡುತ್ತಿದ್ದ ಆರೋಪದ ಮೇಲೆ 8 ಯುಟ್ಯೂಬ್ ಚಾನೆಲ್‌ಗಳನ್ನು ನಿಷೇಧಿಸಿ ಕೇಂದ್ರ ಸರ್ಕಾರ ಗುರುವಾರ ಆದೇಶಿಸಿದೆ.

ಇವುಗಳ ಪೈಕಿ ಒಂದು ಚಾನೆಲ್ ಪಾಕಿಸ್ತಾನಕ್ಕೆ ಸೇರಿದ್ದಾಗಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆ 2021ರ ಅಡಿಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಇಲಾಖೆ ತಿಳಿಸಿದೆ.

ಭಾರತದ ಚಾನೆಲ್‌ಗಳಾದ ಲೋಕತಂತ್ರ ಟಿವಿ, ಯು ಆಂಡ್ ವಿ ಟಿವಿ, ಎಎಂ ರಜ್ವಿ, ಗೌರವಶಾಲಿ ಪವನ ಮಿಥಿಲಾಂಚಲ್, ಸೀಟಾಪ್5ಟಿಎಚ್, ಸರ್ಕಾರಿ ಅಪ್‌ಡೇಟ್, ಸಬ್ ಕುಚ್ ದೇಖೋ ಹಾಗೂ ಪಾಕಿಸ್ತಾನ ಮೂಲದ ನ್ಯೂಸ್ ಕಿ ದುನಿಯಾ ಚಾನೆಲ್‌ಗಳನ್ನು ನಿಷೇಧಿಸಲಾಗಿದೆ. ಈ ಚಾನೆಲ್‌ಗಳು ಒಟ್ಟು 85.73 ಲಕ್ಷ ಚಂದಾದಾರರನ್ನು ಹಾಗೂ 114 ಕೋಟಿ ವೀಕ್ಷಕರನ್ನು ಹೊಂದಿದ್ದವು ಎಂದು ಇಲಾಖೆ ಪ್ರಕಟಣೆ ತಿಳಿಸಿದೆ.

'ಕೇಂದ್ರ ಸರ್ಕಾರ ಧಾರ್ಮಿಕ ಕಟ್ಟಡಗಳನ್ನು ನೆಲಸಮಗೊಳಿಸಿದೆ ಎಂಬ ಸುಳ್ಳು ಸುದ್ದಿಗಳನ್ನು, ಧಾರ್ಮಿಕ ಆಚರಣೆಗಳ ಮೇಲೆ ನಿಷೇಧ ಹೇರಲಾಗಿದೆ ಹಾಗೂ ಭಾರತದಲ್ಲಿ ಧಾರ್ಮಿಕ ಸಮರ ಸಾರಲಾಗಿದೆ ಎಂಬಂತಹ ಸುಳ್ಳು ಸುದ್ದಿಗಳನ್ನು ಈ ಚಾನೆಲ್‌ಗಳು ಪ್ರಸಾರ ಮಾಡುತ್ತಿದ್ದವು. ದೇಶದಲ್ಲಿನ ಕೋಮುಸೌಹಾರ್ದವನ್ನು ಕದಡುವ ರೀತಿಯ ವಿಷಯಗಳನ್ನು ಈ ಚಾನೆಲ್‌ಗಳು ಪ್ರಸಾರ ಮಾಡುತ್ತಿದ್ದವು' ಎಂದು ಇಲಾಖೆ ತಿಳಿಸಿದೆ.

'ಭಾರತೀಯ ಸೇನೆ ಹಾಗೂ ಜಮ್ಮು-ಕಾಶ್ಮೀರಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಈ ಚಾನೆಲ್‌ಗಳು ಸುಳ್ಳು ಸುದ್ದಿಗಳನ್ನು ಪ್ರಸಾರ ಮಾಡುತ್ತಿದ್ದವು. ಕೆಲ ಸುದ್ದಿಗಳು ಇತರ ದೇಶಗಳೊಂದಿಗಿನ ಭಾರತದ ಸಂಬಂಧದ ಮೇಲೆ ಪರಿಣಾಮ ಬೀರುವಂತಹವಾಗಿದ್ದವು' ಎಂದೂ ತಿಳಿಸಿದೆ.

ಕಳೆದ ವರ್ಷ ಡಿಸೆಂಬರ್‌ನಿಂದ, ಒಟ್ಟು 102 ಯುಟ್ಯೂಬ್ ಚಾನೆಲ್‌ಗಳು/ಸಾಮಾಜಿಕ ಮಾಧ್ಯಮಗಳ ಖಾತೆಗಳ ನಿಷೇಧಕ್ಕೆ ಕೇಂದ್ರ ಸರ್ಕಾರ ನಿರ್ದೇಶನ ನೀಡಿದೆ.

ಉಚಿತ ಕೊಡುಗೆಗಾಗಿ ₹ 1000 ಕೋಟಿ ವೆಚ್ಚ ಗಂಭೀರ ವಿಷಯ: ಸುಪ್ರೀಂ ಕೋರ್ಟ್

ನವದೆಹಲಿ: ವೈದ್ಯರುಗಳಿಗೆ ಉಚಿತವಾಗಿ ಕೊಡುಗೆಗಳನ್ನು ನೀಡಲು 'ಡೋಲೊ-650' ಮಾತ್ರೆಯ ಉತ್ಪಾದಕ ಸಂಸ್ಥೆಯು ಒಟ್ಟು ₹ 1000 ಕೋಟಿ ವ್ಯಯಿಸಿದೆ ಎಂಬುದು ಗಂಭೀರವಾದ ವಿಷಯ ಎಂದು ಸುಪ್ರೀಂ ಕೋರ್ಟ್ ಗುರುವಾರ ಅಭಿಪ್ರಾಯಪಟ್ಟಿತು.

'ಕೋವಿಡ್ ಅವಧಿಯಲ್ಲಿ ಈ ಮಾತ್ರೆಯನ್ನು ತೆಗೆದುಕೊಳ್ಳುವಂತೆ ನನಗೂ ತಿಳಿಸಲಾಗಿತ್ತು. ಆದರೂ, ₹ 1000 ಕೋಟಿ ವೆಚ್ಚ ಮಾಡಿರುವ ಅಂಶವನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅಭಿಪ್ರಾಯಪಟ್ಟರು.

ಕೇಂದ್ರ ನೇರ ತೆರಿಗೆ ಮಂಡಳಿ ಈ ಆರೋಪ ಮಾಡಿದೆ ಎಂದು ಗುರುವಾರ ಪೀಠದ ಗಮನಕ್ಕೆ ಭಾರತೀಯ ಔಷಧ ಮಾರಾಟಗಾರರು ಮತ್ತು ಪ್ರತಿನಿಧಿಗಳ ಒಕ್ಕೂಟವನ್ನು ಪ್ರತಿನಿಧಿಸಿದ್ದ ವಕೀಲ ಸಂಜಯ್ ಪಾರಿಖ್ ತಂದರು.

ನ್ಯಾಯಮೂರ್ತಿ ಎ.ಎಸ್.ಬೋಪಣ್ಣ ಅವರೂ ಇದ್ದ ಪೀಠವು, ಇದೇ ಸಂದರ್ಭದಲ್ಲಿ ಈ ಕುರಿತು 10 ದಿನದಲ್ಲಿ ಪ್ರತಿಕ್ರಿಯೆ ದಾಖಲಿಸುವಂತೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್ ಅವರಿಗೆ ಸೂಚಿಸಿತು.

ಗ್ರಾ.ಪಂ ಕಾರ್ಯದರ್ಶಿ: ನೇರ ನೇಮಕಾತಿಗೆ ತಾತ್ಕಾಲಿಕ ತಡೆ

ಬೆಂಗಳೂರು: ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್-2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವೃಂದಕ್ಕೆ ಸೇವೆಯೊಳಗಿನ ನೇರ ನೇಮಕ ಮಾಡುವುದನ್ನು ಕೆಲವು ಜಿಲ್ಲೆಗಳಲ್ಲಿ ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆ.

ಈ ಹುದ್ದೆಗಳಿಗೆ ನೇಮಕಾತಿ ಮಾಡುವ ಬಗ್ಗೆ ಏಕರೂಪವಾದ ಮಾರ್ಗಸೂಚಿಗಳನ್ನು ಹೊರಡಿಸಲು ಸರ್ಕಾರದ ಹಂತದಲ್ಲಿ ಪರಿಶೀಲನೆ ನಡೆಸಲಾಗಿದೆ. ಅದ್ದರಿಂದ ಈಗಾಗಲೇ ನೇಮಕಾತಿ ಸಂಬಂಧ ಹೊರಡಿಸಿರುವ ಜಿಲ್ಲೆಗಳನ್ನು ಹೊರತುಪಡಿಸಿ 'ಇನ್ನುಳಿದ ಜಿಲ್ಲೆ ಗಳಲ್ಲಿ ಸೇವೆಯೊಳಗೆ ನೇರ-ನೇಮಕಾತಿ ಅನ್ನು ತಾತ್ಕಾಲಿಕವಾಗಿ ತಡೆ ಹಿಡಿಯುವಂತೆ' ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿಯವರು ಜಿಲ್ಲಾ ಪಂಚಾಯಿತಿಗಳ ಸಿಇಒಗಳಿಗೆ ನಿರ್ದೇಶನ ನೀಡಿದ್ದಾರೆ.

ಭಯೋತ್ಪಾದಕ ಕೃತ್ಯವಲ್ಲ: ಮಹಾರಾಷ್ಟ್ರ ಗೃಹ ಸಚಿವ ದೇವೇಂದ್ರ ಫಡಣವೀಸ್

ಮುಂಬೈ ಕರಾವಳಿಯಲ್ಲಿ ಶಸ್ತ್ರಾಸ್ತ್ರಗಳಿದ್ದ ನೌಕೆ ಜಪ್ತಿ

ಪ್ರಜಾವಾಣಿ ವಾರ್ತೆ

ಮುಂಬೈ/ರಾಯಗಡ: 'ಇಲ್ಲಿನ ಹರಿಹರೇಶ್ವರ–ಶ್ರೀವರ್ಧನ್ ಕರಾವಳಿ ಪ್ರದೇಶದಲ್ಲಿ 16 ಮೀಟರ್ ಉದ್ದದ ವಿಹಾರ ನೌಕೆಯೊಂದು ಪತ್ತೆಯಾಗಿದೆ. ಅದರಲ್ಲಿ ಮೂರು ಎಕೆ-47 ರೈಫಲ್ ಹಾಗೂ ಗುಂಡುಗಳಿದ್ದ 10 ಪೆಟ್ಟಿಗೆಗಳು ದೊರೆತಿವೆ. ನೌಕೆ ಹಾಗೂ ಶಸ್ತ್ರಾಸ್ತ್ರಗಳನ್ನು ಜಪ್ತಿ ಮಾಡಿದ್ದೇವೆ' ಎಂದು ಅಧಿಕಾರಿಯೊಬ್ಬರು ಗುರುವಾರ ಹೇಳಿದ್ದಾರೆ.

ಪ್ರತಿಕೂಲ ಹವಾಮಾನ ಹಾಗೂ ಎಂಜಿನ್ ದೋಷದಿಂದಾಗಿ ನೌಕೆಯನ್ನು ಓಮನ್ ಕರಾವಳಿ ಪ್ರದೇಶದಲ್ಲಿ ಬಿಡಲಾಗಿತ್ತು. 52 ದಿನಗಳ ಬಳಿಕ ಅದು ರಾಯಗಡ ಕರಾವಳಿ ಪ್ರದೇಶಕ್ಕೆ ತೇಲಿಕೊಂಡು ಬಂದಿದೆ.

'ಲೇಡಿ ಹಾನ್' ಹೆಸರಿನ ಈ ನೌಕೆಯು ಆಸ್ಟ್ರೇಲಿಯಾದ ಹಾನ ಲೊಂಡರ್‌ಗನ್ ಎಂಬುವರಿಗೆ ಸೇರಿದ್ದು, ಅವರ ಪತಿ ಜೇಮ್ಸ್ ಹರ್ಬರ್ಟ್ ಅವರೇ ಇದರ ಕ್ಯಾಪ್ಟನ್ ಆಗಿದ್ದಾರೆ.

'ನೌಕೆಯು ಮಸ್ಕತ್‌ನಿಂದ ಯುರೋಪ್‌ಗೆ ಹೊರಟಿತ್ತು. ಜೂನ್ 26ರಂದು ಎಂಜಿನ್ ದೋಷ ಕಾಣಿಸಿಕೊಂಡಿತ್ತು. ಅದರಲ್ಲಿದ್ದ ಸಿಬ್ಬಂದಿ ಅಪಾಯದ ಗಂಟೆ ಬಾರಿಸಿದ್ದರು. ಅದೇ ಪ್ರದೇಶದಲ್ಲಿದ್ದ ಕೊರಿಯಾದ ಯುದ್ಧನೌಕೆಯು ಸಿಬ್ಬಂದಿ ಸಂಪರ್ಕಕ್ಕೆ ಸಿಲುಕಿದ್ದವರನ್ನು ರಕ್ಷಿಸಿ ಓಮನ್‌ನ ಕರಾವಳಿ ಪಡೆ ಅಧಿಕಾರಿಗಳಿಗೆ ಒಪ್ಪಿಸಿದ್ದರು. ದೊಡ್ಡ ಅಲೆಗಳು ಏಳುತ್ತಿದ್ದುದರಿಂದ ನೌಕೆಯನ್ನು ಸಮುದ್ರದಿಂದ ಹೊರಗೆ ತೆಗೆದುಕೊಂಡು ಹೋಗಲು ಆಗಿರಲಿಲ್ಲ' ಎಂದು ಗೃಹ ಸಚಿವರೂ ಆಗಿರುವ ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ವಿಧಾನಸಭೆಗೆ ತಿಳಿಸಿದ್ದಾರೆ.

'ನೌಕೆ ಹಾಗೂ ಅದರೊಳಗಿದ್ದ ಶಸ್ತ್ರಾಸ್ತ್ರಗಳನ್ನು ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಅದರಲ್ಲಿದ್ದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ಇದನ್ನು ಭಯೋತ್ಪಾದಕ ಕೃತ್ಯವೆಂದು ಹೇಳಲಾಗುವುದಿಲ್ಲ' ಎಂದಿದ್ದಾರೆ.



ರಾಯಗಡ ಕರಾವಳಿ ಪ್ರದೇಶದಲ್ಲಿ ಪತ್ತೆಯಾಗಿರುವ ವಿಹಾರ ನೌಕೆ –ಪಿಟಿಐ ಚಿತ್ರ

'ನೌಕೆಯಲ್ಲಿ ಎಕೆ ಸರಣಿಯ ಶಸ್ತ್ರಾಸ್ತ್ರಗಳು ದೊರೆತಿದ್ದರಿಂದ ಭಯೋತ್ಪಾದಕರ ಸಂಚಿರಬಹುದೆಂದು ಅಂದಾಜಿಸಲಾಗಿತ್ತು. ಸ್ಥಳೀಯ ಪೊಲೀಸರು ಹಾಗೂ ಭಯೋತ್ಪಾದನಾ ನಿಗ್ರಹ ದಳದ ಅಧಿಕಾರಿಗಳು ಈ ಕುರಿತು ತನಿಖೆ ನಡೆಸುತ್ತಿದ್ದಾರೆ. ಇದರಲ್ಲಿ ಶಸ್ತ್ರಾಸ್ತ್ರಗಳು ಏಕೆ ಇಟ್ಟಿದ್ದರು ಎಂಬುದು ಗೊತ್ತಾಗಿಲ್ಲ' ಎಂದೂ ಹೇಳಿದ್ದಾರೆ.

'ಈ ಕುರಿತು ಸಮಗ್ರ ತನಿಖೆ ನಡೆಸಬೇಕು. ಇದಕ್ಕಾಗಿ ವಿಶೇಷ ತಂಡ ರಚಿಸಬೇಕು' ಎಂದು ರಾಯಗಡ ಕ್ಷೇತ್ರದ ಶಾಸಕ ಅದಿತಿ ತಟ್ಕರೆ ಒತ್ತಾಯಿಸಿದ್ದಾರೆ.

ಈ ಘಟನೆ ಬಳಿಕ ಮಹಾರಾಷ್ಟ್ರದ ಕರಾವಳಿ ಭಾಗದಲ್ಲಿ ಭದ್ರತೆ ಹೆಚ್ಚಿಸಲಾಗಿದೆ.

'ಮುಂಬೈನಿಂದ 190 ಕಿ.ಮೀ. ದೂರದಲ್ಲಿರುವ ಶ್ರೀವರ್ಧನ್ ಎಂಬಲ್ಲಿ ಸಿಬ್ಬಂದಿ ಇಲ್ಲದ ನೌಕೆಯನ್ನು ಸ್ಥಳೀಯರು ಗಮನಿಸಿದ್ದರು. ಈ ಸಂಬಂಧ ಭದ್ರತಾ ಪಡೆಯವರಿಗೆ ಮಾಹಿತಿ ನೀಡಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ನೌಕೆಯು ಇಂಗ್ಲೆಂಡ್‌ನ ನೋಂದಣಿ ಹೊಂದಿದೆ. ಭದ್ರತಾ ದೃಷ್ಟಿಯಿಂದ ಸಣ್ಣ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಹೊಂದಲು ಅವಕಾಶವಿದೆ. ಸಿಬ್ಬಂದಿಯು ನೌಕೆ ತೊರೆಯುವಾಗ ಶಸ್ತ್ರಾಸ್ತ್ರಗಳನ್ನು ಜೊತೆಗೆ ತೆಗೆದುಕೊಂಡು ಹೋಗಿಲ್ಲ. ಹೀಗಾಗಿ ಅವು ನೌಕೆಯಲ್ಲೇ ಉಳಿದಿವೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಸಮುದ್ರದ ಅಲೆ ಹಾಗೂ ಬಿರುಗಾಳಿಯಿಂದಾಗಿ ನೌಕೆಯು ಹಾನಿಗೊಳಗಾಗಿದೆ' ಎಂದು ಕರಾವಳಿ ಕಾವಲು ಪಡೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

'ಶಸ್ತ್ರದ ಕುರಿತು ಮಾಹಿತಿ ಕಲೆಹಾಕಲು ಶಸ್ತ್ರಾಸ್ತ್ರ ಮಾರಾಟಗಾರರನ್ನು ಸಂಪರ್ಕಿಸಿದ್ದೇವೆ. ಹಡಗಿನಲ್ಲಿ ಪತ್ತೆಯಾದ ಶಸ್ತ್ರಾಸ್ತ್ರಗಳ ಸರಣಿ ಸಂಖ್ಯೆಗಳು ಮಾರಾಟಗಾರರ ದಾಖಲೆಗಳಲ್ಲಿ ಕಾಣಿಸುವ ಶಸ್ತ್ರಾಸ್ತ್ರಗಳೊಂದಿಗೆ ಹೋಲಿಕೆಯಾಗುತ್ತಿವೆ' ಎಂದು ಹೇಳಿದ್ದಾರೆ.

ರೋಹಿಂಗ್ಯಾ ನಿರಾಶ್ರಿತರಿಗೆ ವಸತಿ ವಿವಾದ: ತನಿಖೆಗೆ ಮನೀಶ್ ಸಿಸೋಡಿಯಾ ಆಗ್ರಹ

ನವದೆಹಲಿ (ಪಿಟಿಐ): ರೋಹಿಂಗ್ಯಾ ಸಮುದಾಯದವರನ್ನು ರಾಷ್ಟ್ರ ರಾಜಧಾನಿಯ ಅಪಾರ್ಟ್‌ಮೆಂಟ್‌ಗಳಿಗೆ ಸ್ಥಳಾಂತರಿಸಲು ಸೂಚನೆ ನೀಡಿದವರನ್ನು ಪತ್ತೆಮಾಡಲು ತನಿಖೆಗೆ ಆದೇಶಿಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಒತ್ತಾಯಿಸಿ ದೆಹಲಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಗುರುವಾರ ಪತ್ರ ಬರೆದಿದ್ದಾರೆ.

'ನಾವಂತೂ ಈ ಬಗ್ಗೆ ನಿರ್ಧಾರ ತೆಗೆದುಕೊಂಡಿಲ್ಲ, ಕೇಂದ್ರ ಸರ್ಕಾರ ಕೂಡ ಅಂತಹ ನಿರ್ಧಾರ ತೆಗೆದುಕೊಂಡಿಲ್ಲವೆಂದು ಹೇಳುತ್ತಿದೆ. ಮತ್ತೆ ಯಾರು ಈ ಸೂಚನೆ ನೀಡಿದವರು' ಎಂದು ಪ್ರಶ್ನಿಸಿರುವ ಸಿಸೋಡಿಯಾ, 'ಈ ನಿರ್ಧಾರದ ಹಿಂದಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ರೋಹಿಂಗ್ಯಾ ಸಮುದಾಯದವರ ಸ್ಥಳಾಂತರದ ಬಗ್ಗೆ ಕೇಂದ್ರದ ನಿಲುವು ಸ್ಪಷ್ಟಪಡಿಸುವಂತೆ ಗೃಹ ಸಚಿವರಿಗೆ ಮನವಿ ಮಾಡಿರುವುದಾಗಿ ಅವರು ತಿಳಿಸಿದರು.

ಕೇಂದ್ರ ವಸತಿ ಮತ್ತು ನಗರ ಭಿವೃದ್ಧಿ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ರೋಹಿಂಗ್ಯಾ ಸಮುದಾಯದವರನ್ನು ಸ್ಥಳಾಂತರಿಸುವ ನಿರ್ಧಾರವನ್ನು ಬುಧವಾರ ಟ್ವಿಟರ್‌ನಲ್ಲಿ ಪ್ರಕಟಿಸಿದರು. 'ಇದಕ್ಕೆ ಆಮ್ ಆದ್ಮಿ ಪಕ್ಷ ತೀವ್ರ ವಿರೋಧ ವ್ಯಕ್ತಪಡಿಸಿದ ನಂತರ ಕೇಂದ್ರ ಗೃಹ ಸಚಿವಾಲಯ ಸ್ಪಷ್ಟನೆ ನೀಡಿತು' ಎಂದು ಸಿಸೋಡಿಯಾ ಹೇಳಿದರು.

ಬಿಜೆಪಿ ಆರೋಪ: 'ಈ ಸುಳ್ಳು ಕೋರರಿಗೆ ಇಡಬ್ಲ್ಯುಎಸ್ ಫ್ಲಾಟ್ ಗಳಲ್ಲಿ ಕಾಯಂ ಪುನರ್ವಸತಿ ಕಲ್ಪಿಸುವಂತೆ ಕೇಜ್ರಿವಾಲ್ ಸರ್ಕಾರದ ಅಧಿಕಾರಿಗಳೇ ಪದೇ ಪದೇ ಪತ್ರ ಬರೆದಿದ್ದಾರೆ' ಎಂದು ಎಎಪಿ ಸರ್ಕಾರದ ವಿರುದ್ಧ ಬಿಜೆಪಿ ದೆಹಲಿ ಘಟಕವು ಆರೋಪ ಮಾಡಿದೆ.



ರಚನಾ ಇಂದರ್, ಪ್ರವೀಣ್

ಎಡಗೈ... ಅಪಘಾತವಲ್ಲ ‘ಆಘಾತ’

ರಂಗಭೂಮಿ, ಕಿರುಚಿತ್ರಗಳಲ್ಲಿ ನಟಿಸುತ್ತಾ, ಅಷ್ಟೋ ಇಷ್ಟೋ ಆನ್‌ಲೈನ್ ವೇದಿಕೆಗಳಲ್ಲಿ ಸಕ್ರಿಯವಾಗಿದ್ದ ಮೌಂಟ್ ಕಾರ್ಮೆಲ್ ಕಾಲೇಜು ಹುಡುಗಿಗೆ ಇದೀಗ ನಾಯಕಿ ಪಾತ್ರವೊಂದು ಹುಡುಕಿಕೊಂಡು ಬಂದಿದೆ. ‘ಎಡಗೈಯೇ ಅಪಘಾತಕ್ಕೆ ಕಾರಣ’ ಚಿತ್ರದಲ್ಲಿ ಧನು ಹರ್ಷಾ ಹೇಗಿದ್ದಾರೆ? ಅವರನ್ನೇ ಕೇಳೋಣ...



ಧನು ಹರ್ಷ

ಶರತ್ ಹೆಗ್ಡೆ

● ತಮಿಳಿನ ‘ಇರಂಥ ಕಾಲಂ’, ಕನ್ನಡದ ‘ಅರಿಹ’ದಿಂದ ಇದೀಗ ‘ಎಡಗೈ...’ ವರೆಗಿನ ಹೆಜ್ಜೆಗಳು ಹೇಗಿದ್ದವು?

‘ಇರಂಥ ಕಾಲಂ’ ನನ್ನ ವಯಸ್ಸಿಗಿಂತ ಸುಮಾರು 8, 9 ವರ್ಷ ಹಿರಿಯಳ ಪಾತ್ರ. ತುಂಬಾ ಸವಾಲಿನದ್ದೂ ಹೌದು. ಅದರಲ್ಲಿ ಸಾಕಷ್ಟು ಅನುಭವ ಸಿಕ್ಕಿತು. ‘ಅರಿಹ’ದಲ್ಲಿ ಪೋಷಕ ಪಾತ್ರ. ‘ಎಡಗೈ...’ಗೆ ಸಿಕ್ಕ ಅವಕಾಶ ನೋಡಿದರೆ ನಾನಿನ್ನೂ ಆ ಶಾಕ್‌ನಿಂದ ಹೊರಬಂದಿಲ್ಲ. ಅಂತಹ ಅವಕಾಶ ಇದು. ವರಮಹಾಲಕ್ಷ್ಮೀ ಹಬ್ಬದ ಮುನ್ನಾದಿನ ನಾನು ಆಯ್ಕೆಯಾದ ಸುದ್ದಿ ಬಂತು. ಅದೂ ದಿಗಂತ್ ಅವರ ಜೊತೆ ಅಭಿನಯಿಸುತ್ತಿದ್ದೇನೆ. ಆಗಸ್ಟ್ ಅಂತ್ಯದಲ್ಲಿ ಶೂಟಿಂಗ್ ಆರಂಭವಾಗಲಿದೆ.

● ಬೆಳ್ಳಿತೆರೆಗೆ ಬರುವ ಮುನ್ನ ನಿಮ್ಮ ಸಿದ್ಧತೆ ಹೇಗಿತ್ತು?

ನಾನು ನಟನಾ ತರಬೇತಿಯನ್ನೋ, ಪದವಿಯನ್ನೋ ಪಡೆದವಳಲ್ಲ. ಕಾಲೇಜಿನ ರಂಗ ತಂಡಗಳಲ್ಲಿ ಸಕ್ರಿಯಳಾಗಿದ್ದೆ. ‘ವಿಮೂವ್’, ‘ಬೆಂಗಳೂರು ಲಿಟ್ಲ್ ಥಿಯೇಟರ್ ಗ್ರೂಪ್’ ತಂಡಗಳ ನಾಟಕಗಳಲ್ಲಿ ಅಭಿನಯಿಸಿದ್ದೆ. ಹಾಗೆ ನೋಡಿದರೆ ರಂಗಭೂಮಿಯೇ ನನಗೆ ತುಂಬಾ ಖುಷಿ ಕೊಡುತ್ತದೆ. ಒಂದು ವೇಳೆ ಪೂರ್ಣಾವಧಿ ಕೆಲಸ ಮಾಡುವ ಒಳ್ಳೆಯ ಅವಕಾಶ ಸಿಕ್ಕಿದರೆ ರಂಗಭೂಮಿಯಲ್ಲೇ ಕೆಲಸ ಮಾಡಬೇಕು ಎಂಬ ಆಸೆ ಇದೆ.

ಪದವಿ ಓದುತ್ತಿರುವಾಗಲೇ ‘ಫ್ರೆಷ್ ಫೇಸ್ ಇಂಡಿಯಾ’ ಫ್ಯಾಷನ್ ಷೋದಲ್ಲಿ ‘ಬೆಂಗಳೂರು ನಗರ’ ವಿಭಾಗದಲ್ಲಿ ವಿಜೇತಳಾಗಿದ್ದೆ. ಆಗಾಗ ಕಿರುಚಿತ್ರಗಳನ್ನು ಮಾಡುತ್ತಿದ್ದೆ. ಕೋವಿಡ್ ಸಮಯದಲ್ಲಿ ಮನೆಯಲ್ಲೇ ಇರಬೇಕಾಯಿತು. ಆಗ ಮನೆಯಲ್ಲೇ ಒಂದು ಪುಟ್ಟ ಸ್ಟುಡಿಯೊ ಮಾಡಿ ಅಲ್ಲಿಯೇ ಜಾಲತಾಣಗಳಿಗೆ ಬೇಕಾದ ಕಂಟೆಂಟ್ ಮಾಡುತ್ತಿದ್ದೆ. ಅಲ್ಲಿಯೂ ಕಿರುಚಿತ್ರಗಳ ಪ್ರಯೋಗಗಳು ನಡೆದವು. ಒಟ್ಟಿನಲ್ಲಿ ನನ್ನದೇ ಆದ ವ್ಯಕ್ತಿಚಿತ್ರ ಬೆಳೆಸಿಕೊಳ್ಳುತ್ತಾ ಮುನ್ನಡೆದೆ. ಈಗ ಇಲ್ಲಿವರೆಗೆ ಬಂದಿದ್ದೇನೆ ನೋಡಿ.

● ‘ಎಡಗೈ...’ ವಿಷಯವನ್ನಿಟ್ಟುಕೊಂಡು ಹೊರಟಿದ್ದೀರಿ?

ಇದು ಎಡಗೈಯನ್ನೇ ಹೆಚ್ಚು ಬಳಸುವವರ ಕುರಿತ ಸಿನಿಮಾ. ನಮ್ಮಲ್ಲಿ ಈಗಲೂ ಎಡಗೈ ಎಂದರೆ ಅಪಶಕುನ ಎಂಬ ನಂಬಿಕೆ ಇದೆ. ಯಾವುದೇ ಎಡಗೈಯವರು ಉದ್ದೇಶಪೂರ್ವಕವಾಗಿ ಅಭ್ಯಾಸ ಮಾಡಿಕೊಂಡು ಎಡಗೈ ಬಳಸುವುದಿಲ್ಲ. ಕೆಲವರಿಗೆ ಅಲ್ಲಿಯೇ ಶಕ್ತಿ ಇರುತ್ತದೆ. ಜೈವಿಕವಾಗಿಯೂ ಬಂದಿರುವುದುಂಟು. ನಾನೂ ಇಂಥ ಪ್ರಕರಣಗಳನ್ನು ನೋಡಿದ್ದೇನೆ. ಚಿತ್ರದಲ್ಲಿ ನಾಯಕನಂತೆಯೇ ನಾಯಕಿಯೂ ಎಡಗೈ ಬಳಸುವವಳು. ಹಾಗಾಗಿ ಅವರು ಎಂತೆಂತಹ ಸಮಸ್ಯೆಗಳು, ಸಂದರ್ಭಗಳನ್ನು ಎದುರಿಸುತ್ತಾರೆ ಎಂಬುದು ಸಿನಿಮಾದ ಕಥಾಹಂದರ. ಪ್ರೋಮೋ ಶೂಟಿಂಗ್ ಎಲ್ಲವೂ ತುಂಬಾ ಮಜವಾಗಿತ್ತು. ಒಟ್ಟಿನಲ್ಲಿ ಈ ಅವಕಾಶ ಖುಷಿ ಕೊಟ್ಟಿದೆ.

● ಸ್ಫೂರ್ತಿಯ ಗುರುಗಳು ಯಾರು?

ನಿರ್ದಿಷ್ಟವಾಗಿ ಇಂಥವರು ಎಂದು ಯಾರೂ ಇಲ್ಲ. ಎಲ್ಲರಿಂದಲೂ ಕಲಿಯುವುದಿದೆ. ಕನ್ನಡದ ಮಟ್ಟಿಗೆ ಡಾ.ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್, ತಮಿಳಿನಲ್ಲಿ ಕಮಲ್ ಹಾಸನ್, ವಿಜಯ್ ಸೇತುಪತಿ.... ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಯಾವುದೇ ನಟ/ನಟಿಯ ಚಿತ್ರಗಳನ್ನು ನೋಡಿದಾಗ ಅವರ ಬಗ್ಗೆ ಅಧ್ಯಯನ ಮಾಡುತ್ತೇನೆ. ಈ ಕ್ಷೇತ್ರಕ್ಕೆ ಅವರ ತಯಾರಿಗಳು. ಅಪ್‌ಡೇಟ್ ಆಗುವ ಬಗೆ, ಮ್ಯಾನರಿಸಂ, ಕೌಶಲ ಎಲ್ಲವನ್ನೂ ತಿಳಿದುಕೊಳ್ಳಲು ಪ್ರಯತ್ನಿಸುತ್ತೇನೆ.

● ಶಿಕ್ಷಣ ಎಲ್ಲಿವರೆಗೆ ಬಂತು?

ಬಿ.ಎ. ಪದವಿ ಮುಗಿದಿದೆ. ನಟನೆಯ ಕಾರಣಕ್ಕೆ ಕೆಲಕಾಲ ಬ್ರೇಕ್ ತೆಗೆದುಕೊಂಡೆ. ಮುಂದೆ ಎಂಬಿಎ ಓದಬೇಕು. ಉದ್ಯಮ ಪ್ರವೇಶಿಸಬೇಕು ಎಂದುಕೊಂಡಿದ್ದೇನೆ. ಅಪ್ಪ ಉದ್ಯಮಿ. ಅಮ್ಮನೂ ಉದ್ಯಮಕ್ಕೆ ನೆರವಾಗುತ್ತಿದ್ದಾರೆ. ನನಗೂ ಆಸಕ್ತಿ ಇದೆ. ಹಾಗಾಗಿ ಶಿಕ್ಷಣದ ಭದ್ರ ಬುನಾದಿ ಇರಬೇಕು. ಆ ದಿಸೆಯಲ್ಲಿ ಸಾಗಿದ್ದೇನೆ.

● ಕನ್ನಡದಲ್ಲಿ ಮುಂದಿನ ಕನಸುಗಳು?

ಕಲಾವಿದರಿಗೆ ಭಾಷೆ ಮುಖ್ಯವಾಗುವುದಿಲ್ಲ. ನಾವು ಕೊಡುವ ಕೃತಿ ಮತ್ತು ಅದರ ಮೌಲ್ಯ ಏನು ಎಂಬುದಷ್ಟೇ ಮುಖ್ಯ. ಉದಾಹರಣೆಗೆ ಕಿರುಚಿತ್ರಗಳಿಗಾಗಿ ತಮಿಳು ಕಲಿತೆ. ಅದು ಮುಂದೆ ಬೆಳ್ಳಿತೆರೆಗೂ ಅನುಕೂಲವಾಯಿತು. ಕನ್ನಡದಲ್ಲೂ ಈಗ ನಾಯಕಿಯಾಗಿ ಮೊದಲ ಅವಕಾಶ ಬಂದಿದೆ. ಮುಂದೆ ನೋಡಬೇಕು. ಮೊದಲು ನನ್ನ ಶಿಕ್ಷಣದ ಕಡೆಗೆ ಗಮನ. ಆ ಬಳಿಕ ಮೊದಲೇ ಹೇಳಿದೆನಲ್ಲಾ, ಎಲ್ಲ ಅನುಕೂಲಗಳು ಒದಗಿಬಂದರೆ ಪೂರ್ಣಾವಧಿ ರಂಗಭೂಮಿ ನನಗಿಷ್ಟ.

● ಪೋಷಕರ ಪ್ರೋತ್ಸಾಹ ಹೇಗಿದೆ?

ಪದವಿ ಮುಗಿದ ಕಾರಣ ಈಗ ಚೆನ್ನಾಗಿಯೇ ಇದೆ. ಅವರ ದೃಷ್ಟಿ ನನ್ನ ಶಿಕ್ಷಣದ ಮೇಲೆ ಇದೆ. ಹೊಸಚಿತ್ರಕ್ಕೆ ಆಯ್ಕೆಯಾದ ಕಾರಣ ಅವರೂ ಖುಷಿಯಾಗಿದ್ದಾರೆ. ಜೊತೆಗೆ ತೆರೆಯ ಮೇಲೆ ನೋಡಿದವರ, ಸ್ನೇಹಿತರ ಬೆಂಬಲವೂ ಚೆನ್ನಾಗಿದೆ. ಎಲ್ಲರ ಪ್ರೋತ್ಸಾಹವೂ ಹೀಗೇ ಇರಲಿ ಎಂದೇ ಬಯಸುತ್ತೇನೆ. ❖

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

‘ಲವ್ 360’

ಇಂದು ತೆರೆಗೆ

ಶಶಾಂಕ್ ನಿರ್ದೇಶನದ ‘ಲವ್ 360’ ಚಿತ್ರ ಆಗಸ್ಟ್ 19ರಂದು ರಾಜ್ಯದಾದ್ಯಂತ ತೆರೆ ಕಾಣುತ್ತಿದೆ. ಪ್ರವೀಣ್ ಈ ಚಿತ್ರದ ನಾಯಕ, ರಚನಾ ಇಂದರ್ ನಾಯಕಿ. ಹೊಸಬರನ್ನೇ ಹಾಕಿಕೊಂಡು ಒಳ್ಳೆಯ ಚಿತ್ರ ಕೊಡುವ ಪ್ರಯೋಗಕ್ಕೆ ಮುಂದಾಗಿದ್ದೇನೆ ಎಂದರು ಶಶಾಂಕ್.

ಶಶಾಂಕ್ ನನ್ನ ಅಚ್ಚುಮೆಚ್ಚಿನ ನಿರ್ದೇಶಕರಲ್ಲಿ ಒಬ್ಬರು. ಅವರ ನಿರ್ದೇಶನದಲ್ಲಿ ನಾನು ನಟಿಸಬೇಕಿತ್ತು. ಕಾರಣಾಂತರದಿಂದ ಆಗಿಲ್ಲ. ಮುಂದೆ ನಮ್ಮಿಬ್ಬರ ಕಾಂಬಿನೇಶನ್‌ನಲ್ಲಿ ಚಿತ್ರ ಬರುತ್ತದೆ. ‘ಲವ್ 360’ ಚಿತ್ರದ ಟ್ರೇಲರ್ ಚೆನ್ನಾಗಿದೆ ಎಂದು ಶಿವರಾಜ್‌ಕುಮಾರ್ ಶಹಬಾಸ್‌ಗಿರಿ ಕೊಟ್ಟಿದ್ದಾರೆ. ಅರ್ಜುನ್ ಜನ್ಯ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ.

‘ಕೆ.ಆರ್.ಜಿ ಸ್ಟುಡಿಯೋಸ್ ಸಂಸ್ಥೆಯವರು ನಮ್ಮ ಚಿತ್ರವನ್ನು ವಿತರಿಸುತ್ತಿದ್ದಾರೆ. ನೂರೈವತ್ತಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಚಿತ್ರ ಬಿಡುಗಡೆಯಾಗುತ್ತಿದೆ’ ಎಂದರು ಶಶಾಂಕ್. ❖

26ರಂದು ಬರ್ತಾನೆ ‘ಶಿವ 143’



ಧೀರನ್ ರಾಮ್ ಕುಮಾರ್

ನಟ ಡಾ.ರಾಜಕುಮಾರ್ ಮೊಮ್ಮಗ ಧೀರನ್ ರಾಮಕುಮಾರ್ ನಾಯಕನಾಗಿ ನಟಿಸಿರುವ ‘ಶಿವ 143’ ಚಿತ್ರ ಆಗಸ್ಟ್ 26ರಂದು ಬಿಡುಗಡೆಯಾಗಲಿದೆ. ಈಗಾಗಲೇ ಈ ಚಿತ್ರದ ಟ್ರೇಲರ್ ಹಾಗೂ ಹಾಡು ನೋಡುಗರ ಮನ ಗೆದ್ದಿದೆ. ಇತ್ತೀಚೆಗೆ ಅಶ್ವಿನಿ ಪುನೀತ್ ರಾಜಕುಮಾರ್ ಈ ಟೀಸರ್ ಬಿಡುಗಡೆ ಮಾಡಿ ಶುಭ ಹಾರೈಸಿದ್ದಾರೆ.

‘ಇದು ಲಾಕ್ ಡೌನ್ ಪೂರ್ವದಲ್ಲೇ ತಯಾರಾದ ಸಿನಿಮಾ. ಕೊರೊನಾ ಕಾರಣದಿಂದ ಬಿಡುಗಡೆ ವಿಳಂಬವಾಯಿತು. ಆನಂತರ ದೊಡ್ಡ ದೊಡ್ಡ ಸಿನಿಮಾಗಳು ತೆರೆಗೆ ಬರಲು ಸಿದ್ಧವಾಗಿದ್ದವು. ನಾವು ಸೂಕ್ತ ಸಮಯ ನೋಡಿ, ಇದೇ ಆಗಸ್ಟ್ 26ರಂದು ಚಿತ್ರವನ್ನು ಬಿಡುಗಡೆ ಮಾಡುತ್ತಿದ್ದೇವೆ’ ಎಂದರು ನಿರ್ದೇಶಕ ಅನಿಲ್ ಕುಮಾರ್.

‘ಇದು ರೌಡಿಸಂ ಚಿತ್ರ ಅಲ್ಲ. ವಿಭಿನ್ನ ಪ್ರೇಮಕಥೆಯ ಚಿತ್ರ. ಜಯಣ್ಣ ಫಿಲಂಸ್ ಮೂಲಕ ಈ ಚಿತ್ರ ನಿರ್ಮಾಣವಾಗಿದೆ. ನಿರ್ಮಾಪಕರು ಹಾಗೂ ಧೀರನ್ ಅವರ ಕುಟುಂಬದವರು ಕುಳಿತು, ಧೀರನ್ ಅವರಿಗೆ ಇಂತಹುದೇ ಕಥೆ ಇದ್ದರೆ ಚೆನ್ನ ಎಂದು ತೀರ್ಮಾನಿಸಿದ್ದರು. ನಾನು ಆನಂತರ ತಂಡ ಸೇರಿಕೊಂಡೆ. ಧೀರನ್ ಅವರಿಗೆ ಈ ಮಾಸ್ ಲುಕ್ ಸರಿ ಹೊಂದುವುದೊ, ಇಲ್ಲವೋ ಎಂಬ ಆತಂಕ ಇತ್ತು. ಅವರ ನಟನೆ ನೋಡಿ ಅದು ದೂರವಾಯಿತು. ನಾಯಕಿ ಮಾನ್ವಿತಾ ಕಾಮತ್ ಹಾಗೂ ಚರಣ್ ರಾಜ್ ಅವರ ಅಭಿನಯ ಕೂಡ ತುಂಬಾ ಚೆನ್ನಾಗಿದೆ. ಸಾಧುಕೋಕಿಲ ಹಾಗೂ ಚಿಕ್ಕಣ್ಣ ಅವರ ಕಾಮಿಡಿ ಮೋಡಿ ಮಾಡಲಿದೆ’ ಎಂದರು ಅನಿಲ್.

‘ನನಗೂ ಈ ಕಥೆ ಇಷ್ಟವಾಗಿತ್ತು. ಈ ಚಿತ್ರಕ್ಕಾಗಿ ಸಾಕಷ್ಟು ತಯಾರಿ ಮಾಡಿಕೊಂಡಿದ್ದೆ. ಮೈಸೂರಿನಲ್ಲಿ ಈ ಚಿತ್ರದ ಚಿತ್ರೀಕರಣ ನಡೆಯುತ್ತಿತ್ತು. ಅಲ್ಲೇ ಅಪ್ಪು ಮಾಮ ‘ಜೇಮ್ಸ್’ ಚಿತ್ರದ ಚಿತ್ರೀಕರಣದಲ್ಲಿ ಭಾಗಿಯಾಗಿದ್ದರು. ಸಾಹಸ ನಿರ್ದೇಶಕ ರವಿವರ್ಮ ಅವರು ಎರಡೂ ಚಿತ್ರಗಳಿಗೂ ಸಾಹಸ ಸಂಯೋಜನೆ ಮಾಡುತ್ತಿದ್ದರು. ನಾನು ಪಾಲ್ಗೊಂಡ ಸಾಹಸ ದೃಶ್ಯವೊಂದರ ತುಣುಕನ್ನು ರವಿವರ್ಮ, ಅಪ್ಪು ಮಾಮ (ಪುನೀತ್) ಅವರಿಗೆ ತೋರಿಸಿದರಂತೆ. ಅದನ್ನು ನೋಡಿದ ಅಪ್ಪು ಮಾಮ, ಸ್ನೇಹಿತರೊಬ್ಬರ ಬಳಿ ಅವನ ಕಣ್ಣು ನೋಡಿ ಎಷ್ಟು ಚೆನ್ನಾಗಿದೆ. ನಮ್ಮ ಕುಟುಂಬದಿಂದ ಒಳ್ಳೆಯ ಹೀರೊ ಬರುತ್ತಿದ್ದಾನೆ ಎಂದು ತುಂಬಾ ಸಂತೋಷಪಟ್ಟಿದ್ದರಂತೆ. ಈ ವಿಷಯವನ್ನು ನನಗೆ ಎಷ್ಟೋ ದಿನಗಳ ಬಳಿಕ ಆ ಸ್ನೇಹಿತರು ಹೇಳಿದರು’ ಎಂದರು ನಾಯಕ ಧೀರನ್.

ಜಯಣ್ಣ, ಭೋಗೇಂದ್ರ ಹಾಗೂ ಡಾ.ಸೂರಿ ನಿರ್ಮಿಸಿರುವ ಈ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ನೀಡಿದ್ದಾರೆ. ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನೀವು ಎಲ್ಲರನ್ನೂ ಮೆಚ್ಚಿಸಲು ಪ್ರಯತ್ನಿಸಿದರೆ, ಯಾರನ್ನೂ ಮೆಚ್ಚಿಸಲಾರಿರಿ. ಇತರರ ಸಂತೋಷಕ್ಕಾಗಿ ನಿಮ್ಮ ಜೀವನವನ್ನು ನಡೆಸುವುದು ಅಸಾಧ್ಯ.

–ಸುಧಾ ಮೂರ್ತಿ

ಬಿಲ್ಕಿಸ್ ಅತ್ಯಾಚಾರಿಗಳ ಬಿಡುಗಡೆ ಮಾನವೀಯ ನೀತಿಗೆ ವಿಕೃತ ರೂಪ

ಗುಜರಾತ್‌ನಲ್ಲಿ 2002ರಲ್ಲಿ ನಡೆದ ಬಿಲ್ಕಿಸ್ ಬಾನು ಮೇಲಿನ ಅತ್ಯಾಚಾರ ಮತ್ತು ಅವರ ಕುಟುಂಬದ ಏಳು ಮಂದಿಯ ಹತ್ಯೆ ಪ್ರಕರಣದ 11 ಅಪರಾಧಿಗಳನ್ನು ಬಿಡುಗಡೆ ಮಾಡಿರುವುದು ಆಘಾತಕರ. ಇದು ಕಾನೂನು ಸುವ್ಯವಸ್ಥೆ, ನ್ಯಾಯದಾನ ಮತ್ತು ಗುಜರಾತ್ ಸರ್ಕಾರವು ನೈತಿಕತೆಯ ಕುರಿತು ಹೊಂದಿರುವ ನಿಲುವು ಏನು ಎಂಬುದರ ಬಗ್ಗೆ ಹಲವು ಪ್ರಶ್ನೆಗಳನ್ನು ಎತ್ತಿದೆ. ಮಹಿಳೆಯರ ರಕ್ಷಣೆ ಮತ್ತು ಸಶಕ್ತೀಕರಣಕ್ಕೆ ಬದ್ಧ ಎಂದು ಕೇಂದ್ರ ಸರ್ಕಾರವು ಹೇಳುತ್ತಲೇ ಇದೆ. ತೀರಾ ಇತ್ತೀಚೆಗೆ, ಅಂದರೆ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಕೂಡ ಮಹಿಳೆಯರ ರಕ್ಷಣೆಯ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಮಾತನಾಡಿದ್ದರು. ಆದರೆ, ಹೀನ ಕೃತ್ಯ ಎಸಗಿರುವ ಅಪರಾಧಿಗಳ ಬಿಡುಗಡೆಯು ಸರ್ಕಾರದ ಬದ್ಧತೆಯನ್ನು ಅನುಮಾನಿಸುವಂತೆ ಮಾಡಿದೆ. 11 ಜನ ಅಪರಾಧಿಗಳನ್ನು ಬಿಡುಗಡೆ ಮಾಡುವ ನಿರ್ಧಾರವನ್ನು ಗುಜರಾತ್ ಸರ್ಕಾರವು ತನ್ನ ಶಿಕ್ಷೆ ಕಡಿತ ನೀತಿಯ ಅಡಿಯಲ್ಲಿ ತೆಗೆದುಕೊಂಡಿದೆ. ಇದು ತಪ್ಪು ನಿರ್ಧಾರ; ಅಷ್ಟೇ ಅಲ್ಲ, ಕೈದಿಗಳ ಶಿಕ್ಷೆ ಕಡಿತಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರವು ಹೊರಡಿಸಿದ್ದ ಮಾರ್ಗಸೂಚಿಯ ಉಲ್ಲಂಘನೆ. ಈ ಮಾರ್ಗಸೂಚಿಯ ಪ್ರಕಾರ, ಅತ್ಯಾಚಾರ, ಮಾನವ ಕಳ್ಳಸಾಗಣೆಯಂತಹ ಹೀನ ಕೃತ್ಯಗಳನ್ನು ಎಸಗಿದವರನ್ನು ಶಿಕ್ಷೆ ಕಡಿತಕ್ಕೆ ಪರಿಗಣಿಸಬಾರದು.



ಅಪರಾಧಿಗಳ ಶಿಕ್ಷೆ ಕಡಿತದ ನಿರ್ಧಾರವನ್ನು ಸರ್ಕಾರಗಳು ವಿವೇಕ ಮತ್ತು ವಿವೇಚನೆಯಿಂದ ಕೈಗೊಳ್ಳಬೇಕೇ ವಿನಾ ಸ್ವೇಚ್ಛೆಯಿಂದ ಅಲ್ಲ

ಗರ್ಭಿಣಿಯಾಗಿದ್ದ ಬಿಲ್ಕಿಸ್ ಬಾನು ಮತ್ತು ಇತರ ಮೂವರ ಮೇಲೆ 2002ರ ಮಾರ್ಚ್ 3ರಂದು ಅತ್ಯಾಚಾರ ಎಸಗಿ, ಬಾನು ಅವರ ಮೂರು ವರ್ಷದ ಮಗು ಸೇರಿ ಏಳು ಮಂದಿಯನ್ನು ಹತ್ಯೆ ಮಾಡಲಾಗಿತ್ತು. ಈ ಪ್ರಕರಣದ ನ್ಯಾಯಯುತ ವಿಚಾರಣೆ ನಡೆಯಬೇಕು ಎಂಬ ಕಾರಣಕ್ಕೆ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮುಂಬೈಗೆ ವರ್ಗಾಯಿಸಿತ್ತು. ಮುಂಬೈನ ನ್ಯಾಯಾಲಯವು 11 ಮಂದಿ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಉನ್ನತ ನ್ಯಾಯಾಲಯಗಳು ಈ ಶಿಕ್ಷೆಯನ್ನು ದೃಢಪಡಿಸಿದ್ದವು. ಈಗ, ಶಿಕ್ಷೆ ಕಡಿತದ ನ್ಯಾಯಸಮ್ಮತತೆಯನ್ನು ವಿವಿಧ ನೆಲೆಗಳಲ್ಲಿ ಪ್ರಶ್ನಿಸಲಾಗಿದೆ. ಅಪರಾಧಿಗಳಲ್ಲಿ ಒಬ್ಬ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅರ್ಜಿಯ ಆಧಾರದಲ್ಲಿ ರಾಜ್ಯ ಸರ್ಕಾರವು ನೇಮಿಸಿದ ಸಮಿತಿಯ ಶಿಫಾರಸಿನಂತೆ ಅಪರಾಧಿಗಳ ಬಿಡುಗಡೆ ಮಾಡಲಾಗಿದೆ. ಪ್ರಕರಣದ ತನಿಖೆಯನ್ನು ಸಿಬಿಐ ನಡೆಸಿತ್ತು. ಹಾಗಾಗಿ, ಶಿಕ್ಷೆ ಕಡಿತ ಮಾಡುವ ಅಧಿಕಾರ ಗುಜರಾತ್ ಸರ್ಕಾರಕ್ಕೆ ಇದೆಯೇ ಎಂಬ ಪ್ರಶ್ನೆ ಇದೆ. ಇಂತಹ ಪ್ರಕರಣಗಳಲ್ಲಿ ಕೇಂದ್ರ ಸರ್ಕಾರದ ಸಹಮತ ಅಗತ್ಯ. ಅಪರಾಧಿಗಳ ಬಿಡುಗಡೆಯ ವಿಚಾರದಲ್ಲಿ ಕೇಂದ್ರದ ಜತೆ ಸಮಾಲೋಚನೆ ನಡೆಸಲಾಗಿದೆಯೇ ಎಂಬುದು ತಿಳಿದುಬಂದಿಲ್ಲ.

ಶಿಕ್ಷೆ ಕಡಿತದ ವಿಚಾರದಲ್ಲಿ ಕಾನೂನಿನ ಆಚೆಗಿನ ಅಂಶಗಳೂ ಇವೆ. ಈಗ ಬಿಡುಗಡೆ ಆಗಿರುವ 11 ಅಪರಾಧಿಗಳು ಅತ್ಯಾಚಾರ ಮತ್ತು ಹತ್ಯೆಯಂತಹ ಘೋರ ಕೃತ್ಯ ಎಸಗಿದ್ದಾರೆ; ಇದಕ್ಕೆ ಅವರಲ್ಲಿ ಇದ್ದ ಕೋಮು ಪೂರ್ವಗ್ರಹ ಮತ್ತು ದ್ವೇಷ ಕಾರಣ. ಬಿಲ್ಕಿಸ್ ಬಾನು ಅವರು ನ್ಯಾಯಕ್ಕಾಗಿ ಸುದೀರ್ಘ ಹೋರಾಟ ನಡೆಸಿದ್ದರು. ಅಪರಾಧಿಗಳ ಶಿಕ್ಷೆ ಕಡಿತವು ಬೇರೆಯದೇ ಆದ ಸಂದೇಶವನ್ನು ನೀಡುತ್ತದೆ– ಸರ್ಕಾರದ ಸಹಾನುಭೂತಿಯು ಹಿಂದೂ ಅಪರಾಧಿಗಳ ಮೇಲೆ ಇದೆಯೇ ವಿನಾ ಮುಸ್ಲಿಂ ಸಂತ್ರಸ್ತೆಯ ಮೇಲೆ ಇಲ್ಲ ಎಂಬುದನ್ನು ಇದು ಸೂಚಿಸುತ್ತದೆ. ಗಲಭೆಯ ಕುರಿತು ಗುಜರಾತ್ ಸರ್ಕಾರ ಹೊಂದಿದ್ದ ನಿಲುವಿಗೆ ಅನುಗುಣವಾಗಿಯೇ ಈಗಿನ ಈ ನಿರ್ಧಾರವೂ ಇದೆ. ಇದು ರಾಜಕೀಯ ಮತ್ತು ಕೋಮು ಸಂದೇಶವೊಂದನ್ನು ನೀಡುತ್ತದೆ. ಶಿಕ್ಷೆ ಕಡಿತಕ್ಕೆ ಇನ್ನೂ ಹೆಚ್ಚು ಅರ್ಹರಾಗಿರುವ ಹಲವರ ಅರ್ಜಿಗಳನ್ನು ತಳ್ಳಿಹಾಕಲಾಗಿದೆ. ಅವರು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು ಎಂಬ ಕಾರಣಕ್ಕೆ ಹೀಗೆ ಮಾಡಲಾಗಿದೆ. ಜೈಲಿನಿಂದ ಹೊರಗೆ ಬಂದ ಅಪರಾಧಿಗಳಿಗೆ ಸಿಹಿ ತಿನ್ನಿಸಿ ಸ್ವಾಗತಿಸಲಾಗಿದೆ. ವಿಶ್ವ ಹಿಂದೂ ಪರಿಷತ್ ಕಚೇರಿಯಲ್ಲಿ ಅವರಿಗೆ ಸನ್ಮಾನ ಮಾಡಲಾಗಿದೆ. 'ಹಿಂದೂ ರಾಷ್ಟ್ರ'ದ ಕಾರ್ಯ ನಿರ್ವಹಣೆ ಹೀಗೆಯೇ ಎಂಬ ಪ್ರಶ್ನೆಗೂ ಇದು ಆಸ್ಪದ ಕೊಟ್ಟಿದೆ. ಶಿಕ್ಷೆ ಕಡಿತದ ನಿರ್ಧಾರವನ್ನು ಸರ್ಕಾರಗಳು ವಿವೇಕ ಮತ್ತು ವಿವೇಚನೆಯಿಂದ ಕೈಗೊಳ್ಳಬೇಕೇ ವಿನಾ ಸ್ವೇಚ್ಛೆಯಿಂದ ಅಲ್ಲ. ಭೀತಿಗೆ ಒಳಗಾಗಿರುವ ಬಿಲ್ಕಿಸ್ ಬಾನು ಅವರಿಗೆ ನ್ಯಾಯ ದೊರೆಯುವಂತೆ ಸುಪ್ರೀಂ ಕೋರ್ಟ್ ನೋಡಿಕೊಳ್ಳಬೇಕು. ಶಿಕ್ಷೆ ಕಡಿತ ಎಂಬ ಮಾನವೀಯ ನೀತಿಯನ್ನು ವಿಕೃತಗೊಳಿಸುವುದಕ್ಕೆ ಅವಕಾಶ ಕೊಡಬಾರದು.

ದಿನದ ಟ್ವೀಟ್



ಆಂತರಿಕ ಚುನಾವಣೆ ಯಾಕಿಲ್ಲ?

ಜನತಾ ಪಕ್ಷದ ಆರಂಭಿಕ ದಿನಗಳಲ್ಲಿ ಮತ್ತು ಆನಂತರ ಬಿಜೆಪಿಯಲ್ಲಿ ಪದಾಧಿಕಾರಿಗಳ ಹುದ್ದೆಗಳನ್ನು ತುಂಬಲು ಚುನಾವಣೆಗಳನ್ನು ನಡೆಸಲಾಗುತ್ತಿತ್ತು. ಪಕ್ಷದ ಸಂವಿಧಾನವು ಹಾಗೆ ಮಾಡುವಂತೆ ಹೇಳುತ್ತದೆ. ಇಂದು ಬಿಜೆಪಿಯಲ್ಲಿ ಅಂತಹ ಚುನಾವಣೆಗಳೇ ನಡೆಯುವುದಿಲ್ಲ. ಪ್ರತಿಯೊಂದು ಸ್ಥಾನಕ್ಕೂ ಮೋದಿಯವರ ಅನುಮೋದನೆಯೊಂದಿಗೆ ಸದಸ್ಯರ ನಾಮನಿರ್ದೇಶನ ಆಗುತ್ತದೆ.

ಸುಬ್ರಮಣಿಯನ್ ಸ್ವಾಮಿ, ಬಿಜೆಪಿ ಮುಖಂಡ

ಕಿಡಿನುಡಿ



ಯಾವಾಗಲೂ ಸರಿಯಾದ ಪದ ಬಳಸಲು ಮರೆಯದಿರಿ. ನೀವು ಉಳ್ಳವರಿಗೆ ಕೊಟ್ಟಾಗ ಅದು 'ಉತ್ತೇಜಕ' ಎನಿಸಿಕೊಳ್ಳುತ್ತದೆ. ಆದರೆ ಬಡವರಿಗೆ ನೀಡಿದಾಗ ಅದು 'ಪುಕ್ಕಟೆ' ಆಗಿರುತ್ತದೆ.

ಪ್ರೊಸೆನ್‌ಜಿತ್ ದತ್ತಾ, ಬರಹಗಾರ

25 ವರ್ಷಗಳ ಹಿಂದೆ

ಮಂಗಳವಾರ, 19-8-1997

• ಶರಣಾಗಲು ನರಹಂತಕ ವೀರಪ್ಪನ್ ಒಪ್ಪಿಗೆ

ಚೆನ್ನೈ, ಆಗಸ್ಟ್ 18 (ಪಿಟಿಐ)– ಕೊನೆಗೂ ಶರಣಾಗಲು ಒಪ್ಪಿಕೊಂಡಿರುವ ದಂತಚೋರ, ನರಹಂತಕ ಹಾಗೂ ಕಾಡುಗಳ್ಳ ವೀರಪ್ಪನ್ ತನ್ನ ವಶದಲ್ಲಿ ಒತ್ತೆಯಾಳುಗಳಾಗಿ ಇಟ್ಟುಕೊಂಡಿರುವ ಎಂಟು ಮಂದಿ ಅರಣ್ಯ ಸಿಬ್ಬಂದಿಯನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದ್ದಾನೆ.

ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರಗಳು ಜಂಟಿಯಾಗಿ ಆಗಸ್ಟ್ 9ರಂದು, ತನ್ನ ಬೇಡಿಕೆಗಳ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯ ಹಾಗೂ ಸಲಹೆಯನ್ನು ವೀರಪ್ಪನ್ ಒಪ್ಪಿಕೊಂಡಿದ್ದಾನೆ. ಜುಲೈ 12ರಿಂದ ತನ್ನ ವಶದಲ್ಲಿರುವ ಕರ್ನಾಟಕದ ಅರಣ್ಯ ಸಿಬ್ಬಂದಿಯನ್ನು ಬಿಡುಗಡೆ ಮಾಡಲು ಸಮ್ಮತಿಸಿದ್ದಾನೆ ಎಂದು ತಮಿಳುನಾಡು ಸರ್ಕಾರದ ಪತ್ರಿಕಾ ಪ್ರಕಟಣೆ ತಿಳಿಸಿದೆ.

ವೀರಪ್ಪನ್‌ನಿಂದ ಶರಣಾಗತಿ ಸಂದೇಶದ ಎರಡು ಧ್ವನಿಮುದ್ರಿತ ಕ್ಯಾಸೆಟ್‌ಗಳು ತಮಿಳು ಪಾಕ್ಷಿಕ 'ನಕ್ಕೀರನ್' ಕಚೇರಿಗೆ ಬಂದಿವೆ. ನಕ್ಕೀರನ್ ಪಾಕ್ಷಿಕವು ವೀರಪ್ಪನ್ ಜೊತೆ ಸಂಪರ್ಕಿಸುವ ಏಕೈಕ ವ್ಯವಸ್ಥೆಯಾಗಿದೆ.

• ರಾಣಿ ಭೇಟಿ ವಿವಾದ: ಪ್ರಧಾನಿಯಿಂದ ಬ್ರಿಟನ್ ಸ್ಪಷ್ಟೀಕರಣ ಕೋರಿಕೆ

ಲಂಡನ್, ಆಗಸ್ಟ್ 18 (ಪಿಟಿಐ)– 'ತಮ್ಮ ಭಾರತ ಭೇಟಿ ಸಂದರ್ಭದಲ್ಲಿ ಅಮೃತಸರಕ್ಕೆ ಹೋಗಬಾರದು ಎಂದು ಬ್ರಿಟನ್ ರಾಣಿಗೆ ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಸಲಹೆ ನೀಡಿದ್ದಾರೆ' ಎಂಬ ವರದಿಗಳ ಬಗ್ಗೆ ತಕ್ಷಣವೇ ಸ್ಪಷ್ಟೀಕರಣ ನೀಡಬೇಕು ಎಂದು ಗುಜ್ರಾಲ್ ಅವರನ್ನು ಬ್ರಿಟನ್ ಕೋರಿದೆ.

'ರಾಣಿಯವರ ಭಾರತ ಪ್ರವಾಸದ ಬಗ್ಗೆ ಇನ್ನೂ ಅಂತಿಮ ತೀರ್ಮಾನ ಆಗಿಯೇ ಇಲ್ಲ' ಎಂದು ವಕ್ತಾರರೊಬ್ಬರು ತಿಳಿಸಿದ್ದಾರೆ.

ಅಕ್ಟೋಬರ್ 12ರಿಂದ ಆರಂಭ ವಾಗಬೇಕಿರುವ ಆರು ದಿನಗಳ ಭಾರತ ಪ್ರವಾಸದ ಸಮಯದಲ್ಲಿ ಅಮೃತಸರಕ್ಕೆ ಭೇಟಿ ನೀಡುವ ವಿಚಾರ ಕೈಬಿಡಲು ಗುಜ್ರಾಲ್ ಅವರು ಮಾಡಿರುವರೆನ್ನಲಾದ ಸಲಹೆ ಬಗ್ಗೆ ಭಾರತದ ಅಧಿಕಾರಿಗಳಿಂದ ತುರ್ತು ಸ್ಪಷ್ಟೀಕರಣ ಕೇಳಲಾಗಿದೆ ಎಂದರು.

50 ವರ್ಷಗಳ ಹಿಂದೆ

ಶನಿವಾರ, 19-8-1972

• ಪಂಚಾಯಿತಿಗೊಂದು ನ್ಯಾಯಬೆಲೆ ಅಂಗಡಿ

ಬೆಂಗಳೂರು, ಆಗಸ್ಟ್ 18– ಪಂಚಾಯಿತಿಗೊಂದು ನ್ಯಾಯಬೆಲೆ ಅಂಗಡಿ; ಗ್ರಾಮದಲ್ಲಿ ಕನಿಷ್ಠ 20 ಕ್ವಿಂಟಲ್ ಧಾನ್ಯ ದಾಸ್ತಾನು; ತಾಲ್ಲೂಕು ಕೇಂದ್ರಗಳಲ್ಲಿ ಕನಿಷ್ಠ 200 ಕ್ವಿಂಟಲ್ ಧಾನ್ಯ ಶೇಖರಣೆ– ಇವು ಅಭಾವ ಪೀಡಿತ ಪ್ರದೇಶಗಳ ಆಹಾರ ಅಭಾವ ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು.

ಈ ಉದ್ದೇಶಕ್ಕೆ ಅನುಗುಣವಾಗಿ ಮೂರು ತಿಂಗಳುಗಳ ಅವಧಿಯಲ್ಲಿ ಹುಬ್ಬಳ್ಳಿ, ರಾಯಚೂರು, ಗುಲ್ಬರ್ಗ, ಬಳ್ಳಾರಿ ಹಾಗೂ ಬೆಂಗಳೂರುಗಳಲ್ಲಿ ಧಾನ್ಯ ದಾಸ್ತಾನಿಡಲು, ಆಹಾರ ಕಾರ್ಪೊರೇಷನ್‌ನಿಂದ ಒಂದು ಲಕ್ಷ ಟನ್‌ಗಳಷ್ಟು ಗೋಧಿ ಕೇಳಲಾಗಿದೆ ಎಂದು ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

• ರಾಜ್ಯದಲ್ಲಿ ಅಭಾವ ಸ್ಥಿತಿ ವಿಷಮ: ಅರಸು

ಬೆಂಗಳೂರು, ಆಗಸ್ಟ್ 18– ಕಳೆದ ಹದಿನೈದು ದಿನಗಳಿಂದೀಚೆಗೆ ರಾಜ್ಯದ ಬಹುತೇಕ ಪ್ರದೇಶಗಳಲ್ಲಿ ಅಭಾವ ಪರಿಸ್ಥಿತಿ ವಿಷಮಿಸಿದೆ ಎಂದು ವಿಧಾನಸಭೆಗೆ ಇಂದು ತಿಳಿಸಿದ ಮುಖ್ಯಮಂತ್ರಿ ದೇವರಾಜ ಅರಸು ಅವರು, ಈ ಹೊಸ ಬೆಳವಣಿಗೆಯ ಅಗತ್ಯಕ್ಕೆ ಅನುಗುಣವಾಗಿ ಪರಿಹಾರ ಯೋಜನೆಗಳಿಗಾಗಿ ₹16.5 ಕೋಟಿಗಳ ಪರಿಷ್ಕೃತ ಬೇಡಿಕೆಯನ್ನು ಕೇಂದ್ರದ ಮುಂದಿಡಲಾಗಿದೆ ಎಂದು ಪ್ರಕಟಿಸಿದರು.

ಹೆಣ್ಣು ಕಟ್ಟಿದ ಹಾದಿಯೇಕೆ ಬಹುಜನರ ಕಣ್ಣು ತೆರೆಸುತ್ತಿಲ್ಲ? ಹೆಣ್ಣು ಕೂಡಾ ಇದನ್ನು ಮರೆಯುತ್ತಿರುವಳೇ?

ಮಡಿಲಿನ ಮಮತೆಯ ಅನುದಿನದ ಸ್ವಾತಂತ್ರ್ಯ



ವಿಶ್ಲೇಷಣೆ

ಸಬಿತಾ ಬನ್ನಾಡಿ

ಸ್ವಾತಂತ್ರ್ಯ ಎನ್ನುವುದು ಒಂದು ಕಲ್ಪನೆಯೋ ವಾಸ್ತವವೋ ಎಂಬುದೇ ಒಂದು ಸೋಜಿಗದ ಸಂಗತಿ. ಭಾರತವೆಂದರೆ ಅದರ ಗಡಿಗಳು ಮಾತ್ರವಲ್ಲದೆ ಅಲ್ಲಿ ವಾಸಿಸುವ ಜನರೂ ಆಗಿರುತ್ತಾರಾದ್ದರಿಂದ ಅಲ್ಲಿನ ಜನರ ಅನುಭವಗಳೇನು? ಸ್ವಾತಂತ್ರ್ಯವು ವಾಸ್ತವಿಕ ಅನುಭವಗಳಾಗುವಲ್ಲಿ ಹೆಂಗಸರು ಜಗತ್ತಿಗೆ ತೋರಿದ ದಾರಿ ಯಾವುದು? ಅದನ್ನು ಸ್ವತಃ ಈ ಕಾಲದ ಹೆಂಗಸರು ಕಂಡುಕೊಳ್ಳಲು ಸಾಧ್ಯವಾಗಿದೆಯೇ? ಹೆಂಗಸರು ಮತ್ತು ಗಂಡಸರು ಇದನ್ನು ಸ್ವೀಕರಿಸಲು ಸಾಧ್ಯವಿಲ್ಲವೇ? ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮದಲ್ಲಿ ಮುಳುಗೆದ್ದ ಈ ಸಂದರ್ಭದಲ್ಲಿ ಈ ಬಗ್ಗೆ ನಾವು ಚಿಂತಿಸಬೇಕಿರುವುದು ಇಂದಿನ ತುರ್ತು ಕೂಡಾ ಹೌದು.

ತೋಳ್ಬಲದ ಆಡಳಿತದ ಮಾದರಿಗೆ ಭಿನ್ನವಾಗಿ ಹೆಣ್ಣು ರೂಪಿಸಿಕೊಟ್ಟ, ಹೆಣ್ಣು ಆಚರಿಸಿದ, ಇಂದಿಗೂ ಆಚರಿಸುತ್ತಿರುವ, ಆದರೆ ಮುನ್ನೆಲೆಗೇ ಬರದ, ಮೌಲ್ಯವಾಗಿ ರೂಪುಗೊಳ್ಳದ, ಗಂಡು ಹೆಣ್ಣುಗಳೆಲ್ಲರೂ ಅಳವಡಿಸಿಕೊಳ್ಳಬೇಕಾದ ಎಲ್ಲರ ಬದುಕಿನ ಕ್ರಮವೊಂದನ್ನು ಅಧಿಕೃತಗೊಳಿಸುವುದರ ಬಗೆಗೊಂದು ಖಚಿತತೆಯನ್ನು ಹೆಂಗಸರೂ ಗಂಡಸರೂ ಬೆಳೆಸಿಕೊಳ್ಳಬೇಕಿದೆ. ಇದು ಮಾನವ ಬದುಕಿಗೆ ಹೆಣ್ಣು ತೋರುವ ದಾರಿ ಮತ್ತು ಜಗತ್ತು ಸ್ವೀಕರಿಸಬೇಕಾದ ದಾರಿಯೇ ವಿನಾ ಹೆಣ್ಣಿನ ದಾರಿ ಮಾತ್ರವೆಂಬ ಸೀಮಿತತೆಯನ್ನು ಆರೋಪಿಸಿ ಅಪಮೌಲ್ಯಗೊಳಿಸುವುದನ್ನು ತಡೆಯಬೇಕಿದೆ.

ಇತಿಹಾಸದಲ್ಲಿ ಈ ದಾರಿಯನ್ನು ಅತ್ಯಂತ ಯಶಸ್ವಿಯಾಗಿ ಅಳವಡಿಸಿಕೊಂಡವರು ಗಾಂಧೀಜಿ. ಭಾರತದಾದ್ಯಂತದ ಪ್ರಾಂತೀಯ ರಾಜರುಗಳನ್ನು ಆಡಳಿತದಿಂದ ಕೆಳಗಿಳಿಸಿ, ತಮ್ಮ ಆಣತಿಯಂತೆ ಆಳುವವರನ್ನು ಕೂರಿಸಿ, ಸಾಮ, ದಾನ, ಭೇದ, ದಂಡಗಳಿಂದ ತಮ್ಮಂತೆ ಆಗಿಸಿಕೊಂಡು ಆನೆಯಂತೆ ಬಲಿಷ್ಠರಾಗಿದ್ದ ಬ್ರಿಟಿಷರ ವಿರುದ್ಧ ಇರುವೆಯಂತೆ ಹೋರಾಟವನ್ನು ಯೋಜಿಸಿದ, ದೈಹಿಕವಾಗಿ ಅತಿ ದುರ್ಬಲರಾಗಿದ್ದ ಗಾಂಧೀಜಿ, ಆರಂಭದಲ್ಲಿ ಎಲ್ಲ ಗಂಡಸರಂತೆ ಹೆಂಗಸರ ಬಗೆಗೆ ಸಾಂಪ್ರದಾಯಿಕವಾಗಿದ್ದ ತಮ್ಮ ಚಿಂತನೆಗಳನ್ನು ಕ್ರಮೇಣ ಬದಲಿಸಿಕೊಂಡರು ಹಾಗೂ ಪೊರೆಯುವ ಹೆಣ್ಣುನೋಟಗಳನ್ನು ಸ್ವಾತಂತ್ರ್ಯ ಹೋರಾಟದ ತಂತ್ರಗಾರಿಕೆಯಾಗಿ ಚಲಾಯಿಸಿದರು.

ಅಹಿಂಸೆ, ಉಪವಾಸ, ನೂಲುವುದು, ಚಳವಳಿಯಲ್ಲಿ ಹೆಂಗಸರನ್ನು ಜೊತೆಗಾರರನ್ನಾಗಿಸಿಕೊಂಡಿದ್ದು, ಆಶ್ರಮಗಳಲ್ಲಿಯೂ ಹೆಂಗಸರಿಗೆ ಸಮಾನ ಪಾಲ್ಗೊಳ್ಳುವಿಕೆ ಇವೆಲ್ಲವೂ ಮಹಿಳೆಯರಿಂದ ಪಡೆದ ಮಾದರಿ. ಇದನ್ನು ಪಡೆಯಲು ಮೊದಲು, ಮನೆಯೊಳಗೆ ಅವಳು ಆಡಳಿತವನ್ನು ನಿರ್ವಹಿಸಿದ ಕ್ರಮವನ್ನು ಸ್ವತಃ ಆಚರಿಸಿ ನೋಡುವ ಗಾಂಧಿ, ಕಸ್ತೂರಬಾ ಅವರ ಎರಡು ಬಾಣಂತನಗಳ ಎಲ್ಲಾ ಕೆಲಸಗಳನ್ನು ತಾವೇ ಮಾಡುವುದಲ್ಲದೆ ಉಳಿದ ಮಕ್ಕಳ ಪಾಲನೆ, ಅಡುಗೆ, ಸ್ವಚ್ಛತೆ ಎಲ್ಲವನ್ನೂ ಮಾಡುತ್ತಾರೆ. ಇದು ಬಯಸುವ ಶ್ರಮ, ತಾಳ್ಮೆಯು ಜವಾಬ್ದಾರಿಯ ಅರಿವನ್ನು ಮೂಡಿಸುವುದರೊಂದಿಗೆ, ಗಂಡಸಿಗೆ– ಅವನ ಪ್ರತಿಷ್ಠೆಗೆ ತೊಡಕು ಎಂದು ತಪ್ಪಾಗಿ ಬೋಧಿಸಿದ ಅಹಂಕಾರದಿಂದ ಬಿಡುಗಡೆಯನ್ನೂ ನೀಡುತ್ತದೆ. ದೇಶದ ಸ್ವಾತಂತ್ರ್ಯದ ಯಶಸ್ಸಿಗೆ ಇದು ಕೊಡುಗೆಯಾದಂತೆಯೇ ಸ್ವತಂತ್ರ ಭಾರತದ ರಾಜಕೀಯ, ಸಾಮಾಜಿಕ, ಧಾರ್ಮಿಕ ಸಂಸ್ಥೆಗಳ ನಿರ್ಮಾಣ ಮತ್ತು ಬೆಳವಣಿಗೆಗಳಲ್ಲಿ ಹೆಣ್ಣಿನ ಕಣ್ಣೋಟ ಮತ್ತು ಸಾಧ್ಯತೆಗಳು ಅಂತರ್ಗತವಾಗಬೇಕಿತ್ತು. ಅಂಬೇಡ್ಕರ್ ನೇತೃತ್ವದ, 14 ಜನ ಹೆಂಗಸರೂ ಸದಸ್ಯರಾಗಿದ್ದ ಸಮಿತಿ ರೂಪಿಸಿದ ಸಂವಿಧಾನದಲ್ಲಿ ಇದರ ಸಾಧ್ಯತೆಯ ಹೆಜ್ಜೆಗಳಿದ್ದವು. ಗಾಂಧಿಯದು ಮಾನಸಿಕ ತಯಾರಿಯ ಮಧ್ಯಮವರ್ಗದ ದಾರಿಯಾಗಿತ್ತು. ಆದರೆ ಅಂಬೇಡ್ಕರ್ ಅವರದ್ದು ಸಂಪೂರ್ಣ ಪ್ರಾಯೋಗಿಕ ದಾರಿ. ಹೆಂಗಸರು ಒಳಹೊರಗೆ ದುಡಿಯುವುದು ಅತ್ಯಂತ ಸಹಜ ಸಂಗತಿಯಾಗಿರುವ ದಲಿತ ಅನುಭವದಿಂದ ಬಂದ ಅಂಬೇಡ್ಕರ್, ಮಹಿಳೆಯರಿಗೆ ಅವಶ್ಯಕವಾಗಿರುವ ಆರ್ಥಿಕ ಸ್ವಾವಲಂಬನೆಯ ಮೂಲಕ ಯೋಚನೆ ಮಾಡುತ್ತಾ ದೃಢ ಹೆಜ್ಜೆ ಇಟ್ಟದ್ದು ಸಮಾಜದ ಬೇರು ಮಟ್ಟದಲ್ಲಿ ಬದಲಾವಣೆ ಮಾಡಬೇಕಿತ್ತು.

ಬಹಳ ಅಚ್ಚರಿಯಾಗುತ್ತದೆ. 1910ರ ಹೊತ್ತಿಗೇ ಸರಳಾದೇವಿ ಚೌಧುರಾಣಿ ನೇತೃತ್ವದಲ್ಲಿ ರಾಷ್ಟ್ರೀಯ ಮಹಿಳಾ ಸಂಘಟನೆ ಆರಂಭವಾಗುತ್ತದೆ. ನಂತರ ನಿರಂತರವಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಮಹಿಳೆಯರು ಸ್ಥಳೀಯ ಮಟ್ಟದಿಂದ ಹಿಡಿದು ರಾಷ್ಟ್ರಮಟ್ಟದ ತನಕ ಹೋರಾಟದ ಭಾಗವಾಗುತ್ತಾರೆ. ಆಂದೋಲನದಲ್ಲಿ ಅಂಬೇಡ್ಕರ್ ಸಕ್ರಿಯವಾಗಿ ಭಾಗವಹಿಸುತ್ತಾರೆ. ಮುಂದೆ ಮಹಿಳೆಯ ಆಸ್ತಿ, ವಿವಾಹ, ವಿಚ್ಛೇದನ ಮೊದಲಾದ ಹಕ್ಕುಗಳನ್ನು ಮಂಡಿಸುವ ಹಿಂದೂ ಕೋಡ್ ಬಿಲ್ ಅನ್ನು ಅಂಬೇಡ್ಕರ್ ಮಂಡಿಸಿದಾಗ ವಿರೋಧಿಸುವ ಹಿಂದೂ ಪುರುಷರ ಜೊತೆಗೆ ಕೆಲವು ಹೆಂಗಸರೂ ಸೇರಿಕೊಳ್ಳುತ್ತಾರೆ. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿದ್ದ ಲಕ್ಷಾಂತರ ಮಹಿಳೆಯರು ಈ ಕಾನೂನನ್ನು ಬೆಂಬಲಿಸಿ ಒಂದು ಅಲೆಯಂತೆ ಹೊರಹೊಮ್ಮಲು ಯಾಕೆ ಸಾಧ್ಯವಾಗಲಿಲ್ಲ? ಸ್ತ್ರೀಯರು ತಮ್ಮ ಕರ್ತೃತ್ವಶಕ್ತಿ, ಕಾರ್ಯವಿಧಾನ, ತಾವು ಮುನ್ನೆಲೆಗೆ ತರಬಯಸುವ ಸಾಮಾಜಿಕ ಮಾದರಿಯ ಬಗೆಗೆ ಯಾವ ಮುನ್ನೋಟವನ್ನಾಗಲೀ ಅರಿವನ್ನಾಗಲೀ ಬೆಳೆಸಿಕೊಳ್ಳುವೆಡೆಗೆ, ಹಂಚುವೆಡೆಗೆ ಗಮನ ನೀಡದೆ ಪೂರಕ ಪಾತ್ರಗಳಿಗಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದೇಕೆ? ಸಾಮಾಜಿಕ ಶಾಸನವಾಗಿ ಗಂಡಾಳಿಕೆಯು ಸ್ಥಾಪಿಸಿದ ಕಣ್ಕಟ್ಟುಗಳನ್ನೇ ಕಣ್ಣಿಗೊತ್ತಿಕೊಂಡು, ಪ್ರತಿನಿಧಿತ್ವವನ್ನಷ್ಟೇ ಸಮಾನತೆ ಎಂದು ಭಾವಿಸಿದ್ದರ ಪರಿಣಾಮವಾಗಿ ಈ ಚಲನೆ ಮುಂದುವರಿಯಿತು.



ಸ್ವತಂತ್ರಭಾರತದಲ್ಲಿ ಕುಟುಂಬವಿರಲಿ, ಸಾರ್ವಜನಿಕ ಕ್ಷೇತ್ರವಿರಲಿ, ದುಡಿಮೆಯ ಭಾಗವಾಗಿ ಹೆಣ್ಣನ್ನು ಪ್ರತಿನಿಧೀಕರಿಸಲಾಗಿದೆಯೇ ವಿನಾ ಸಹಭಾಗಿತ್ವದ, ಸಮಾನ ಮೌಲ್ಯದ ನೆಲೆಯಲ್ಲಿ ಕಂಡಿಲ್ಲ. ಎಲ್ಲ ಸಂಸ್ಥೆಗಳ ತಳಪಾಯವು ಪಿತೃಪರ ಚಿಂತನೆಗಳಿಂದಲೇ ನಿರ್ಮಾಣವಾಗಿರುವಾಗ ಅಧಿಕಾರ ಸ್ಥಾನದಲ್ಲಿ ಹೆಣ್ಣು ಹೋಗಿ ಕುಳಿತ ತಕ್ಷಣ ಬದಲಾವಣೆ ಸಾಧ್ಯವಿಲ್ಲ. ಮಾತ್ರವಲ್ಲ, ಹೆಣ್ಣೂ ಕೂಡ ಪಿತೃಸತ್ತೆಯನ್ನೇ ನಂಬಿ ಸ್ಥಾಪಿಸಲು ತೊಡಗುತ್ತಾಳೆ. ಇದನ್ನು ನಾವು ಸ್ಪಷ್ಟವಾಗಿ ಅರಿಯಲು ಟ್ರಾನ್ಸ್‌ಜೆಂಡರ್ ಮಹಿಳೆಯರ ಅನುಭವಗಳನ್ನು ಗಮನಿಸಬಹುದು. ಬಹುಸಂಖ್ಯಾತ ಸಮಾಜದ ಬೆಂಬಲವಿಲ್ಲದ ಅಲ್ಲಿನ ಹೆಂಗಸರು ತಮ್ಮದೇ ಒಂದು ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದಾರೆ. ಅಲ್ಲಿರುವುದು ಹೆಂಗಸರು ಮಾತ್ರ. ಅವರ ದುಡಿಮೆಗಾಗಿ ಮಾತ್ರ ಅವರು ಅದರಾಚೆಯ ಗಂಡಸರನ್ನು ಸಂಪರ್ಕಿಸುತ್ತಾರೆ. ಹೀಗಿದ್ದ ಲಿಂಗಾಂತರಿ ಸಮುದಾಯದ ಕೆಲವರು ಹಲವು ಹೋರಾಟಗಳ ನಂತರದಲ್ಲಿ ಈಗ ತಾವು ಹುಟ್ಟಿದ ಕುಟುಂಬದ ಜೊತೆ ಇಲ್ಲವೇ ತಾವೇ ಒಂದು ಬಾಡಿಗೆ ಮನೆ ಮಾಡಿಕೊಂಡು ಬದುಕತೊಡಗಿದ್ದಾರೆ. ಇವರೂ ನಮ್ಮಂತೆಯೇ ಬದುಕಹೊರಟಾಗ ಆಗುವ ಅನುಭವಗಳೇನು?

ಅಕ್ಕಯ್ ಪದ್ಮಶಾಲಿ ಅವರ ಆತ್ಮಚರಿತ್ರೆ 'ಅಕ್ಕಯ್'ಯಲ್ಲಿನ ಕೆಲವು ವಿವರಗಳು ಕುತೂಹಲಕಾರಿಯಾಗಿವೆ. ಅವರು ಟ್ರಾನ್ಸ್‌ಜೆಂಡರ್ ಪುರುಷನ ಜೊತೆಗೆ ಸಹಬಾಳ್ವೆ ಮಾಡಬಯಸುತ್ತಾರೆ. ಹೆಣ್ಣಾಗಿದ್ದು ಈಗ ಗಂಡಾಗಿರುವ ಆತನೂ ಇವರ ಮೇಲೆ ಮತ್ತದೇ ಗಂಡುದರ್ಪ, ದೈಹಿಕ ನ್ಯೂನತೆಗಳ ಅವಹೇಳನ, ಆರೋಪಗಳನ್ನೇ ಮಾಡುತ್ತಾನೆ! ಹೆಣ್ಣು ಗಂಡುಗಳೆಲ್ಲರ ಮನೋಭಿತ್ತಿಯಲ್ಲಿ ಇದು ಎಷ್ಟು ಆಳವಾಗಿ ಅವಿತಿದೆ ಎಂಬುದಕ್ಕೆ ಇದಕ್ಕಿಂತ ಉದಾಹರಣೆ ಬೇಕಿಲ್ಲವೇನೋ. ಯಾಕೆಂದರೆ, ಮುಂದೆ ಅಕ್ಕಯ್ ಗಂಡಾಗಿ ಹುಟ್ಟಿದವರನ್ನೇ ಮದುವೆಯಾದಾಗಲೂ ಮತ್ತದೇ ಕುಡಿತ, ಬಡಿತ, ದುಡ್ಡಿಗೆ ಪೀಡನೆ, ದೈಹಿಕ ಸೌಂದರ್ಯದ ಬಗೆಗೆ ಅವಹೇಳನಗಳ ಭಯಭೀತ ಅನುಭವ. ಜೊತೆಗೆ ಅವನ ಕುಟುಂಬವೂ ಸೇರಿ ಹಿಂಸೆ ದುಪ್ಪಟ್ಟಾಗುತ್ತದೆ.

ಇದಕ್ಕಿಂತ ಭಿನ್ನವಾಗಿ ಲಿಂಗಾಂತರಿ ಸಮುದಾಯ ಕಟ್ಟಿಕೊಂಡ ಪ್ರತ್ಯೇಕ ವ್ಯವಸ್ಥೆಯಲ್ಲಿ, ಅವರೆಲ್ಲಾ ಕಷ್ಟಗಳ ನಡುವೆ ಜಾತಿ, ಧರ್ಮಗಳ ಭೇದವಿಲ್ಲ. ನಾನಿ, ಅಮ್ಮ, ಮಗಳು ಎಂಬ ಬಂಧದಲ್ಲಿ ಒಬ್ಬರಿಗೊಬ್ಬರು ಆಧಾರವಾಗಿದ್ದಾರೆ. ಯಾರದೋ ಹೊಟ್ಟೆಯಲ್ಲಿ ಹುಟ್ಟಿದವರನ್ನು ತಮ್ಮವರೆಂದು ಅಪ್ಪಿಕೊಳ್ಳುತ್ತಾರೆ. 'ಒಳಗೊಳ್ಳುವಿಕೆಯ' ಸುವ್ಯವಸ್ಥೆಯನ್ನು- ಶಿಸ್ತು, ಶಿಕ್ಷೆಗಳನ್ನೊಳಗೊಂಡ ತಾಯ್ತನದ ಮಾದರಿಯಲ್ಲಿ ಕಟ್ಟಿಕೊಂಡಿದ್ದಾರೆ. ಆಸೆ, ಆಮಿಷ, ಅಧಿಕಾರಗಳ ಮೇಲಾಟದಲ್ಲಿ ಛಿದ್ರವಾಗಿರುವ ಬಹುಸಂಖ್ಯಾತರ ಲೋಕಕ್ಕಿಂತ ಇವರಿಂದ ಕಲಿಯುವುದೇ ಬಹಳವಿದೆ.

ಸ್ವಾತಂತ್ರ್ಯವು ವಾಸ್ತವದ ಅನುಭವವಾಗಬೇಕಿದ್ದಲ್ಲಿ ಹತ್ಯೆ ಮತ್ತು ಆತ್ಮಹತ್ಯೆಯ ಪಥ ಬಿಟ್ಟು, ಮಮತೆಯ ಮಡಿಲುಗಳ ನಿರ್ಮಾಣ ಮಾಡಬೇಕು. ಉರಿಯುವ ಸಾಮಾಜಿಕ ಸತ್ತೆಗಳ ಬೆಂಕಿಯನ್ನೇ ಬೆಳಕೆಂದು ನಂಬಿ ನಾನೂ ಒಂದು ಕೊಳ್ಳಿಯಾಗುವೆ ಎಂಬ ಭ್ರಮೆಗೆ ಬೀಳುತ್ತಿರುವ ಹೆಂಗಸರಿಗೂ ಈ ಹೆಂಗಸರ ದಾರಿಯನ್ನು ನೆನಪಿಸಿ ನಿರ್ಭೀತ ಸಮಾಜ ಕಟ್ಟಬೇಕು. ಇಲ್ಲದಿದ್ದಲ್ಲಿ ಸ್ವಾತಂತ್ರ್ಯ ಎಂಬುದು ಕೇವಲ ಹಾರಿಸುವ ತೋರಿಕೆಯ ಬಾವುಟವಾದೀತು ಅಷ್ಟೇ.

ಚುರುಮುರಿ



ನಿದ್ದೆ- ಉದ್ಯೋಗ!

• ನಾರಾಯಣ ರಾಯಚೂರ್

'ರೀ… ರೀ… ಬೆಡ್ ಕಾಫಿ ರೆಡಿ. ಏಳಿ, ಏಳ್ ಗಂಟೆ ಆಯಿತು'.

'ಅಯ್ಯೋ ನಿದ್ದೆ ಮಾಡೋಕೂ ಬಿಡಲ್ವಲ್ಲೇ? ವಿರೋಧ ಪಕ್ಷದವರು ಆಡಳಿತ ಪಕ್ಷದವರನ್ನ ಟ್ವೀಟರ್‌ಗಳಿಂದ ತಿವಿಯೋ ಹಾಗೆ ತಿವೀತಿಯಲ್ಲೇ?'

'ನೋಡ್ರಿ ಇಲ್ಲಿ, ನಿಮಗೆ ಖುಷಿ ಆಗೋ ಸುದ್ದಿ, ಇವತ್ತು ನಿಮಗಿಂತ ಮೊದ್ಲು ನಾನೇ ಪೇಪರ್ ಓದಿ ನಿಮಗೆ ಸುದ್ದಿ ಕೊಡ್ತಾಯಿದೀನಿ'.

'ಬಿಹಾರದಲ್ಲಿ ಜೋಡಿ ಜೇಡಿ ಪಕ್ಷಗಳು ಇನ್ನೊಂದಷ್ಟು ಪಕ್ಷಗಳನ್ನ ಸೇರಿಸಿಕೊಂಡು ಹೊಸ ಸರ್ಕಾರ ಮಾಡಿದ ಅವರ ಖುಷಿಗಿಂತಲೂ ಜಾಸ್ತಿ ಖುಷಿ ಅಂತೀಯಾ?!'

'ಯಾವಾಗ್ಲೂ ರಾಜಕಾರಣಾನೇ, ಬೇರೆ ಸುದ್ದಿ ನಿಮಗೆ ಹಿಡಿಸೋದೇ ಇಲ್ವಾ? ಸ್ವಾರಸ್ಯ-ಸುದ್ದಿ, ವಿನೋದ-ವಾರ್ತೆ, ಕ್ರೀಡೆ, ಕಾರ್ಟೂನು ಈ ಕಡೆನೂ ಸ್ವಲ್ಪ ಗಮನ ಇರ್‍ಲಿ'.

'ಕಾಮನ್‌ವೆಲ್ತ್ 22ರಲ್ಲಿ ನಮಗೆ ಬಂದಿರೊ 22 ಚಿನ್ನದ ಪದಕಗಳ ವಿಚಾರ ತಾನೇ ಮುದ್ದಿನ ಸುವರ್ಣ ಹೇಳೋಕೆ ಇಷ್ಟಪಡ್ತಿರೋದು?'

'ನಿಮ್ಮ ಹತ್ರ ಚಿನ್ನದ ಸರ ಕೊಡ್ಸಿಕೊಳ್ಳೋದು ಕನಸಿನ ಮಾತು. ನಾನು ನಿದ್ದೆ ವಿಚಾರ ಮಾತಾಡ್ತಾಯಿದೀನಿ. ಅಮೆರಿಕದಲ್ಲಿ ಒಂದು ಬೆಡ್ ಮಾರೋ ಕಂಪನಿಗೆ ಚೆನ್ನಾಗಿ ನಿದ್ದೆ ಮಾಡೋ ಕೆಲಸಗಾರರು ಬೇಕಾಗಿದಾರಂತೆ. ಕೈತುಂಬಾ ಡಾಲರ್‌ಗಟ್ಟಲೆ ಸಂಬಳ'.

'ಆಫೀಸಲ್ಲಿ ನಿದ್ದೆ ಮಾಡೋ ಅಭ್ಯಾಸ ಇರೋರಿಗೆಲ್ಲ ಇಂಥ ಅವಕಾಶಗಳು ಕರೆದು ಹಾಸಿಗೆ ಹಾಸಿ ಕೊಟ್ಟಂಗಲ್ವ?!'

'ಹೇಗಿದ್ದರೂ ನೀವೂ ಕುಂಭಕರ್ಣನ ವಂಶದವರೇ ಅಲ್ಲವೇ ನಿದ್ದೆ ವಿಚಾರದಲ್ಲಿ? ಯಾಕೆ ಈ ಕೆಲಸದ ಮೇಲೆ ಒಂದು ಕಣ್ಣು ಹಾಕಬಾರದು? ನ್ಯೂಯಾರ್ಕಿನಲ್ಲಿ ನ್ಯೂ ದೇಶ, ನ್ಯೂ ಸಿಟಿ, ನ್ಯೂ ಜಾಬು, ನ್ಯೂ ಕಾರು, ನ್ಯೂ ಬಂಗ್ಲೆ…'

'ಏನು? ನೀನೂ ಪಕ್ಷಾಂತರ… ಅಲ್ಲಲ್ಲ… ವಿಷಯಾಂತರ ಮಾಡ್ಬಿಟ್ಟೆಯಲ್ಲ?'

'ಗಂಡಾಂತರ' ಎದುರಾದಾಗ ಆಪದ್ಧರ್ಮಗಳು ಇದ್ದೇ ಇವೆಯಲ್ಲ?'

ಟ್ರಿಣ್… ಕಾಲಿಂಗ್ ಬೆಲ್ ಸದ್ದು. 'ಬೆಲ್ ಮಾಡ್ತಾನೆ ಇದೀನಿ, ಅಮ್ಮಾವ್ರು ಊರಲಿಲ್ಲಾಂತ ನಿದ್ದೆ ಮಾಡ್ಬಿಟ್ರಾ ಸಾರ್?' ಹಾಲಪ್ಪನ ಗೊಣಗಾಟ!

ಸಂಗತ

ಪುಸ್ತಕ: ಕೈ ಸುಟ್ಟೀತು!

ಓದುಗರಿಲ್ಲ, ಪುಸ್ತಕ ಕೊಳ್ಳುವವರಿಲ್ಲ ಅನ್ನುವ ಕಳವಳ ವ್ಯಕ್ತವಾಗುವ ಈ ಹೊತ್ತಿನಲ್ಲಿ, ಪುಸ್ತಕದ ದುಬಾರಿ ಬೆಲೆ ಅದಕ್ಕೆ ಕುಮ್ಮಕ್ಕು ನೀಡುವಂತೆ ಆಗಬಾರದು

• ಸದಾಶಿವ್ ಸೊರಟೂರು

ಇತ್ತೀಚೆಗೆ ಬಿಡುಗಡೆಯಾದ ಪುಸ್ತಕವೊಂದನ್ನು ಖರೀದಿಸಲು ಹೋಗಿದ್ದ ಗೆಳೆಯನೊಬ್ಬ ಅಂಗಡಿಯಿಂದಲೇ ಫೋನ್ ಮಾಡಿ, 'ಏನ್ ಗುರು, ಪ್ರತೀ ಪುಟದಲ್ಲಿ ದೊಡ್ಡ ಚಿತ್ರ, ಕೆಲವೇ ಸಾಲು ಅಷ್ಟೆ. ಪುಟ ಜಾಸ್ತಿ ಮಾಡಿ ಮುನ್ನೂರುಗಟ್ಟಲೆ ಬೆಲೆ ಇಟ್ಟರೆ ಹೇಗೆ ಕೊಳ್ಳೋದು? ದುಡ್ಡಿಗೇನು ಬೆಲೆ ಇಲ್ವಾ?' ಅಂದ.

ಓದಲು ಪುಸ್ತಕ ಎತ್ತಿಕೊಳ್ಳುವ ಓದುಗ, ಈ ಪುಸ್ತಕದಿಂದ ಬರಹಗಾರನಿಗೆ ಎಷ್ಟು ದಕ್ಕಿದೆ, ಪ್ರಕಾಶಕನ ಲಾಭ ಎಷ್ಟು, ಮಾರಾಟಗಾರನ ಬಂಡವಾಳಕ್ಕೆ ಮೋಸವಾದೀತೇ ಎಂದೆಲ್ಲ ಯೋಚಿಸುವುದಿಲ್ಲ. ಅವನು ಪುಸ್ತಕದ ವಿಷಯವನ್ನು ನೋಡುತ್ತಾನೆ, ಜೊತೆಗೆ ಅದರ ಬೆಲೆಯನ್ನು! ತುಂಬಾ ದುಬಾರಿ ಎನಿಸಿದರೆ ಚೇಳು ಕಡಿದಂತೆ ಕೈಎಳೆದುಕೊಳ್ಳುತ್ತಾನೆ.

'ಓದುಗನನ್ನು ಓದುಗ ದೊರೆ ಅಂತೀರಿ, ಓದುಗ ಪ್ರಭು ಅಂತೀರಿ. ಆದರೆ ದೊರೆ ಪುಸ್ತಕ ಕೊಳ್ಳಲಾಗದಷ್ಟು ದರ ಹೇರುವುದು ಸರಿಯೇ' ಎಂದು ಲೇಖಕರೊಬ್ಬರನ್ನು ಕೇಳಿದೆ. 'ಇಲ್ಲಿ ಯಾವ ಸಾಹಿತಿ ಬರವಣಿಗೆಯಿಂದ ಬಂದ ದುಡ್ಡಿನಲ್ಲಿ ಜೀವಿಸುತ್ತಿದ್ದಾನೆ ಹೇಳಿ?' ಎಂದು ಮರುಪ್ರಶ್ನೆ ಹಾಕಿದರು. 'ನಮಗೆ ಕೊಡುವುದು ಗೌರವ ಸಂಭಾವನೆ ಅಷ್ಟೆ, ವೇತನ ಅಲ್ಲ' ಎಂದು ಮಾರ್ಮಿಕವಾಗಿ ಹೇಳಿದರು.

ಪ್ರಕಾಶಕರನ್ನು ಕೇಳಿ ನೋಡಿದೆ. 'ಸರ್, ಲೇಖಕರಿಗೆ ಕೊಡುವ ಗೌರವಧನದಲ್ಲೂ 18 ಪರ್ಸೆಂಟ್ ಜಿಎಸ್‌ಟಿ ಇದೆ. ಅಲ್ಲದೆ ಪ್ರತ್ಯೇಕ ತೆರಿಗೆ ಬೇರೆ. ಮುದ್ರಣ ಪರಿಕರಗಳ ಮೇಲೆ ಮತ್ತಷ್ಟು ತೆರಿಗೆ ಹೇರಲಾಗಿದೆ. ಮಳಿಗೆ, ಸಾರಿಗೆ ಹೀಗೆ ಹತ್ತೆಂಟು ಖರ್ಚುಗಳಿವೆ. ನೆನಪಿರಲಿ ಸರ್, ಬಹುತೇಕ ಪ್ರಕಾಶಕರು ಪುಸ್ತಕ ಪ್ರಕಟಣೆಯನ್ನು 'ಪುಸ್ತಕ ಸಂಸ್ಕೃತಿ' ಹೆಸರಲ್ಲಿ ನೋಡುತ್ತಾರೆಯೇ ವಿನಾ 'ಪುಸ್ತಕ ಉದ್ಯಮ'ವಾಗಿ ಮಾಡಿಕೊಂಡಿಲ್ಲ. ಅದು ಇನ್ನೂ ಕನ್ನಡದ ಪಾಲಿಗೆ ಒಂದು ಪುಣ್ಯ. ಎಷ್ಟೋ ಬಾರಿ ಹಾಕಿದ ಬಂಡವಾಳವೂ ಬರದೆ ಒದ್ದಾಡುವಂತಾಗುತ್ತೆ' ಎಂದು ತಮ್ಮ ಸೋಲಿನ ಕಥೆ ಹೇಳಿದರು.

'ಎಲ್ಲ ಪ್ರಕಾಶಕರು, ವಿತರಕರು ಮತ್ತು ಪುಸ್ತಕ ವ್ಯಾಪಾರಿಗಳು ಸಿರಿವಂತರಾಗಿರುತ್ತ, ಲೇಖಕರು ಮಾತ್ರ ಬಡವರಾಗಿದ್ದಾರೆ…' ಎಂದು ಲೇಖಕ ಗಾರ್ಸಿಯ ಮಾರ್ಕ್ವೆಜ್ ಬರೆಯುತ್ತಾರೆ. ಲೇಖಕರು ಮಾತ್ರವಲ್ಲ ನಮ್ಮಲ್ಲಿ ಬಹುಪಾಲು ಓದುಗರು ಕೂಡ ಬಡವರೆ. ಓದು ಒಂದು ಅತೀ ಅಗತ್ಯವಲ್ಲದ್ದು ಎಂದು ಭಾವಿಸಿರುವ ಭಾರತದಂತಹ ದೇಶದಲ್ಲಿ ಪುಸ್ತಕದ ವ್ಯಾಪಾರ ಅತಿ ದೊಡ್ಡ ಸವಾಲು.

ಗ್ರಂಥಾಲಯದಲ್ಲಿ ಅಂತಹ ಒಳ್ಳೆ ಪುಸ್ತಕಗಳಿಲ್ಲ ಅನ್ನುವುದು ಬಹುತೇಕರ ಅನುಭವದ ಮಾತು. ಒಂದು ಒಳ್ಳೆಯ ಪುಸ್ತಕವು ಗ್ರಂಥಾಲಯದ ಕಪಾಟಿನಲ್ಲಿ ಬಂದು ಕೂರುವುದರೊಳಗೆ ಎಷ್ಟೋ ವರ್ಷಗಳು ಕಳೆದು ಅದು ಜನರ ಮನಸ್ಸಿನಿಂದ ಮಾಸಿ ಹೋಗಿರುತ್ತದೆ. ಬಜೆಟ್‌ನಲ್ಲಿ ಗ್ರಂಥಾಲಯ ಇಲಾಖೆಗೆ ಹಣ ಹಂಚಿಕೆಯಾಗುತ್ತದೆ. ಅದಕ್ಕಾಗಿ ಕಾದು ಕೂತ ಗ್ರಂಥಾ ಲಯಸ್ನೇಹಿ ಪ್ರಕಾಶಕರು, ಬರಹಗಾರರಿದ್ದಾರೆ. ಅವರ ಪುಸ್ತಕಗಳನ್ನು ಜನ ಕೊಳ್ಳುವುದಿಲ್ಲ, ಗ್ರಂಥಾಲಯ ಕೊಳ್ಳುತ್ತದೆ. ಸಾಮಾನ್ಯ ಓದುಗನಿಗೆ ಸರ್ಕಾರದ ಹಣ ಸಹಾಯಕ್ಕೆ ಬರುವುದಿಲ್ಲ.

ಈಗಿನ ಪುಸ್ತಕ ಮಾರುಕಟ್ಟೆಗೆ 'ಅಂಚೆ ವೆಚ್ಚ' ಒಂದು ಸವಾಲು. ಎಷ್ಟೋ ಬಾರಿ ಪುಸ್ತಕದ ಬೆಲೆ ಮತ್ತು ಅದರ ಅಂಚೆ ವೆಚ್ಚ ಸಮನಾಗಿರುವ ಉದಾಹರಣೆಗಳಿವೆ. ಪ್ರಕಾಶಕರು ಅದನ್ನು ಓದುಗರ ಮೇಲೆ ಹಾಕುವುದರಿಂದ ಒಂದೂವರೆ ಪಟ್ಟಿನಷ್ಟು ಬೆಲೆ ತೆತ್ತು ಪುಸ್ತಕ ಕೊಳ್ಳಲು ಓದುಗ ಮನಸ್ಸು ಮಾಡುವುದಿಲ್ಲ. ಓದು ನೇಪಥ್ಯಕ್ಕೆ ಸರಿಯುತ್ತಿರುವ ಈ ಕಾಲದಲ್ಲಿ, ಓದುಗರಿಲ್ಲ, ಕೊಳ್ಳುವವರಿಲ್ಲ ಅನ್ನುವ ಕಳವಳ ವ್ಯಕ್ತವಾಗುವ ಈ ಹೊತ್ತಿನಲ್ಲಿ ಪುಸ್ತಕದ ಬೆಲೆ ಅದಕ್ಕೆ ಮತ್ತಷ್ಟು ಕುಮ್ಮಕ್ಕು ನೀಡುವಂತಾಗಬಾರದು.

ಒಬ್ಬಿಬ್ಬ ಪ್ರಸಿದ್ಧ ಲೇಖಕರ ಪುಸ್ತಕಗಳು ಬಿಸಿ ದೋಸೆಯಂತೆ ಖಾಲಿಯಾದ ಉದಾಹರಣೆಗಳನ್ನು ಇಟ್ಟುಕೊಂಡು, ಪುಸ್ತಕ ಓದುವವರಿದ್ದಾರೆ, ಕೊಳ್ಳುವ ಅಪಾರ ಓದುವ ವರ್ಗವಿದೆ ಎಂದು ತೀರ್ಮಾನಕ್ಕೆ ಬರಬಾರದು.



ಓದು ತೊರೆದ ನಾಡು ಬೆಳೆಯುವುದಿಲ್ಲ. ಜನರ ಕೈಗೆ ಪುಸ್ತಕ ಇಟ್ಟು ಓದನ್ನು ಪ್ರೋತ್ಸಾಹಿಸಬೇಕಾದದ್ದು ಸರ್ಕಾರದ ಕರ್ತವ್ಯಗಳಲ್ಲೊಂದು. ಹೊರಲಾಗದ ತೆರಿಗೆ ಹೇರಿ ಜನ ಪುಸ್ತಕಗಳಿಂದ ದೂರ ಸರಿಯುವಂತಾಗಬಾರದು. ಗ್ರಂಥಾಲಯಕ್ಕೆ ಹರಿಯುವ ಹಣ ಓದುಗರು ಬಯಸುವ ಪುಸ್ತಕಕ್ಕೆ ಅನುಕೂಲವಾಗುವಂತೆ ಬಳಕೆಯಾಗಬೇಕೇ ವಿನಾ ಕೆಲವು ಪ್ರಕಾಶಕರಿಗೆ, ಬರಹಗಾರರಿಗಲ್ಲ.

ಅದಕ್ಕೆ ಏನಾದರೂ ಒಂದು ನ್ಯಾಯಯುತವಾದ ದಾರಿ ಕಂಡುಕೊಳ್ಳಬೇಕಿದೆ. ಒಳ್ಳೆಯ ಸಿನಿಮಾಕ್ಕೆ ಸರ್ಕಾರ ಸಬ್ಸಿಡಿ ನೀಡುವಂತೆ ಓದುಗ ಬಯಸುವ ಪುಸ್ತಕಗಳಿಗೆ ಯಾಕೆ ಸಬ್ಸಿಡಿ ನೀಡಬಾರದು? ಸರ್ಕಾರವೇ ಹೊಸ ಪುಸ್ತಕಗಳನ್ನು ಖರೀದಿಸಿ ಸರ್ಕಾರಿ ಪುಸ್ತಕ ಅಂಗಡಿಗಳನ್ನು ತೆರೆದು ಕಡಿಮೆ ಬೆಲೆಗೆ ಯಾಕೆ ಮಾರಬಾರದು?

ಪುಸ್ತಕ ಮಾರಾಟವನ್ನು ಪ್ರೋತ್ಸಾಹಿಸಲು ಅಂಚೆ ಇಲಾಖೆ ಯಾಕೆ ಪುಸ್ತಕದ ಅಂಚೆ ವೆಚ್ಚವನ್ನು ಅತೀ ಕನಿಷ್ಠ ಮಟ್ಟಕ್ಕೆ ಇಳಿಸಬಾರದು ಅಥವಾ ಪೂರ್ತಿ ತೆಗೆದು ಹಾಕಿದರೆ ಸರ್ಕಾರಕ್ಕೆ ಆಗುವ ನಷ್ಟವೇನು?

ಪುಸ್ತಕ ಓದುವ ಗೀಳಿನವರು ತುಂಬಾ ಜನರಿದ್ದಾರೆ. ಅವರ ಕೈಗೆ ಪುಸ್ತಕ ಸಿಗಬೇಕಷ್ಟೆ. ಬರಹಗಾರ, ಪ್ರಕಾಶಕ, ಸರ್ಕಾರ ಇವರ ಸಹಕಾರವಿದ್ದರೆ ಅದೇನೂ ಕಷ್ಟವಲ್ಲ. ಪುಸ್ತಕ ಓದಿದರೆ ಅದರ ಪರಿಣಾಮವನ್ನು ನಾಳೆ ನಾವು ಸಮಾಜದಲ್ಲಿ ಕಾಣಬಹುದು. ಅದೆಂದೂ ವ್ಯರ್ಥವಲ್ಲ.

ವಾಚಕರ ವಾಣಿ

ಅಭಿವೃದ್ಧಿ ಕಾರ್ಯಕ್ಕೆ ಸಿಗಲಿ ಕ್ರಿಯಾತ್ಮಕ ಚಾಲನೆ

ಬಿಬಿಎಂಪಿ ವಾರ್ಡ್ ಮೀಸಲಾತಿ ಅಂತಿಮವಾಗಿದ್ದು ಚುನಾವಣೆ ಸನ್ನಿಹಿತವಾಗಿದೆ. ಚುನಾಯಿತ ಪ್ರತಿನಿಧಿಗಳು ಕಾರ್ಯನಿರ್ವಹಿಸಲು ಅನುವು ಮಾಡಿಕೊಡುವ ಕೆಲಸ ಪಕ್ಷಾತೀತವಾಗಿ ನಡೆದು, ನಗರದ ಮೂಲಸೌಕರ್ಯ ಅಭಿವೃದ್ಧಿ, ನೈರ್ಮಲ್ಯ ಕಾಯ್ದುಕೊಳ್ಳುವಿಕೆ, ತ್ಯಾಜ್ಯ ನಿರ್ವಹಣೆಯಂತಹ ಕಾರ್ಯಗಳಿಗೆ ಕ್ರಿಯಾತ್ಮಕ ಚಾಲನೆ ಸಿಗಲಿ. ಎರಡು ವರ್ಷಗಳಿಂದ ಚುನಾಯಿತ ಪ್ರತಿನಿಧಿಗಳಿಲ್ಲದೇ ನಗರದ ಅಭಿವೃದ್ಧಿಗೆ ಹಿನ್ನಡೆ ಆಗಿದೆ. ಮುಂದಿನ ವಿಧಾನಸಭಾ ಚುನಾವಣೆಗೆ ಸೆಮಿಫೈನಲ್‌ನಂತಿರುವ ಪಾಲಿಕೆ ಚುನಾವಣೆಯನ್ನು ನಡೆಸಿ, ಜನ ತಾವು ಆರಿಸಿದ ಪ್ರತಿನಿಧಿಗಳಿಂದ ತಮ್ಮ ತಮ್ಮ ವಾರ್ಡ್‌ಗಳಲ್ಲಿ ಸೇವೆಗಳನ್ನು ಪಡೆಯುವಂತಾಗಲಿ.

ಬಿ.ಎಸ್.ಪಾಟೀಲ್, ಬೆಂಗಳೂರು

ನದಿ ಮಾಲಿನ್ಯ ತೊಳೆಯಲು...

ಗಂಗಾ ನದಿ ಶುದ್ಧೀಕರಣಕ್ಕೆ ಕೇಂದ್ರ ಸರ್ಕಾರವು ₹ 30,000 ಕೋಟಿ ಮಂಜೂರು ಮಾಡಿದೆ ಎಂದು ವರದಿಯಾಗಿದೆ. ಕೇಂದ್ರ ಜಲ ಆಯೋಗದ ವರದಿಯಂತೆ, ಗಂಗಾ ನದಿಯು ಒಳಚರಂಡಿ ವ್ಯವಸ್ಥೆಯಿಂದ ಮಲಿನವಾಗಿದೆ. ನದಿಯ ಬದಿಯಲ್ಲಿರುವ ಪಟ್ಟಣ, ಹಳ್ಳಿಗಳ 50 ಕೋಟಿ ಜನರ ಮಲ– ಮೂತ್ರ, ಕಾರ್ಖಾನೆ ತ್ಯಾಜ್ಯದಿಂದ ನೀರು ಕಲುಷಿತವಾಗಿದೆ. ಆದ್ದರಿಂದ ಗಂಗಾ ನದಿಯ ಮಾಲಿನ್ಯ ತೊಳೆಯಲು ಸಾಧ್ಯವಾಗುತ್ತಿಲ್ಲ ಎಂದು ವರದಿ ಹೇಳಿದೆ.

ಒಳಚರಂಡಿಗೆ ಪರ್ಯಾಯವಾಗಿ, ಮಹಾತ್ಮ ಗಾಂಧಿ ಅವರ ಸಲಹೆಯಂತೆ ಪ್ರತೀ ಮನೆಗೆ ಎರಡು ಇಂಗು ಗುಂಡಿಗಳ ವ್ಯವಸ್ಥೆ ಮಾಡಿ, ಮಲಮೂತ್ರವನ್ನು ಜೈವಿಕ ಅನಿಲ ಯಂತ್ರಕ್ಕೆ ಸೇರಿಸಿ ಇಂಧನ ಪಡೆದು ನಂತರ ಇಂಗುಗುಂಡಿಗೆ ಸೇರಿಸಿದರೆ ಗೊಬ್ಬರ ದೊರೆಯುತ್ತದೆ. ನದಿ ಮಾಲಿನ್ಯ ತೊಳೆಯಲು ಇದೇ ಅತ್ಯುತ್ತಮ ಮಾರ್ಗ. ಗಂಗಾ ನದಿ ಶುದ್ಧೀಕರಣದ ಯೋಜನೆಯು ತೆರಿಗೆ ಹಣ ದೋಚುವ ತಂತ್ರ ಎಂಬಂತೆ ಜನರಿಗೆ ತೋರಬಾರದು.

ಡಾ. ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಯಡಿಯೂರಪ್ಪಗೆ ಮಣೆ: ಎಚ್ಚೆತ್ತ ವರಿಷ್ಠರು

ರಾಜ್ಯ ವಿಧಾನಸಭೆ ಚುನಾವಣೆಗೆ ಇನ್ನೇನು ಕೆಲವೇ ತಿಂಗಳು ಉಳಿದಿವೆ. ಹಾಗಾಗಿ ಬಿಜೆಪಿಯ ವರಿಷ್ಠರು ಎಚ್ಚೆತ್ತುಕೊಂಡಂತಿದೆ. ಬಿ.ಎಸ್.ಯಡಿಯೂರಪ್ಪ ಅವರನ್ನು ಕಡೆಗಣಿಸಿದರೆ ಕರ್ನಾಟಕದಲ್ಲಿ ಪಕ್ಷದ ಗತಿ ಏನಾಗಬಹುದು ಎಂಬುದು ಈ ಹಿಂದೆ ಒಮ್ಮೆ ಗೊತ್ತಾಗಿದೆ. ಪುನಃ ಅಂತಹ ಪರಿಸ್ಥಿತಿ ತಂದುಕೊಳ್ಳುವುದು ಬೇಡ ಎಂದು ಈ ಸಲ ಜಾಣನಡೆ ಪ್ರದರ್ಶಿಸಿದ್ದಾರೆ. ಅದರ ಫಲವೇ ಕೇಂದ್ರ ಸಂಸದೀಯ ಮಂಡಳಿ ಹಾಗೂ ಕೇಂದ್ರ ಚುನಾವಣಾ ಸಮಿತಿಗೆ ಯಡಿಯೂರಪ್ಪ ಅವರ ಸೇರ್ಪಡೆ.

75 ವರ್ಷ ದಾಟಿದವರಿಗೆ ಪಕ್ಷದಲ್ಲಿ ಪ್ರಮುಖ ಹುದ್ದೆಗಳನ್ನು ನೀಡಬಾರದು ಎಂಬ ನಿಯಮವನ್ನು ಬಿಜೆಪಿ ಪಾಲಿಸುತ್ತಿದೆ ಎಂಬ ಮಾತಿದೆಯಾದರೂ ಅನಿವಾರ್ಯವಾದರೆ ಇಂತಹ ನಿಯಮಗಳು ಯಾವುವೂ ಲೆಕ್ಕಕ್ಕೆ ಬರುವುದಿಲ್ಲ ಎಂಬುದಕ್ಕೆ ಯಡಿಯೂರಪ್ಪ ಅವರ ಸೇರ್ಪಡೆಯೇ ಒಂದು ಸ್ಪಷ್ಟ ನಿದರ್ಶನ.

ಅರುಣ್‌ಕುಮಾರ್ ಎಸ್.ಬಿ., ತುಮಕೂರು

ನಿರುಮ್ಮಳ ನಾಯಕರ ನಡುವೆ ಬಡಿದಾಡುವವರು!

ಉಡುಪಿಯಲ್ಲಿ ಆರಂಭವಾದ ಹಿಜಾಬ್ ಮತ್ತು ಕೇಸರಿ ಶಾಲು ಸಂಘರ್ಷವು ಆನಂತರ ತಾರಕಕ್ಕೇರಿತು. ರಾಜ್ಯದ ವಿವಿಧ ಕಡೆಗೂ ಹಬ್ಬಿ ಆ ಬಳಿಕ ತಣ್ಣಗಾಯಿತು. ಇದರಲ್ಲಿ ರಾಜಕೀಯ, ಧರ್ಮ ಎಲ್ಲವೂ ಸೇರಿಕೊಂಡವು. ಆ ಸಂಘರ್ಷದ ಮುಂದಿನ ಭಾಗ ಎನ್ನುವಂತೆ ಶಿವಮೊಗ್ಗದಲ್ಲಿ ಒಬ್ಬ ಯುವಕನ ಕೊಲೆ, ಮಂಗಳೂರಿನಲ್ಲಿ ಮೂವರ ಕೊಲೆಗಳು ಆಗಿ ಪ್ರಾಣನಷ್ಟವಾಗಿದೆ. ಅಂತೆಯೇ ಸಾಗಿಬಂದು ಸ್ವಾತಂತ್ರ್ಯೋತ್ಸವ ಸಂಭ್ರಮದ ನಡುವೆಯೇ ಶಿವಮೊಗ್ಗದಲ್ಲಿ ಸಾವರ್ಕರ್ ಹಾಗೂ ಟಿಪ್ಪು ಅವರ ಫ್ಲೆಕ್ಸ್ ಅಳವಡಿಸುವ ಸಂಬಂಧ ಸಂಘರ್ಷ, ಚೂರಿ ಇರಿತ ಆಗಿದೆ.

ಇಂತಹ ಸಂಘರ್ಷಗಳು ಬೇಕೆ? ಬೇಕೆಂದೇ ಇಂತಹ ಕೆಲಸಗಳನ್ನು ಮಾಡಿಸುವ ಪುಡಿ ನಾಯಕರು ಅಥವಾ ನಾಯಕನಾಗುವ ಹಂಬಲದವರು ತಮ್ಮ ಮನೆಗಳಲ್ಲಿ ನೆಮ್ಮದಿಯಾಗಿ ಇರುತ್ತಾರೆ. ಅವರ ಆಣತಿಯಂತೆ ಬೀದಿಗಳಲ್ಲಿ ಬಡಿದಾಡುವವರು ನಷ್ಟಕ್ಕೊಳಗಾಗುತ್ತಾರೆ ಎಂಬುದು ಅಂಗೈ ಹುಣ್ಣಿನಷ್ಟೇ ನಿಚ್ಚಳ. ಕುವೆಂಪು ವಿರಚಿತ ನಾಡಗೀತೆಯಲ್ಲಿನ ಒಂದು ಸಾಲು ಕರ್ನಾಟಕವನ್ನು 'ಸರ್ವ ಜನಾಂಗದ ಶಾಂತಿಯ ತೋಟ…' ಎಂದು ಸಾರುತ್ತದೆ. ಎಲ್ಲರೂ ಶಾಂತಿಯಿಂದ ಬದುಕುವ ವಾತಾವರಣ ನಿರ್ಮಾಣವಾದರೆ ನಾಡಗೀತೆಯ ಸಾಲುಗಳಿಗೆ ಗೌರವ ನೀಡಿದಂತೆ. ಯುವಕರು ಪ್ರಚೋದನೆಗಳಿಗೆ ಒಳಗಾಗದೆ ಶಾಂತಿ ಕಾಪಾಡಲು ಕೈಜೋಡಿಸಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಸ್ಥಾನದ ಘನತೆಗೆ ತಕ್ಕಂತೆ ವರ್ತಿಸಲಿ

'ವಿಜಯಪುರದ ವಿಮಾನ ನಿಲ್ದಾಣ ಕಾಮಗಾರಿಯನ್ನು 2023ರ ಮಾರ್ಚ್ ಒಳಗೆ ಪೂರ್ಣಗೊಳಿಸಿದರೆ ಮಾಲೆ ಹಾಕಿ ಸನ್ಮಾನಿಸುತ್ತೇನೆ. ಇಲ್ಲವಾದರೆ ಬೂಟಲ್ಲಿ ಹೊಡೆಯುತ್ತೇನೆ' ಎಂದು ಎಂಜಿನಿಯರ್‌ಗೆ ಜಿಲ್ಲಾ ಉಸ್ತುವಾರಿ ಸಚಿವ ಉಮೇಶ ಕತ್ತಿ ಎಚ್ಚರಿಕೆ ನೀಡಿದ್ದಾರೆ ಎಂದು ವರದಿಯಾಗಿದೆ. ಮಾಲೆ ಹಾಕಿ ಸನ್ಮಾನಿಸುವುದೇನೋ ಸರಿ. ಆದರೆ ಕಾಮಗಾರಿ ಪೂರ್ಣಗೊಳ್ಳದಿದ್ದರೆ ಬೂಟಲ್ಲಿ ಹೊಡೆಯುವುದಾಗಿ ಹೇಳುವುದು ಎಷ್ಟು ಸಮಂಜಸ? ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳ್ಳದೇ ಇರುವುದಕ್ಕೆ ಎಂಜಿನಿಯರುಗಳು ಮಾತ್ರ ಕಾರಣರೇ?

ಕಾಮಗಾರಿಯೊಂದು ಪೂರ್ಣಗೊಳ್ಳುವುದು ಅನೇಕ ಅಂಶಗಳನ್ನು ಅವಲಂಬಿಸಿರುತ್ತದೆ. ಕಚ್ಚಾವಸ್ತುಗಳ ಲಭ್ಯತೆ, ಉಪಕರಣಗಳ ಸಕಾಲಿಕ ಪೂರೈಕೆ, ಕಾಲಕ್ಕೆ ತಕ್ಕಂತೆ ಅನುದಾನ ಬಿಡುಗಡೆ, ಹವಾಮಾನ ಸ್ಥಿತಿಗತಿ... ಈ ಎಲ್ಲ ಅಂಶಗಳನ್ನು ಆಧರಿಸಿರುತ್ತದೆ. ಸಾರ್ವಜನಿಕರ ಮೆಚ್ಚುಗೆ ಗಿಟ್ಟಿಸಲು ಹೀಗೆ ಎಂಜಿನಿಯರುಗಳನ್ನು ಹೊಣೆಗಾರರನ್ನಾಗಿ ಮಾಡಿ, ನಿಂದಿಸುವುದು ಸರಿಯಲ್ಲ. ಗುತ್ತಿಗೆದಾರರು, ಇತರ ಅಧಿಕಾರಿಗಳು ಕೂಡ ಅದಕ್ಕೆ ಅಷ್ಟೇ ಹೊಣೆ. ವಿಳಂಬಕ್ಕೆ ಕಾರಣರಾದವರ ವಿರುದ್ಧ ಸೇವಾ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳುವುದು ಬಿಟ್ಟು ಅವಾಚ್ಯ ಪದಗಳಿಂದ ನಿಂದಿಸಬಹುದೇ? ನಮ್ಮ ರಾಜಕಾರಣಿಗಳು ಇನ್ನಾದರೂ ತಾವು ಹೊಂದಿರುವ ಸ್ಥಾನದ ಘನತೆಗೆ ತಕ್ಕಂತೆ ವರ್ತಿಸಲಿ.

ಆರ್.ಜಿ. ಬ್ಯಾಕೋಡ, ವಿಜಯಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಈಶಾನ್ಯದಲ್ಲಿ ಮತ್ತೆ ಪ್ರತಿರೋಧದ ಕಿಡಿ

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ 'ಪೌರತ್ವ (ತಿದ್ದುಪಡಿ) ಕಾಯ್ದೆ–2019' (ಸಿಎಎ) ವಿರುದ್ಧ ಈಶಾನ್ಯ ಭಾರತದ ರಾಜ್ಯಗಳ ವಿದ್ಯಾರ್ಥಿಗಳು ಮತ್ತೆ ಪ್ರತಿಭಟನೆಗೆ ಇಳಿದಿದ್ದಾರೆ. ನೆರೆಯ ದೇಶಗಳ ಹಿಂದೂ, ಸಿಖ್, ಜೈನ, ಪಾರ್ಸಿ, ಕ್ರೈಸ್ತ ಮತ್ತು ಬೌದ್ಧ ಧರ್ಮೀಯರಿಗೆ ಭಾರತದ ಪೌರತ್ವ ನೀಡಲು ಈ ಕಾಯ್ದೆ ಅವಕಾಶ ಮಾಡಿಕೊಡುತ್ತದೆ. ಈ ರೀತಿ ಪೌರತ್ವ ನೀಡಿದರೆ ತಮ್ಮ ಜನಾಂಗೀಯತೆಗೆ ಧಕ್ಕೆಯಾಗುತ್ತದೆ ಎಂಬುದು ಈಶಾನ್ಯ ಭಾರತದ ನಾಗರಿಕರ ಆಕ್ಷೇಪ. 2019ರ ಡಿಸೆಂಬರ್‌ನಲ್ಲಿ ಈ ಕಾಯ್ದೆ ಬಂದಾಗ ದೇಶದಾದ್ಯಂತ, ಇದರ ವಿರುದ್ಧ ಜನರ ಆಕ್ರೋಶ ಭುಗಿಲೆದ್ದಿತ್ತು. ಕೋವಿಡ್ ಸಾಂಕ್ರಾಮಿಕದ ಕಾರಣ ಪ್ರತಿಭಟನೆ ತಣ್ಣಗಾಗಿತ್ತು.ಆದರೆ, ಈಶಾನ್ಯ ಭಾರತದಲ್ಲಿ ಈ ಕಾಯ್ದೆಯ ವಿರುದ್ಧ ಮತ್ತೆ ಪ್ರತಿಭಟನೆ ಭುಗಿಲೆದ್ದಿದೆ. ಅಸ್ಸಾಂ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮೇಘಾಲಯ, ಮಣಿಪುರ, ತ್ರಿಪುರಾ ಮತ್ತು ಮಿಜೋರಾಂನ ಹಲವೆಡೆ ಜನರು ಈ ಕಾಯ್ದೆಯ ವಿರುದ್ಧ ಅಹೋರಾತ್ರಿ ಧರಣಿ ಮತ್ತು ಪ್ರತಿಭಟನೆ ಆರಂಭಿಸಿದ್ದಾರೆ. ಈ ರಾಜ್ಯಗಳ ಹಲವು ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆಯ ನೇತೃತ್ವ ವಹಿಸಿವೆ. ಪ್ರತಿಭಟನಕಾರರು ಹಲವು ಬೇಡಿಕೆಗಳನ್ನು ಸರ್ಕಾರದ ಮುಂದಿರಿಸಿದ್ದಾರೆ. ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ ರದ್ದುಪಡಿಸಬೇಕು ಎಂದು ಆಗ್ರಹಿಸಿಯೂ ಪ್ರತಿಭಟನೆ ನಡೆಯುತ್ತಿದೆ.



ಈಶಾನ್ಯ ಭಾರತದಲ್ಲಿ ಸಿಎಎ ವಿರುದ್ಧ ಈಗ ನಡೆಯುತ್ತಿರುವ ಪ್ರತಿಭಟನೆಯ ಮುಂದಾಳತ್ವವನ್ನು ವಿದ್ಯಾರ್ಥಿ ಸಂಘಟನೆಗಳೇ ವಹಿಸಿವೆ. ಅಖಿಲ ಅಸ್ಸಾಂ ವಿದ್ಯಾರ್ಥಿ ಒಕ್ಕೂಟ, ಎನ್‌ಇಎಸ್‌ಒಗಳು ಈ ಪ್ರತಿಭಟನೆಯನ್ನು ಸಂಘಟಿಸುತ್ತಿವೆ

'ಸಿಎಎ ರದ್ದುಪಡಿಸಿ'

ಪ್ರಜಾವಾಣಿ ವಾರ್ತೆ

ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಸಂಪೂರ್ಣವಾಗಿ ರದ್ದುಪಡಿಸಿ ಎಂಬುದು ಪ್ರತಿಭಟನಕಾರರ ಪ್ರಮುಖ ಆಗ್ರಹ. ಆದರೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, 'ಕೋವಿಡ್ ಸಂಪೂರ್ಣ ಇಳಿಕೆಯಾದ ತಕ್ಷಣವೇ ಸಿಎಎ ಅನ್ನು ಅನುಷ್ಠಾನಕ್ಕೆ ತರಲಾಗುತ್ತದೆ. ಈಶಾನ್ಯ ಭಾರತದ ರಾಜ್ಯಗಳಲ್ಲೂ ಜಾರಿಗೆ ತರಲಾಗುತ್ತದೆ' ಎಂದು ಹೇಳಿದ್ದರು. ಆನಂತರವೇ ಇಲ್ಲಿನ ಜನರು ಸಿಎಎ ವಿರುದ್ಧ ಮತ್ತೆ ಪ್ರತಿಭಟನೆಗೆ ಮುಂದಾಗಿದ್ದು.

ನೆರೆಯ ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನದಲ್ಲಿ ಧಾರ್ಮಿಕ ಕಿರುಕುಳ ಎದುರಿಸಿದ ಹಿಂದೂ, ಸಿಖ್, ಕ್ರೈಸ್ತ, ಬೌದ್ಧ, ಜೈನ ಮತ್ತು ಪಾರ್ಸಿ ಧರ್ಮೀಯರು ಭಾರತದ ಪೌರತ್ವ ಪಡೆಯಲು ಈ ಕಾಯ್ದೆ ಅವಕಾಶ ಮಾಡಿಕೊಡುತ್ತದೆ. ಧಾರ್ಮಿಕ ಕಿರುಕುಳದ ಕಾರಣ ಈ ದೇಶಗಳಿಂದ ಭಾರತಕ್ಕೆ ವಲಸೆ ಬಂದ ಮುಸ್ಲಿಮೇತರರಿಗೆ ಭಾರತದ ಪೌರತ್ವ ನೀಡಬಹುದು. ಈ ಹಿಂದೆಯೂ ಈ ಸ್ವರೂಪದ ಪೌರತ್ವ ನೀಡಲಾಗುತ್ತಿದ್ದರೂ, ಅದಕ್ಕೆ ದೀರ್ಘಾವಧಿ ಪ್ರಕ್ರಿಯೆಯ ಅವಶ್ಯಕತೆ ಇತ್ತು ಮತ್ತು ಎಲ್ಲಾ ಧರ್ಮೀಯರಿಗೂ ಅದು ಅನ್ವಯವಾಗುತ್ತಿತ್ತು. ಜತೆಗೆ 1971ಕ್ಕೂ ಮುನ್ನ ಭಾರತಕ್ಕೆ ಬಂದವರಿಗಷ್ಟೇ ಪೌರತ್ವ ದೊರೆಯುತ್ತಿತ್ತು. ಆದರೆ ಸಿಎಎಯು, 2014ರ ಡಿಸೆಂಬರ್ 31ರವರೆಗೆ ಹೀಗೆ ವಲಸೆ ಬಂದವರಿಗೂ ಪೌರತ್ವ ನೀಡಲು ಅವಕಾಶ ಮಾಡಿಕೊಡುತ್ತದೆ. ಈ ಕಾರಣದಿಂದಲೇ ಈ ಕಾಯ್ದೆಗೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

1971ರ ಬಾಂಗ್ಲಾ ವಿಮೋಚನಾ ಯುದ್ಧದ ನಂತರ ಈಶಾನ್ಯ ಭಾರತದ ರಾಜ್ಯಗಳಿಗೆ ಲಕ್ಷಾಂತರ ಬಾಂಗ್ಲಾ ದೇಶೀಯರು ವಲಸೆ ಬಂದಿದ್ದರು. ಅವರನ್ನೆಲ್ಲಾ ಗಡಿಪಾರು ಮಾಡಬೇಕು ಎಂಬುದು 1980ರ ದಶಕದ ಅಸ್ಸಾಂ ವಿದ್ಯಾರ್ಥಿ ಚಳವಳಿಯ ಆಗ್ರಹವಾಗಿತ್ತು. ಆ ಪ್ರಕಾರ 1966ರ ಜನವರಿ 1ಕ್ಕೂ ಮುನ್ನ ವಲಸೆ ಬಂದವರಿಗಷ್ಟೇ ಭಾರತದ ಪೌರತ್ವ ನೀಡಬೇಕು ಮತ್ತು ಆನಂತರದ ದಿನಗಳಲ್ಲಿ ವಲಸೆ ಬಂದವರನ್ನು ಗುರುತಿಸಿ ಅಗತ್ಯ ಕ್ರಮ ತಗೆದುಕೊಳ್ಳಬೇಕು ಎಂಬ ಷರತ್ತುಗಳಿದ್ದ ಒಪ್ಪಂದಕ್ಕೆ 1985ರಲ್ಲಿ ಪ್ರಧಾನಿ ರಾಜೀವ್ ಗಾಂಧಿ ಮತ್ತು ಚಳವಳಿಯ ನಾಯಕರು ಸಹಿ ಹಾಕಿದ್ದರು. ಇದನ್ನು ಅಸ್ಸಾಂ ಒಪ್ಪಂದ ಎಂದು ಕರೆಯಲಾಗುತ್ತಿದೆ.



ಸಿಎಎಯು ಅಸ್ಸಾಂ ಒಪ್ಪಂದದ ಷರತ್ತುಗಳನ್ನು ಅಮಾನ್ಯ ಮಾಡುತ್ತದೆ ಎಂಬುದು ಪ್ರತಿಭಟನಕಾರರ ಪ್ರಮುಖ ಆಕ್ಷೇಪ. 'ಈಗ 2014ರ ಡಿಸೆಂಬರ್ 31ರವರೆಗೆ ವಲಸೆ ಬಂದವರಿಗೂ ಪೌರತ್ವ ನೀಡಲು ನೂತನ ಕಾಯ್ದೆಯು ಅವಕಾಶ ಮಾಡಿಕೊಟ್ಟಿದೆ. 1966ರ ನಂತರ ಬಾಂಗ್ಲಾ ಹಿಂದೂಗಳು ಲಕ್ಷಾಂತರ ಸಂಖ್ಯೆಯಲ್ಲಿ ಅಸ್ಸಾಂ, ತ್ರಿಪುರಾ ಮತ್ತು ಮೇಘಾಲಯಗಳಿಗೆ ವಲಸೆ ಬಂದಿದ್ದಾರೆ. ಅವರ ಸಂಸ್ಕೃತಿಯು ನಮ್ಮ ಸಂಸ್ಕೃತಿಗಿಂತ ತೀರಾ ಭಿನ್ನವಾದುದು. ಅವರಿಗೆ ಇಲ್ಲಿನ ಪೌರತ್ವ ನೀಡಿದರೆ, ಅದು ಸಾಂಸ್ಕೃತಿಕ ಸಂಘರ್ಷಕ್ಕೆ ಕಾರಣವಾಗುತ್ತದೆ. ಜತೆಗೆ ಇಲ್ಲಿನ ನೈಸರ್ಗಿಕ ಸಂಪನ್ಮೂಲದ ಮೇಲೆ ತೀವ್ರ ಹೊರೆಯಾಗುತ್ತದೆ. ಹೀಗಾಗಿ ಸಿಎಎ ಅನ್ನು ಸಂಪೂರ್ಣವಾಗಿ ರದ್ದು ಮಾಡಬೇಕು' ಎಂಬುದು ಪ್ರತಿಭಟನಕಾರರ ಆಗ್ರಹ.

ಆಫ್‌ಸ್ಪ ವಿರುದ್ಧವೂ ಪ್ರತಿಭಟನೆ ಶುರು

ವಿವಾದಾತ್ಮಕ 'ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ–1958' (ಆಫ್‌ಸ್ಪ) ವಿರುದ್ಧ ಈಶಾನ್ಯ ರಾಜ್ಯಗಳ ಜನರು ಮತ್ತೆ ದನಿ ಎತ್ತಿದ್ದು, ಬೀದಿಗಿಳಿದಿದ್ದಾರೆ. ವಾರಂಟ್ ಇಲ್ಲದೇ ಜನರನ್ನು ಬಂಧಿಸುವ, ಸ್ಥಳಗಳಲ್ಲಿ ಶೋಧ ನಡೆಸುವ, ನಾಗರಿಕರ ಮೇಲೂ ಗುಂಡು ಹಾರಿಸುವ ಹಾಗೂ ಗುಂಡು ಹಾರಿಸಿದವರಿಗೆ ರಕ್ಷಣೆ ನೀಡುವ ವಿವಾದಾತ್ಮಕ ಅಂಶಗಳನ್ನು ಈ ಕಾಯ್ದೆ ಹೊಂದಿದ್ದು, ಪ್ರತಿಭಟನಕಾರರು ಬೃಹತ್ ಹೋರಾಟಕ್ಕೆ ಮತ್ತೆ ಸಜ್ಜಾಗುತ್ತಿದ್ದಾರೆ.

ಈಶಾನ್ಯ ರಾಜ್ಯಗಳಲ್ಲಿ ಬಂಡುಕೋರರು ನಡೆಸುವ ದಾಳಿಯಿಂದ ಜನರಿಗೆ ರಕ್ಷಣೆ ಕೊಡುವ ಉದ್ದೇಶದಿಂದ ಈ ಕಾಯ್ದೆಯನ್ನು ಜಾರಿಗೊಳಿಸಲಾಗಿತ್ತು. ಆದರೆ ಇದು ಸ್ಥಳೀಯರಿಗೆ ಬೆದರಿಕೆಯಾಗಿ ಪರಿಣಮಿಸಿದ್ದು, ಈ ಕಾಯ್ದೆ ಜಾರಿಗೊಳಿಸುವ ಹೊಣೆ ಹೊತ್ತುಕೊಂಡಿರುವ ಅಸ್ಸಾಂ ರೈಫಲ್ಸ್ ಯೋಧರಿಂದ ಜನರು ತೊಂದರೆ ಎದುರಿಸುತ್ತಿದ್ದಾರೆ ಎಂಬುದು ಪ್ರತಿಭಟನಕಾರರ ಆರೋಪ.

ಆಫ್‌ಸ್ಪವನ್ನು ಹಿಂದಕ್ಕೆ ಪಡೆಯಬೇಕು ಎಂಬ ಕೂಗು ಇದ್ದ ಸಮಯದಲ್ಲೇ, 2021ರ ಡಿಸೆಂಬರ್‌ನಲ್ಲಿ ನಾಗಾಲ್ಯಾಂಡ್‌ನಲ್ಲಿ ಭೀಕರ ಘಟನೆ ನಡೆಯಿತು. ಇಲ್ಲಿನ ಟಿರು ಹಾಗೂ ಒಟಿಂಗ್ ಗ್ರಾಮಸ್ಥರ ಮೇಲೆ ಅಸ್ಸಾಂ ರೈಫಲ್ಸ್ ಸೈನಿಕರು ಗುಂಡುಹಾರಿಸಿದ್ದರು. ಬಂಡುಕೋರರು ಎಂದು ತಪ್ಪಾಗಿ ಭಾವಿಸಿ, 14 ಅಮಾಯಕ ನಾಗರಿಕರನ್ನು ಯೋಧರು ಹತ್ಯೆ ಮಾಡಿದ್ದರು. ಇದು ಆಫ್‌ಸ್ಪ ವಿರೋಧಿ ಹೋರಾಟಗಾರರನ್ನು ಮತ್ತಷ್ಟು ಕೆರಳಿಸಿತು. ಯೋಧರಿಂದ ಆಗುತ್ತಿರುವ ತೊಂದರೆ ಬಗ್ಗೆ ಪದೇ ಪದೇ ದನಿ ಎತ್ತಿದ್ದರೂ ಕೇಂದ್ರ ಸರ್ಕಾರ ತಮ್ಮ ಕೂಗು ಕೇಳಿಸಿಕೊಳ್ಳುತ್ತಿಲ್ಲ ಎಂದು ಜನರು ಮತ್ತೆ ಬೀದಿಗಿಳಿದು ಪ್ರತಿಭಟಿಸಿದರು. ಈ ಘಟನೆಯು ಕಾಯ್ದೆ ಜಾರಿ ಬಗ್ಗೆ ಸಾಕಷ್ಟು ಚರ್ಚೆ ಹುಟ್ಟುಹಾಕಿತ್ತು.

ನಾಗಾಲ್ಯಾಂಡ್ ಘಟನೆಯ ಬಳಿಕ ಕೇಂದ್ರ ಸರ್ಕಾರ ಆಫ್‌ಸ್ಪವನ್ನು ಹಿಂದಕ್ಕೆ ಪಡೆಯಬಹುದು ಎಂಬುದು ಎಲ್ಲರ ನಿರೀಕ್ಷೆಯಾಗಿತ್ತು. ಘಟನೆ ನಡೆದ ಮೂರು ತಿಂಗಳ ಬಳಿಕ, ಅಂದರೆ 2022ರ ಮಾರ್ಚ್‌ನಲ್ಲಿ ಕೇಂದ್ರ ಸರ್ಕಾರವು ನಾಗಾಲ್ಯಾಂಡ್, ಅಸ್ಸಾಂ ಹಾಗೂ ಮಣಿಪುರದ ಆಯ್ದ ಸ್ಥಳಗಳಿಂದ ಕಾಯ್ದೆಯನ್ನು ವಾಪಸ್ ಪಡೆಯಿತು. ಕೇಂದ್ರ ಸರ್ಕಾರವು ಜನರ ಒತ್ತಡಕ್ಕೆ ಮಣಿದಿದ್ದರೂ, ಸಂಪೂರ್ಣವಾಗಿ ಕಾಯ್ದೆಯನ್ನು ವಾಪಸ್ ಪಡೆದಿಲ್ಲ ಎಂಬುದು ಇಲ್ಲಿ ಗಮನಾರ್ಹ. ಭೀಕರ ಘಟನೆಗಳು ನಡೆದರೂ, ಕಾಯ್ದೆಯನ್ನು ಆಯ್ದ ಜಾಗಗಳಲ್ಲಿ ಮುಂದುವರಿಸಿರುವ ಕೇಂದ್ರದ ವಿರುದ್ಧ ಮತ್ತೆ ಹೋರಾಟ ಶುರುವಾಗಿದೆ. ಇದು ಅನಿರ್ದಿಷ್ಟಾವಧಿ ಹೋರಾಟವಾಗುವ ಎಲ್ಲ ಸೂಚನೆಗಳಿವೆ.

ಆಫ್‌ಸ್ಪ ವ್ಯಾಪ್ತಿ ಎಲ್ಲೆಲ್ಲಿ..?

ಅಸ್ಸಾಂ

ಅಸ್ಸಾಂನ 24 ಜಿಲ್ಲೆಗಳ ಪೈಕಿ 23 ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಹಾಗೂ ಒಂದು ಜಿಲ್ಲೆಯಲ್ಲಿ ಭಾಗಶಃ ಕಾಯ್ದೆಯನ್ನು ವಾಪಸ್ ಪಡೆಯಲಾಗಿದೆ. ಅಂದರೆ, ಒಂದು ಜಿಲ್ಲೆಯ ಕೆಲವು ಪೊಲೀಸ್ ಠಾಣೆಗಳಲ್ಲಿ ಈ ಕಾಯ್ದೆ ಜಾರಿಯಲ್ಲಿದೆ

ಮಣಿಪುರ

ಇಂಫಾಲ ನಗರಪಾಲಿಕೆ ಪ್ರದೇಶವನ್ನು ಹೊರತುಪಡಿಸಿ, ಇಡೀ ಮಣಿಪುರ ರಾಜ್ಯವನ್ನು 'ಪ್ರಕ್ಷುಬ್ಧ ಪ್ರದೇಶ' ಎಂದು ಘೋಷಿಸಲಾಗಿತ್ತು. 2022ರ ಏಪ್ರಿಲ್ 1ರಿಂದ ಅನ್ವಯವಾಗುವಂತೆ ಆರು ಜಿಲ್ಲೆಗಳ ವ್ಯಾಪ್ತಿಯ 15 ಪೊಲೀಸ್ ಠಾಣೆಗಳಿಂದ ಕಾಯ್ದೆಯನ್ನು ವಾಪಸ್ ಪಡೆಯಲಾಗಿದೆ. ಅಂದರೆ, ಈ 15 ಪೊಲೀಸ್ ಠಾಣೆಗಳು ಹಾಗೂ ಇಂಫಾಲ ನಗರಪಾಲಿಕೆ ಹೊರತುಪಡಿಸಿ ಇಡೀ ರಾಜ್ಯದಲ್ಲಿ ಕಾಯ್ದೆ ಈಗಲೂ ಜಾರಿಯಲ್ಲಿದೆ

ಅರುಣಾಚಲ ಪ್ರದೇಶ

ಅಸ್ಸಾಂ ಜೊತೆ ಗಡಿ ಹಂಚಿಕೊಂಡಿರುವ ಅರುಣಾಚಲ ಪ್ರದೇಶದ ಮೂರು ಜಿಲ್ಲೆಗಳ 20 ಕಿ. ಮೀ. ಪ್ರದೇಶದಲ್ಲಿ ಹಾಗೂ ಇತರ 9 ಜಿಲ್ಲೆಗಳ 16 ಪೊಲೀಸ್ ಠಾಣೆಗಳು ಈ ವ್ಯಾಪ್ತಿಯಲ್ಲಿದ್ದವು. ಆದರೆ, ಕಾಯ್ದೆಯ ವ್ಯಾಪ್ತಿಯನ್ನು ಈಗ ಮೂರು ಜಿಲ್ಲೆಗಳಿಗೆ ತಗ್ಗಿಸಲಾಗಿದೆ

ನಾಗಾಲ್ಯಾಂಡ್

ತಜ್ಞರ ಸಮಿತಿ ಶಿಫಾರಸುಗಳನ್ನು ಆಧರಿಸಿ, 7 ಜಿಲ್ಲೆಗಳ 15 ಪೊಲೀಸ್ ಠಾಣೆಗಳ ವ್ಯಾಪ್ತಿಯಿಂದ ಮಾತ್ರ ಕಾಯ್ದೆಯನ್ನು ಹಿಂಪಡೆಯಲಾಗಿದೆ. ರಾಜ್ಯದ ಉಳಿದ ಎಲ್ಲ ಪ್ರದೇಶಗಳು 'ಪ್ರಕ್ಷುಬ್ಧ ಪ್ರದೇಶ' ಎಂದು ಕರೆಸಿಕೊಂಡಿವೆ

ಪರಿಸ್ಥಿತಿ ಸುಧಾರಿಸಿದ ಕಾರಣದಿಂದ, **ತ್ರಿಪುರಾ** ಮತ್ತು **ಮೇಘಾಲಯ** ರಾಜ್ಯಗಳಲ್ಲಿ ಮಾತ್ರ ಇದನ್ನು ಸಂಪೂರ್ಣ ವಾಪಸ್ ಪಡೆಯಲಾಗಿದೆ




'ನಾರ್ತ್–ಈಸ್ಟ್ ಸ್ಟೂಡೆಂಟ್ಸ್ ಆರ್ಗನೈಸೇಷನ್' ಕಾರ್ಯಕರ್ತರು ಸಿಎಎ ವಿರುದ್ಧ ಗುವಾಹಟಿಯಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು

'ಇಡೀ ಈಶಾನ್ಯಕ್ಕೆ ಐಎಲ್‌ಪಿ ತನ್ನಿ'

ಈಶಾನ್ಯ ಭಾರತದ ಹಲವು ರಾಜ್ಯಗಳಲ್ಲಿ ಇನ್ನರ್ ಲೈನ್ ಪರ್ಮಿಟ್ (ಐಎಲ್‌ಪಿ) ಜಾರಿಯಲ್ಲಿದೆ. ಈ ರಾಜ್ಯಗಳಿಗೆ ಸಂವಿಧಾನದ ವಿವಿಧ ವಿಧಿಗಳ ಅಡಿಯಲ್ಲಿ ವಿಶೇಷ ಸ್ಥಾನವನ್ನು ನೀಡಲಾಗಿದೆ. ವಿಶೇಷ ಸ್ಥಾನಗಳಲ್ಲಿ ಐಎಲ್‌ಪಿಯೂ ಒಂದು. ಈ ರಾಜ್ಯಗಳಿಗೆ ಪೌರತ್ವ (ತಿದ್ದುಪಡಿ) ಕಾಯ್ದೆ ಅನ್ವಯ ಆಗುವುದಿಲ್ಲ. ಹೀಗಾಗಿ ಐಎಲ್‌ಪಿಯನ್ನು ಈಶಾನ್ಯ ಭಾರತದ ಎಲ್ಲಾ ರಾಜ್ಯಗಳಿಗೆ ಅನ್ವಯ ಮಾಡಿ ಎಂದು ಪ್ರತಿಭಟನಕಾರರು ಆಗ್ರಹಿಸಿದ್ದಾರೆ.

ಐಎಲ್‌ಪಿ ಜಾರಿಯಲ್ಲಿರುವ ರಾಜ್ಯಗಳಿಗೆ ಭೇಟಿ ನೀಡಲು, ದೇಶದ ಬೇರೆ ರಾಜ್ಯಗಳ ಜನರು ಸರ್ಕಾರದಿಂದ ಏಳು ದಿನಗಳ ಪರ್ಮಿಟ್ ಪಡೆಯಬೇಕಾಗುತ್ತದೆ. ಈ ರಾಜ್ಯಗಳನ್ನು ಸಂರಕ್ಷಿತ ಪ್ರದೇಶಗಳು ಎಂದು ಗುರುತಿಸಲಾಗಿದೆ. ಹೀಗಾಗಿ ಹೊರಗಿನ ವ್ಯಕ್ತಿಗಳು ಇಲ್ಲಿಗೆ ಮುಕ್ತವಾಗಿ ಪ್ರವೇಶಿಸುವುದನ್ನು ನಿರ್ಬಂಧಿಸಲಾಗಿದೆ. ಈ ರಾಜ್ಯಗಳಲ್ಲಿ ಬೇರೆ ರಾಜ್ಯದವರು ನೆಲೆಸಲೂ ವಿಶೇಷ 'ಪರ್ಮಿಟ್' ಪಡೆಯಬೇಕು. ಆದರೆ ಹೊರಗಿನವರು ಇಲ್ಲಿ ಜಮೀನು ಖರೀದಿಸಲು ಅವಕಾಶ ಇಲ್ಲ. ಐಎಲ್‌ಪಿ ವ್ಯಾಪ್ತಿಗೆ ಒಳಪಡದ ಪ್ರದೇಶಗಳಲ್ಲಿ ಸಿಎಎ ಅನ್ವಯವಾಗುತ್ತದೆ. ಹೀಗಾಗಿಯೇ ಆ ಭಾಗದ ಜನರು, ಎಲ್ಲೆಡೆಯೂ ಐಎಲ್‌ಪಿ ಜಾರಿಗೆ ತನ್ನಿ ಎಂದು ಕೇಳುತ್ತಿದ್ದಾರೆ.



ಆಧಾರ: ಪೌರತ್ವ (ತಿದ್ದುಪಡಿ) ಕಾಯ್ದೆ, ಸಂವಿಧಾನದ 6ನೇ ಪರಿಚ್ಛೇದ, ಪಿಟಿಐ, ರಾಯಿಟರ್ಸ್, ಅಸ್ಸಾಂ ಅಕಾರ್ಡ್, ಪಿಐಬಿ ಪತ್ರಿಕಾ ಪ್ರಕಟಣೆಗಳು

ಪ್ರಜಾವಾಣಿ ಪ್ರಜಾಧ್ವನಿ – ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಶಾಲೆಗಳಲ್ಲಿ ರಾಷ್ಟ್ರಗೀತೆ ಗಾಯನ ಕಡ್ಡಾಯಗೊಳಿಸಿರುವ ರಾಜ್ಯ ಸರ್ಕಾರದ ನಿರ್ಧಾರ ಸರಿ ಎಂದು ನೀವು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 203

ಪರಶಿವನ ಮನಗೆದ್ದ ಗಿರಿಜೆ

ನಾರದನ ಮಾತುಗಳನ್ನ ಕೇಳಿದ ಮೇನಾದೇವಿಯು ಹಿಮವಂತನಲ್ಲಿ, ನನಗೆ ನಾರದನ ಅಭಿಪ್ರಾಯವು ಸರಿಯಾಗಿ ತಿಳಿಯಲಿಲ್ಲ. ಅವಳನ್ನು ನಿರ್ಗತಿಕನಿಗೆ ಕೊಟ್ಟು ವಿವಾಹ ಮಾಡಬೇಡಿ. ಪಾರ್ವತಿಗೆ ಯೋಗ್ಯನಾದ ಸುಂದರನಾದ ವರನೊಂದಿಗೆ ಮದುವೆಮಾಡಿ. ನಮ್ಮ ಪುತ್ರಿ ಕೈಹಿಡಿಯುವ ವರ ಲಕ್ಷಣವಂತನಾಗಿ ಸತ್ಕುಲಪ್ರಸೂತನಾಗಿರಬೇಕು. ಯೋಗ್ಯನಾದ ವರನಿಗೇ ಕೊಟ್ಟು ಪಾರ್ವತಿ ವಿವಾಹ ಮಾಡಬೇಕು' ಎಂದು ಕಂಬನಿ ತುಂಬಿದ ಕಂಗಳಿಂದ ಹೇಳಿದಳು.


ಹಿಮವಂತ ತನ್ನ ಪತ್ನಿಯನ್ನು ಸಮಾಧಾನಗೊಳಿಸಿ, 'ಎಲೈ ಮೇನಾದೇವಿ, ನಾರದಮುನಿಯ ಮಾತು ಎಂದಿಗೂ ಸುಳ್ಳಾಗುವುದಿಲ್ಲ. ಶಂಕರ ನಿರ್ಗತಿಕನಲ್ಲ, ನಿರ್ಗುಣ ಸಂಪನ್ನ. ನಿನಗೆ ಪಾರ್ವತಿ ಮೇಲೆ ಪ್ರೀತಿ ಇದ್ದರೆ, ಅವಳನ್ನು ಶಂಕರನ ಕುರಿತು ಭಕ್ತಿಯಿಂದ ತಪಸ್ಸು ಮಾಡಲು ಕಳುಹಿಸು. ತಪಸ್ಸಿಗೆ ಶಂಕರನು ಪ್ರಸನ್ನನಾದರೆ, ಅವನೇ ಪಾರ್ವತಿಯನ್ನು ಮದುವೆಯಾಗುವನು. ಇದರಿಂದ ಎಲ್ಲವೂ ಶುಭವಾಗುವುದು. ಪಾರ್ವತಿ ಹಸ್ತದಲ್ಲಿರುವ ಒಂದು ಗೆರೆಯಲ್ಲಿರುವ ಅಮಂಗಳವು ನಿವಾರಣೆಯಾಗುವುದು. ಪಾರ್ವತಿಯು ತಪಸ್ಸು ಮಾಡುವಂತೆ ಪ್ರೇರೇಪಿಸು' ಎನ್ನುತ್ತಾನೆ.

ಹಿಮವಂತನ ಮಾತು ಕೇಳಿ ಮೇನಾದೇವಿಗೆ ದುಗುಡ ಅಳಿದು, ಆನಂದವಾಗುತ್ತದೆ. ನಂತರ ಮೇನಾದೇವಿ ತಪಸ್ಸಿನ ವಿಧಿಯನ್ನು ಉಪದೇಶಿಸಲು ಪಾರ್ವತಿ ಬಳಿ ಬರುತ್ತಾಳೆ. ಸುಕೋಮಲವಾದ ಪಾರ್ವತಿ ಸೌಂದರ್ಯವನ್ನು ನೋಡಿ ಮೇನಾದೇವಿ ತುಂಬಾ ವ್ಯಥೆ ಪಡುತ್ತಾಳೆ. ಅರಮನೆಯಲ್ಲಿ ಸುಖವಾಗಿ ಬೆಳೆದ ಮಗಳು, ಕಾಡಿನಲ್ಲಿ ಕಠಿಣವಾದ ತಪಸ್ಸು ಮಾಡುವುದನ್ನು ನೆನೆದು ಕಣ್ಣೀರಿಡುತ್ತಾಳೆ. ತಾಯಿಯನ್ನು ಸಮಾಧಾನಗೊಳಿಸಿದ ಪಾರ್ವತಿ 'ಮಾತೆಯೆ, ಇಂದು ರಾತ್ರಿ ಬ್ರಾಹ್ಮಿಮುಹೂರ್ತದಲ್ಲಿ ಒಂದು ಸ್ವಪ್ನವನ್ನು ಕಂಡೆ. ಅದರಲ್ಲಿ ಓರ್ವ ತಪಸ್ವಿಯಾದ ಬ್ರಾಹ್ಮಣ ನನ್ನ ಬಳಿ ಬಂದು, ಶಿವನನ್ನು ಕುರಿತು ತಪಸ್ಸು ಮಾಡೆಂದು ಉಪದೇಶಿಸಿದ' ಎಂದಳು.

ಪಾರ್ವತಿಯ ಸ್ವಪ್ನದ ವಿಚಾರವನ್ನು ಮೇನಾದೇವಿಯು ಹಿಮವಂತನಿಗೆ ತಿಳಿಸಿದಳು. ಆಗ ಹಿಮವಂತ ತಾನೂ ಬೆಳಗಿನ ಜಾವದಲ್ಲಿ ಸ್ವಪ್ನವೊಂದನ್ನು ಕಂಡೆ ಎನ್ನುತ್ತಾನೆ. 'ನಾರದ ಹೇಳಿದಂಥ ಲಕ್ಷಣಗಳುಳ್ಳ ಓರ್ವ ಮಹಾತಪಸ್ವಿಯು ತಪವನ್ನಾಚರಿಸಲು ನಮ್ಮ ನಗರಕ್ಕೆ ಬಂದ. ಅವನ ಬಳಿಗೆ ಪಾರ್ವತಿಯನ್ನು ಕರೆದುಕೊಂಡು ಹೋದೆ. ಆತ ನಾರದ ಹೇಳಿದಂಥ ವರ ಶಂಕರನಾಗಿದ್ದ. ಆಗ ನಾನು ಪಾರ್ವತಿಯನ್ನು ಶಂಕರನ ಸೇವೆಗೆ ನಿಯಮಿಸಿದೆ. ಆದರೆ ಅವನು ಅಂಗೀಕರಿಸಲಿಲ್ಲ. ಆಗ ಪಾರ್ವತಿಯು ಅವನನ್ನು ಪತಿಯಾಗಿ ಪಡೆಯಲು ಭಕ್ತಿಯಿಂದ ಸೇವಿಸಿದಳು. ಮೇನಾದೇವಿ, ಈ ಸ್ವಪ್ನದ ಫಲವೇನೆಂದು ಯೋಚಿಸಿ ನೋಡು. ಪಾರ್ವತಿಯು ಶಿವನನ್ನು ಕುರಿತು ತಪಸ್ಸು ಮಾಡುವುದೇ ಯೋಗ್ಯ ಅನ್ನಿಸುತ್ತದಲ್ಲವೆ' ಎಂದು ಮನದಟ್ಟು ಮಾಡಿಸುತ್ತಾನೆ.

ಪರಮೇಶ್ವರನು ಸತೀದೇವಿಯ ವಿರಹದಿಂದ ದುಃಖಿತನಾಗಿ ಹಿಮಾಲಯದಲ್ಲಿ ತಪಸ್ಸನ್ನಾಚರಿಸತೊಡಗಿದ. ಪಾರ್ವತಿಯು ಸಖಿಯರೀವರ್ಗರೊಡನೆ ಶಂಕರನನ್ನು ಭಕ್ತಿಯಿಂದ ಸೇವಿಸತೊಡಗಿದಳು. ದೇವತೆಗಳು ಶಂಕರನ ತಪಸ್ಸನ್ನು ಭಂಗಗೊಳಿಸಲು ಮನ್ಮಥನನ್ನು ಕಳುಹಿಸಿದರು. ಅವನು ತನ್ನ ಬಾಣಗಳನ್ನು ಶಿವನ ಮೇಲೆ ಪ್ರಯೋಗಿಸಿದ. ಆದರೂ ಪರಮೇಶ್ವರನು ಸ್ವಲ್ಪವೂ ಕಾಮ ವಿಕಾರನಾಗಲಿಲ್ಲ. ಬದಲಿಗೆ, ತನ್ನ ಮೂರನೆಯ ಕಣ್ಣನ್ನು ತೆರೆದು ಮನ್ಮಥನನ್ನು ಭಸ್ಮ ಮಾಡಿದ. ಇದಾದ ನಂತರ ಗಿರಿಜೆಯು ಶಿವನನ್ನು ಕುರಿತು ಘೋರವಾದ ತಪವನ್ನಾಚರಿಸಿದಳು. ಶಿವನು ಪ್ರಸನ್ನನಾದ. ವಿಷ್ಣುವಿನ ಪ್ರಾರ್ಥನೆಯನ್ನು ಮನ್ನಿಸಿ ರುದ್ರನು ಪಾರ್ವತಿಯನ್ನು ಮದುವೆಯಾದ. ಮುಂದೆಲ್ಲವೂ ಮಂಗಳವಾಯಿತು ಎಂದು ನಾರದನಿಗೆ ಬ್ರಹ್ಮ ಹೇಳುವಲ್ಲಿಗೆ ಪಾರ್ವತೀಖಂಡದ ಒಂಬತ್ತನೆಯ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಆಗಸ್ಟ್ 19, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಅಷ್ಟಮಿ ಗಂ. 23-00 ನಕ್ಷತ್ರ: ಕೃತ್ತಿಕಾ ಗಂ. 25-53 ಯೋಗ: ಧ್ರುವ ಗಂ. 20-59, ಕರಣ: ಬಾಲವ ಗಂ. 10-06, ಸಿಂಹ ಮಾಸದ 02 ನೇ ದಿನ. ರಾಹುಕಾಲ : ಬೆಳಿಗ್ಗೆ 10:30 – 12:00
ಸೂರ್ಯೋದಯ : 06-22 ಸೂರ್ಯಾಸ್ತ : 06-46, ಮುಸ್ಲಿಂ ದಿನಾಂಕ : 20 ಮೊಹರಮ್
ದಿನ ವಿಶೇಷ : ಜನ್ಮಾಷ್ಟಮಿ (ವೈಷ್ಣವ), ಗೋಕುಲಾಷ್ಟಮಿ (ನಂದೋತ್ಸವ)
ಅದೃಷ್ಟ ಸಂಖ್ಯೆ : 8, 11

ಮೇಷ: ಸಂಬಂಧಿಕರ ವಲಯದಲ್ಲಿ ನಿಮ್ಮ ಮೇಲಿದ್ದ ತಪ್ಪು ಅಭಿಪ್ರಾಯಗಳು ದೂರಾಗುವುದು. ಸಮಸ್ಯೆಗಳನ್ನು ನಾಜೂಕಾಗಿ ಬಗೆಹರಿಸಿಕೊಳ್ಳುವ ರೀತಿಯನ್ನು ಇನ್ನೊಬ್ಬರ ಮೂಲಕ ತಿಳಿದುಕೊಳ್ಳಿರಿ.

ವೃಷಭ: ಎಂತ ಪರಿಸ್ಥಿತಿಯನ್ನೂ ಎದುರಿಸಬಲ್ಲೆನೆಂಬ ಆತ್ಮವಿಶ್ವಾಸದಿಂದ ಜೀವನ ನಡೆಸಿ. ಕುಟುಂಬದ ಸದಸ್ಯರ ಜೊತೆ ಅಧಿಕ ಸಮಯ ಕಳೆಯುವಂತಾಗುವುದು. ಕಾಲು ನೋವು , ಮೂಳೆಗೆ ಸಂಬಂಧಿಸಿದ ನೋವು ಬಾಧಿಸಲಿದೆ.

ಮಿಥುನ: ಕಲಾವಿದರ ಅಭ್ಯಾಸದ ಫಲದಿಂದ ಅವಕಾಶಗಳು ಲಭ್ಯ. ಉದಯೋನ್ಮುಖ ತಾರೆಯರಿಗೆ ಹೆಚ್ಚಿನ ಲಾಭ ಬರಲಿದೆ. ದಕ್ಷತೆಗೆ ಅಡ್ಡಿಯಾಗುವಂತಹ ಘಟನೆಗಳು ನಡೆಯಬಹುದು. ಅದಕ್ಕೆ ಅವಕಾಶ ನೀಡಬೇಡಿ.

ಕರ್ಕಾಟಕ: ನ್ಯಾಯಾಂಗ ಇಲಾಖೆಯವರಿಗೆ ಬಡ್ತಿ ಅಥವಾ ವರ್ಗಾವಣೆಯ ಸಾಧ್ಯತೆಗಳಿದೆ. ಕಾನೂನು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಯಶಸ್ಸು. ಮಹಾಲಕ್ಷ್ಮಿಯನ್ನು ಪೂಜಿಸಿ ಹೆಚ್ಚಿನ ಏಳಿಗೆ ಹೊಂದಬಹುದು.

ಸಿಂಹ: ಕೃಷಿ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ. ಲೇವಾದೇವಿ ವ್ಯವಹಾರಗಳಿಂದ ಗಳಿಸಿದ ಹಣ ಒಳ್ಳೆಯ ಕಾರ್ಯಗಳಿಗೆ ಸಹಾಯವಾಗುವುದು.

ಕನ್ಯಾ: ಅತಿ ಅವಸರ ಮತ್ತು ಅತಿ ಉದ್ವೇಗ ಇವೆರಡು ನಿಮ್ಮನ್ನು ತಲೆ ತಗ್ಗಿಸುವಂತೆ ಮಾಡುತ್ತದೆ. ಕೆಲಸಗಳೆಲ್ಲವೂ ತನ್ನಷ್ಟಕ್ಕೆ ತಾನೆಯೇ ಪೂರ್ಣಗೊಳ್ಳುವುದು. ಹಾಲು ಉತ್ಪನ್ನ ವಸ್ತುಗಳ ಮಾರಾಟಗಾರರಿಗೆ ಲಾಭ ಆಗಲಿದೆ.

ತುಲಾ: ಕೆಲಸದಲ್ಲಿ ಸಣ್ಣಪುಟ್ಟ ಅಡಚಣೆಯನ್ನು ಎದುರಿಸಬೇಕಾಗಬಹುದು. ವಿಚಲಿತರಾಗದಿರಿ. ಬದುಕಿನಲ್ಲಿ ಹೊಸ ವ್ಯಕ್ತಿಯೊಬ್ಬರ ಆಗಮನವಾಗಲಿದೆ. ಮಕ್ಕಳೊಂದಿಗೆ ವ್ಯವಹಾರದ ವಿಚಾರಗಳ ಬಗ್ಗೆ ಮಾತುಕತೆ ನಡೆಸಿ.

ವೃಶ್ಚಿಕ: ಹಣದ ಮೇಲಿನ ದುರಾಸೆಗಾಗಿ ಯಾವ ಕೆಲಸವನ್ನೂ ಮಾಡಬೇಡಿ. ಮರದ ವ್ಯಾಪಾರಿಗಳಿಗೆ ಉತ್ತಮ ಲಾಭವಾಗಲಿದೆ. ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ.

ಧನು: ಶೀತಬಾಧೆಯಂತಹ ಸಮಸ್ಯೆಯಿಂದಾಗಿ ಆಲಸ್ಯತನ ಹೆಚ್ಚಾಗುವುದು. ಯಾವುದೇ ತೀರ್ಮಾನಗಳನ್ನು ತೆಗೆದುಕೊಳ್ಳುವ ವಿಚಾರದಲ್ಲಿ ನಿಮ್ಮ ಚಂಚಲ ಮನಸ್ಸು ಹೆದರಿದಂತಾಗುತ್ತದೆ.

ಮಕರ: ಇಂದು ಪೂರ್ವ ನಿಯಾಮಕವಾಗಿ ಕೆಲಸ ಮಾಡುವುದು ಬಹಳ ಕಷ್ಟವಾಗುವುದು. ಆರೋಗ್ಯದಲ್ಲಿ ಉತ್ತಮ ಚೇತರಿಕೆ ಕಂಡು ಬಂದು ದೈನಂದಿನ ಚುಟುವಟಿಕೆಗಳಲ್ಲಿ ಪಾಲುಗೊಳ್ಳುವಿರಿ.

ಕುಂಭ: ಅಧಿಕಾರಿಗಳಿಗೆ ಸಹೋದ್ಯೋಗಿಗಳಿಂದ ನಿರೀಕ್ಷೆಗೆ ಮೀರಿದ ಸಹಾಯ ದೊರೆಯುವುದು. ಭೂ ವ್ಯವಹಾರದಲ್ಲಿ ಹೆಚ್ಚಿನ ಲಾಭವಿದೆ. ರಾಜಕೀಯ ವಿದ್ಯಮಾನಗಳಿಂದಾಗಿ ಓಡಾಟ ಅಧಿಕಗೊಳ್ಳುವುದು.

ಮೀನ: ಆಪ್ತರೊಬ್ಬರ ನೆರವು ಮಗನ ವಿದ್ಯಾಭ್ಯಾಸಕ್ಕೆ ಅಥವಾ ವಸತಿಗೆ ಸಹಾಯವಾಗಲಿದೆ. ಆಲಂಕಾರಿಕ ವಸ್ತುಗಳ ಮಾರಾಟದಲ್ಲಿ ಹೆಚ್ಚಳ ಕಾಣುವಿರಿ. ನೆಂಟರಿಷ್ಟರ ಅಗಮನ ಮನೆಯಲ್ಲಿ ಹಬ್ಬದ ವಾತಾವರಣ ಮೂಡಿಸಲಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಮರಳಿ ಯತ್ನವ ಮಾಡು

ಉತ್ತಮತೆಯಿಂತೆಂದು ಮತಿಗೆ ತೋರ್ದೊಡೇನು? |
ವೃತ್ತಿಯೊಳ್ ಅದೂರಿ ಸ್ವಭಾವಾಂಶವಾಗಲ್ ||
ಮತ್ತುಮತ್ತನುವರ್ತಿಸುತ, ಭಂಗವಾದಂದು |
ಯತ್ನಿಸಿನ್ನುಂ ಮರಳಿ - ಮಂಕುತಿಮ್ಮ || 697 ||

ಪದ-ಅರ್ಥ: ಉತ್ತಮತೆಯಿಂತೆಂದು = ಉತ್ತಮತೆ-(ಶ್ರೇಷ್ಠತೆ) + ಇಂತು + ಎಂದು, ಮತಿಗೆ = ಬುದ್ಧಿಗೆ, ತೋರ್ದೊಡೇನು = ತೋರಿದರೇನು, ಅದೂರಿ = ಅದು + ಊರಿ, ಸ್ವಭಾವಾಂಶವಾಗಲ್ = ಸ್ವಭಾವ + ಅಂಶವಾಗಲ್ (ಅಂಶವಾದಾಗ), ಮತ್ತು ಮತ್ತನುವರ್ತಿಸುತ = ಮತ್ತೆ + ಮತ್ತೆ + ಅನುವರ್ತಿಸುತ(ಮಾಡುತ್ತ), ಭಂಗವಾದಂದು = ಭಂಗವು + ಆದಂದು, ಯತ್ನಿಸಿನ್ನು = ಯತ್ನಿಸು + ಇನ್ನು

ವಾಚ್ಯಾರ್ಥ: ಶ್ರೇಷ್ಠತೆ ಎನ್ನುವುದು ಹೀಗೆ ಎಂದು ಬುದ್ಧಿಗೆ ಹೊಳೆದರೇನು? ಅದು ನಮ್ಮ ಬದುಕಿನಲ್ಲಿ ನೆಲೆನಿಂತು ಸ್ವಭಾವವೇ ಆಗಲು ಮತ್ತೆ ಮತ್ತೆ ಪ್ರಯತ್ನಿಸಬೇಕು. ಅದಕ್ಕೆ ಭಂಗಬಂದರೆ ಮತ್ತೆ ಪ್ರಯತ್ನಿಸಬೇಕು.

ವಿವರಣೆ: ಬದುಕಿನಲ್ಲಿ ಶ್ರೇಷ್ಠತೆ ಯಾವುದು ಎನ್ನುವುದು ಎಲ್ಲರಿಗೂ ತಿಳಿದಿದೆ. ಅದನ್ನು ಸಾಧಿಸಬೇಕೆಂಬ ಮನಸ್ಸೂ ಸಾಕಷ್ಟು ಜನರಿಗಿದೆ. ಆದರೆ ಅದನ್ನು ಪಡೆಯುವತ್ತ ಮಾಡಬೇಕಾದ ಪರಿಶ್ರಮದ, ಪ್ರಯತ್ನದ ಬಗ್ಗೆ ಒಲವಿರುವುದು ಕೇವಲ ಕೆಲವೇ ಜನರಿಗೆ. ಅವರಲ್ಲಿ ಒಬ್ಬಿಬ್ಬರು ಮಾತ್ರ ಚಿಂತನೆಯನ್ನು ಕಾರ್ಯರೂಪಕ್ಕೆ ತಂದು, ವೈಫಲ್ಯಗಳು ಇದಿರಾದರೂ, ಎದೆಗುಂದದೆ, ಸತತ ಪ್ರಯತ್ನ ಮಾಡಿ ಗುರಿ ಸಾಧಿಸುತ್ತಾರೆ. ಅದಕ್ಕೇ ಸಾಧಕರ ಸಂಖ್ಯೆ ತುಂಬ ಸಣ್ಣದು. ಅವರು ಅತ್ಯಂತ, ಸಾಧಾರಣ ಆರ್ಥಿಕ ಸ್ಥಿತಿಯ ಕುಟುಂಬದಲ್ಲಿ ಹುಟ್ಟಿದವರು. ಶಾಲೆ ಕಲಿಯುವ ಅದಮ್ಯ ಆಸೆ. ಆದರೆ ಎಲ್ಲರಿಗೂ ಆಸೆಗಳು ಈಡೇರುವುದಿಲ್ಲವಲ್ಲ. ಕುಟುಂಬದ ಖರ್ಚಿಗಾಗಿ ದುಡಿಯಲೇಬೇಕಾದ ಪರಿಸ್ಥಿತಿ. ಈ ಮುಸ್ಲಿಂ ಹುಡುಗ ಶಾಲೆ ಬಿಟ್ಟ. ಏನು ಮಾಡಬೇಕೆಂಬ ಸ್ಪಷ್ಟ ಕಲ್ಪನೆ ಇಲ್ಲದೆ, ಮತ್ತೊಬ್ಬರನ್ನು ನೋಡಿ ತಾನೂ ಕಿತ್ತಳೆ ಹಣ್ಣು ಮಾರುವ ಕೆಲಸದಲ್ಲಿ ತೊಡಗಿದ. ಒಮ್ಮೆ ವಿದೇಶಿ ಪ್ರವಾಸಿ ಬಂದು ಇಂಗ್ಲೀಷಿನಲ್ಲಿ ಕಿತ್ತಳೆ ಹಣ್ಣಿನ ಬೆಲೆಯನ್ನು ಕೇಳಿದಾಗ ಅರ್ಥವಾಗದೆ ತಡವರಿಸಿದ ಹುಡುಗ ಮುಜುಗರಪಟ್ಟಿದ್ದ. ತನಗೆ ಯಾವುದೂ ಔಪಚಾರಿಕ ಶಿಕ್ಷಣ ದೊರಕಲಿಲ್ಲವೆಂದು ಚಿಂತಿಸಿದ , ತನಗಾದದ್ದು ಬೇರೆ ಮಕ್ಕಳಿಗೆ ಆಗಬಾರದೆಂದು ತೀರ್ಮಾನಿಸಿ ಊರಿನಲ್ಲಿ ಒಂದು ಶಾಲೆ ಪ್ರಾರಂಭಿಸಲು ತೀರ್ಮಾನಿಸಿದ. ತನ್ನ ಕಿತ್ತಳೆ ಹಣ್ಣಿನ ವ್ಯಾಪಾರದಿಂದ ಬಂದ ಹಣದಲ್ಲಿ ಒಂದಷ್ಟು ಭಾಗವನ್ನು ಶಾಲೆಗಾಗಿ ಎತ್ತಿಟ್ಟು ತನ್ನ ಹಳ್ಳಿ ಹೊಸಪದಪುನಲ್ಲಿ ಶಾಲೆ ಪ್ರಾರಂಭಿಸಿಯೇ ಬಿಟ್ಟ. ಅದು ಸುಲಭದ ಕೆಲಸವೇ? ಪುನಃ ಪುನಃ ವಿಶ್ರಾಂತಿಯಿಲ್ಲದೆ ದುಡಿದ. ಯಾವುದನ್ನು ಮೇಲಿಂದ ಮೇಲೆ ಮಾಡುತ್ತೇವೋ ಅದು ಅಭ್ಯಾಸವಾಗುತ್ತದೆ. ಅಭ್ಯಾಸವನ್ನು ಮುಂದುವರೆಸಿದರೆ ಮನೋಧರ್ಮವಾಗಿ, ಸ್ವಭಾವವೇ ಆಗುತ್ತದೆ. ನಂತರ ಸರಕಾರದ, ಸಾರ್ವಜನಿಕರ ಸಹಕಾರ ದೊರೆತು ಇಂದು ಅದು ಹಾಜಬ್ಬ ಶಾಲೆ ಎಂಬ ಖ್ಯಾತಿ ಪಡೆದಿದೆ. ಅದಕ್ಕೆ ತಮ್ಮೆಲ್ಲವನ್ನೂ ಧಾರೆಯೆರೆದ ಹರೇಕಳ ಹಾಜಬ್ಬರನ್ನು ಪದ್ಮಶ್ರೀ ಪ್ರಶಸ್ತಿ ಹುಡುಕಿಕೊಂಡು ಬಂದಿದೆ.

ಹೀಗೆ ಸಾಕು ಎನ್ನದೆ ಸತತ ದುಡಿದ ಪರಿಶ್ರಮದ ಫಲ ಇದು. ಕಗ್ಗ ಇದನ್ನೇ ಧ್ವನಿಸುತ್ತದೆ. ಜೀವನದಲ್ಲಿ ಶ್ರೇಷ್ಠತೆ ಎಂದುಕೊಂಡದ್ದನ್ನು ಸಾಧಿಸಲು ಸತತ ಪ್ರಯತ್ನದಿಂದ, ಅದನ್ನು ಸ್ವಭಾವವನ್ನಾಗಿಸಲು, ಮರಮರಳಿ ಶ್ರಮಿಸಬೇಕು. ನಡುವೆ ಅದಕ್ಕೇನಾದರೂ ಭಂಗ ಬಂದರೆ, ಮತ್ತೆ ಪ್ರಯತ್ನದ ಹಾದಿಯನ್ನು ಬಿಡಕೂಡದು.

ಪದಬಂಧ 5054


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನೀರು ಧುಮುಕುವ ಸ್ಥಳ (4)
3.ಕಳವಳದಿಂದ ತಿಂದಿರುವ ತುತ್ತು!(3)
5.ಆಗ ತಾನೆ ಮದುವೆಯಾದ ಗಂಡ ಹೆಂಡಿರು(5)
7.ಮಣ್ಣು ಬೆರೆತ ನೀರು (3)
9.ಕತ್ತು ಕೊನೆಗಿಟ್ಟು ತೋರಿದ ಬಲ!(3)
11.ಹೆಪ್ಪಾದ ಹಾಲು(3)
13.ಕಳೆಯುವ ಲೆಕ್ಕವಿದು(5)
15.ನಿಯಮಿತವಾಗಿ ಕಾಣಿಸುವ ಹೆಂಗಸು!(3)
16.ಮಧ್ಯ ವಯಸ್ಸಿದು(4)

ಮೇಲಿಂದ ಕೆಳಕ್ಕೆ

1.ವನಿತೆ ಎಳೆದಿರುವ ತೆರೆ(4)
2.ಒಂದೇ ವಿಷಯದಲ್ಲಿ ಮಗ್ನನಾಗಿರುವವನು(3)
4.ದಂಪತಿಗಳು ಹಬ್ಬಿಸಿರುವ ಗಾಳಿ ಸುದ್ದಿ!(3)
6.ಹೀಗೆ ಸೈನ್ಯ ಸಮೇತ ಯುದ್ಧಕ್ಕೆ ಹೋಗು(3)
8.ಎಳೆಯ ಗಿಡ(2)
9.ಉಚ್ಚ ದನಿಯನ್ನು ಹೀಗೂ ಹೇಳುವರು(3)
10.ಆವರಣ ಚಿಹ್ನೆ (2)
12.ಆಲಯದ ಹತ್ತಿರವಿರುವ ಅಸ್ತ್ರ (4)
13.ಈತ ಕೆಟ್ಟಚಟವುಳ್ಳವನು(3)
14.ಇದು ತುಂಬಾ ಹೊಸದು (3)



5053ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಹಾಪೂರ 3.ಅನುಭವಿ
5.ಸದರ 6.ಜರಾಯು
8.ಪ್ರಸಂಗ 10.ಆಸರೆ
11.ವಾಯಸ 13.ಅಳುಕು
15.ಯಥಾಸ್ಥಿತಿ 16.ರಣಭೇರಿ

ಮೇಲಿಂದ ಕೆಳಕ್ಕೆ:
1.ಮಹಾರಾಜ 2.ರಭಸ
3.ಅಸುರ 4.ವಿನಿಯೋಗ
7.ರಾಜಸ 9.ಸಂದಾಯ
10.ಆಯವ್ಯಯ 12.ಸದಾಚಾರಿ
13.ಅದಿತಿ 14.ಕುಬೇರ

ಸುಡೊಕು 5440

	6			9				8
1			8			5		
		2		6			9	7
		7			9	6		
4	2						5	9
6			7		8			
2		5	4		7	9		6
	4						7	
9		6	3		5		4	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5439 ಸುಡೊಕು

8	7	3	2	1	9	4	6	5
6	2	9	4	5	8	7	1	3
4	1	5	6	7	3	9	2	8
5	4	2	7	9	6	8	3	1
3	6	7	8	4	1	5	9	2
1	9	8	3	2	5	6	4	7
9	8	1	5	6	2	3	7	4
2	3	4	9	8	7	1	5	6
7	5	6	1	3	4	2	8	9

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	17,944
ಇಂದಿನ ಅಂತ್ಯ	17,956
▲	12
ದಿನದ ಗರಿಷ್ಠ	17,968

ವಿನಿಮಯ ದರ

$ ಡಾಲರ್	79.64
£ ಪೌಂಡ್	96.18
€ ಯುರೊ	81.04
¥ ಯೆನ್ (100ಕ್ಕೆ)	58.96

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1660(1660)
ಸೋಯಾ (ರಿಫೈನ್ಡ್)	₹1250(1262)
ಸೂರ್ಯಕಾಂತಿ (ರಿಫೈನ್ಡ್)	₹1555(1560)
ಪಾಮೋಲಿನ್	₹1207(1235)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1000-1300
ಮಧ್ಯಮ	₹600-1000
ಸಣ್ಣ	₹400-600

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

‘ಬ್ಯಾಂಕ್ ಖಾಸಗೀಕರಣದಿಂದ ಅಪಾಯ’

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳನ್ನು ದೊಡ್ಡ ಪ್ರಮಾಣದಲ್ಲಿ ಖಾಸಗೀಕರಣಗೊಳಿಸುವುದು ಒಳಿತಿಗಿಂತ ಹೆಚ್ಚು ಕೆಡುಕನ್ನು ಉಂಟುಮಾಡುತ್ತದೆ ಎಂದು ಆರ್‌ಬಿಐ ಬುಲೆಟಿನ್‌ನಲ್ಲಿ ಪ್ರಕಟವಾಗಿರುವ ಲೇಖನವೊಂದು ಹೇಳಿದೆ.

ಲಾಭವನ್ನು ಹೆಚ್ಚಿಸುವಲ್ಲಿ ಖಾಸಗಿ ಬ್ಯಾಂಕ್‌ಗಳು ದಕ್ಷವಾಗಿವೆ. ಆದರೆ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಹಣಕಾಸಿನ ಒಳಗೊಳ್ಳುವಿಕೆಯ ವಿಚಾರದಲ್ಲಿ ಒಳ್ಳೆಯ ಕೆಲಸ ಮಾಡಿವೆ ಎಂದು ಲೇಖನದಲ್ಲಿ ವಿವರಿಸಲಾಗಿದೆ. ಲೇಖನದಲ್ಲಿ ವ್ಯಕ್ತವಾಗಿರುವ ಅಭಿಪ್ರಾಯವು ಆರ್‌ಬಿಐ ಅಭಿಪ್ರಾಯ ಅಲ್ಲ.

‘ಖಾಸಗೀಕರಣವು ಹೊಸ ಪರಿಕಲ್ಪನೆಯೇನೂ ಅಲ್ಲ. ಇದರ ಒಳಿತು, ಕೆಡುಕುಗಳು ಚೆನ್ನಾಗಿ ತಿಳಿದಿವೆ. ಎಲ್ಲ ಸಮಸ್ಯೆಗಳಿಗೂ ಖಾಸಗೀಕರಣವೇ ಮದ್ದು ಎಂಬ ಸಾಂಪ್ರದಾಯಿಕ ಆಲೋಚನೆ ಹಿಂದೆ ಇತ್ತು. ಆದರೆ, ಖಾಸಗೀಕರಣವನ್ನು ಹೆಚ್ಚು ಸೂಕ್ಷ್ಮವಾಗಿ ಜಾರಿಗೆ ತರಬೇಕು ಎಂಬಲ್ಲಿವೆ ಆರ್ಥಿಕ ಆಲೋಚನೆಗಳು ಬಂದಿವೆ’ ಎಂದು ಲೇಖನವು ಹೇಳಿದೆ.

ಸುಪ್ರೀಂ ಕೋರ್ಟ್‌ನ ಮಹತ್ವದ ತೀರ್ಪು • ಆಗಸ್ಟ್ 20ರಿಂದ ಅನ್ವಯ

ವಾಣಿಜ್ಯ ವ್ಯಾಜ್ಯಗಳಲ್ಲಿ ಮಧ್ಯಸ್ಥಿಕೆ ಕಡ್ಡಾಯ

ಪ್ರಜಾವಾಣಿ ವಾರ್ತೆ



ನವದೆಹಲಿ: ಕಂಪನಿಗಳು ವ್ಯಾಜ್ಯಗಳ ಇತ್ಯರ್ಥಕ್ಕೆ ನ್ಯಾಯಾಲಯದ ಮೆಟ್ಟಿಲು ಏರುವ ಮೊದಲು ಮಧ್ಯಸ್ಥಿಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು ಕಡ್ಡಾಯ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ. ಕೋರ್ಟ್‌ನ ಈ ತೀರ್ಪು ಮುಂದಿನ ದಿನಗಳಲ್ಲಿ ವಾಣಿಜ್ಯಿಕವಾದ ಎಲ್ಲ ವ್ಯಾಜ್ಯಗಳ ಮೇಲೆ ಪರಿಣಾಮ ಬೀರಲಿದೆ.

ವಾಣಿಜ್ಯಿಕ ನ್ಯಾಯಾಲಯಗಳ ಕಾಯ್ದೆ – 2015ರ ಸೆಕ್ಷನ್ 12(ಎ) ಅನ್ನು ಉಲ್ಲಂಘಿಸುವವರು ಸಲ್ಲಿಸುವ ಅರ್ಜಿಗಳು ತಿರಸ್ಕರಿಸಲು ಯೋಗ್ಯ ಎಂದು ಕೋರ್ಟ್ ಹೇಳಿದೆ. ಈ ತೀರ್ಪು ಆಗಸ್ಟ್ 20ರಿಂದ ಅನ್ವಯ ಆಗಲಿದೆ.

‘ಸಂಬಂಧಪಟ್ಟ ಎಲ್ಲರಿಗೂ ಈ ವಿಚಾರವು ಗೊತ್ತಾಗಲಿ ಎಂಬ ಕಾರಣಕ್ಕೆ ನಾವು ಹೊಸ ನಿಯಮವನ್ನು ಆಗಸ್ಟ್ 20ರಿಂದ ಅನ್ವಯವಾಗುವಂತೆ ಜಾರಿಗೊಳಿಸುತ್ತಿದ್ದೇವೆ’ ಎಂದು ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಮತ್ತು ಹೃಷಿಕೇಶ್ ರಾಯ್ ಅವರು ಇದ್ದ ಪೀಠ ಹೇಳಿದೆ.

ವಾಣಿಜ್ಯಿಕ ನ್ಯಾಯಾಲಯಗಳ ಕಾಯ್ದೆಯ ಸೆಕ್ಷನ್ 12(ಎ) ಅಡಿಯಲ್ಲಿ ಹೇಳಿರುವಂತೆ, ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವ ಮೊದಲು ಮಧ್ಯಸ್ಥಿಕೆ ಪ್ರಕ್ರಿಯೆ ನಡೆಸಬೇಕಾಗಿರುವುದು ಕಡ್ಡಾಯ. ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸದೆ ಇದ್ದಲ್ಲಿ ಕೆಳಹಂತದ ನ್ಯಾಯಾಲಯಗಳು ಅರ್ಜಿಯನ್ನು ತಿರಸ್ಕರಿಸಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮಧ್ಯಸ್ಥಿಕೆಯ ಮಹತ್ವ ಏನು ಎಂಬುದನ್ನು ಈ ತೀರ್ಪಿನಲ್ಲಿ ಕೋರ್ಟ್ ವಿವರಿಸಿದೆ. ‘ವಿಚಾರಣಾ ನ್ಯಾಯಾಲಯಗಳ ಮೇಲಿನ ಹೊರೆ ತಗ್ಗಿಸುವ ಅಗತ್ಯ ಇತ್ತು. ಅದರಲ್ಲೂ ಮುಖ್ಯವಾಗಿ, ವಾಣಿಜ್ಯಿಕ ವ್ಯಾಜ್ಯಗಳ ಸಂಖ್ಯೆ ಕಡಿಮೆ ಮಾಡಬೇಕಿತ್ತು’ ಎಂದು ಹೇಳಿದೆ.

ತೀರಾ ತುರ್ತಾದ, ಮಧ್ಯಂತರ ಪರಿಹಾರದ ಅಗತ್ಯ ಇಲ್ಲದ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಮಾತ್ರ ಮಧ್ಯಸ್ಥಿಕೆ ಪ್ರಕ್ರಿಯೆಯನ್ನು ನಡೆಸುವಂತೆ ಸೆಕ್ಷನ್ 12(ಎ) ಹೇಳುತ್ತದೆ ಎಂದು ನ್ಯಾಯಪೀಠ ವಿವರಿಸಿದೆ. ‘ಕೆಲವು ಬಗೆಯ ಅರ್ಜಿಗಳನ್ನು ಮಾತ್ರ ಪ್ರತ್ಯೇಕಿಸಿ, ಅವುಗಳಿಗೆ ಮಾತ್ರ ಮಧ್ಯಸ್ಥಿಕೆ ಕಡ್ಡಾಯ ಎಂದು ಹೇಳಿರುವುದು ಕಾನೂನಿನ ಉದ್ದೇಶ ಈಡೇರಿಕೆಗೆ ಪೂರಕವಾಗಿ ಇದೆ. ನ್ಯಾಯಾಧೀಶರ ಮೇಲಿನ ಹೊರೆ ತಗ್ಗುತ್ತದೆ. ಅವರು ತೀರಾ ತುರ್ತಾಗಿ ಪರಿಹಾರ ಬೇಕಿರುವ ಪ್ರಕರಣಗಳಿಗೆ, ಈಗಾಗಲೇ ವಿಚಾರಣೆಯ ಹಂತದಲ್ಲಿ ಇರುವ ಪ್ರಕರಣಗಳಿಗೆ ಗಮನ ನೀಡಬಹುದು’ ಎಂದು ಪೀಠ ತಿಳಿಸಿದೆ.

ಮಧ್ಯಸ್ಥಿಕೆ ಯಶಸ್ಸು ಕಂಡರೆ ಅದು ವ್ಯಾಜ್ಯವನ್ನು ಇತ್ಯರ್ಥಪಡಿಸಲು ಪರ್ಯಾಯವಾಗಬಹುದು. ಅದರಿಂದ ಎಲ್ಲರಿಗೂ ಅನುಕೂಲವಾಗಬಹುದು ಎಂದು ಕೋರ್ಟ್ ಹೇಳಿದೆ.

ಯುಪಿಐ ವಹಿವಾಟಿಗೆ ಶುಲ್ಕ?

ಪ್ರಜಾವಾಣಿ ವಾರ್ತೆ

ನವದೆಹಲಿ: ಜನಪ್ರಿಯವಾಗಿರುವ ಯುಪಿಐ ಪಾವತಿ ವ್ಯವಸ್ಥೆ, ಆರ್‌ಟಿಜಿಎಸ್, ನೆಫ್ಟ್, ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್ ಮೂಲಕ ನಡೆಸುವ ಪಾವತಿಗಳಿಗೆ ನಿರ್ದಿಷ್ಟ ಶುಲ್ಕ ವಿಧಿಸಬಹುದೇ ಎಂಬ ಬಗ್ಗೆ ಅಕ್ಟೋಬರ್ 3ಕ್ಕೆ ಮೊದಲು ಅಭಿಪ್ರಾಯ ತಿಳಿಸುವಂತೆ ಆರ್‌ಬಿಐ ಕೋರಿದೆ.

ಈ ಪಾವತಿಗಳಿಗೆ ಶುಲ್ಕ ವಿಧಿಸುವಿಕೆ ಶುರುವಾದರೆ, ದೇಶದಲ್ಲಿ ಡಿಜಿಟಲ್ ಪಾವತಿಗಳ ಜನಪ್ರಿಯತೆಗೆ ಅಡ್ಡಿ ಎದುರಾಗಬಹುದು ಹಾಗೂ ಜನ ನಗದು ಬಳಕೆ ಹೆಚ್ಚು ಮಾಡಬಹುದು ಎಂಬ ವಾದ ಇದೆ. ಹಣ ವರ್ಗಾವಣೆಯ ರೀತಿಯಲ್ಲಿಯೇ ಡೆಬಿಟ್ ಕಾರ್ಡ್ ವಹಿವಾಟುಗಳಿಗೂ ಶುಲ್ಕ ವಿಧಿಸಬೇಕೇ, ರೂಪೆ ಕಾರ್ಡ್‌ಗಳನ್ನು ಇತರ ಡೆಬಿಟ್ ಕಾರ್ಡ್‌ಗಳಿಗಿಂತ ಪ್ರತ್ಯೇಕವಾಗಿ ಕಾಣಬೇಕೇ, ಎಂಡಿಆರ್ ಶುಲ್ಕವು ಏಕರೂಪದ್ದಾಗಿರಬೇಕೇ ಎಂಬ ಪ್ರಶ್ನೆಗಳನ್ನು ಆರ್‌ಬಿಐ ಕೇಳಿದೆ.

ಈಗಿನ ನಿಯಮಗಳ ಪ್ರಕಾರ ಯುಪಿಐ ವಹಿವಾಟುಗಳಿಗೆ ಯಾವುದೇ ಶುಲ್ಕ ವಿಧಿಸುವಂತಿಲ್ಲ. ಅಂದರೆ, ಹಣ ಪಾವತಿ ಮಾಡುವವರಿಗೂ ಶುಲ್ಕ ಇಲ್ಲ, ಹಣ ಸ್ವೀಕರಿಸುವವರೂ ಶುಲ್ಕ ಕೊಡಬೇಕಿಲ್ಲ.

ವಹಿವಾಟಿನ ಮೊತ್ತಕ್ಕೆ ಅನುಗುಣವಾಗಿ ಶುಲ್ಕ ಪಡೆಯಬೇಕೇ ಎಂಬ ಪ್ರಶ್ನೆಯನ್ನೂ ಆರ್‌ಬಿಐ ಕೇಳಿದೆ. ‘ವಹಿವಾಟಿನ ಮೊತ್ತ ಎಷ್ಟೇ ಇದ್ದರೂ ಶುಲ್ಕವು ಒಂದೇ ಆಗಿರಬೇಕೇ ಅಥವಾ ದೊಡ್ಡ ಮೊತ್ತದ ವಹಿವಾಟುಗಳಿಗೆ ಮಾತ್ರ ಶುಲ್ಕ ವಿಧಿಸಿ, ಸಣ್ಣ ವಹಿವಾಟುಗಳಿಗೆ ಶುಲ್ಕದಿಂದ ವಿನಾಯಿತಿ ನೀಡಬಹುದೇ?’ ಎಂದು ಆರ್‌ಬಿಐ ಕೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400- 420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	485
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-46500
ಚನ್ನಗಿರಿ	
ರಾಶಿ	51399-52599
ಚಿತ್ರದುರ್ಗ	
ಆಪಿ	51939-52399
ಬೆಟ್ಟೆ	40219-40659
ಕೆಂಪುಗೋಟು	30809-31210
ರಾಶಿ	51429-51869
ಕಾರ್ಕಳ	
ಹೊಸತು	40000-46500
ಕುಮಟಾ	
ಚಿಪ್ಪು	27009-34639
ಕೋಕ	16099-33230
ಹಳೆಚಾಲಿ	47899-48539
ಹೊಸಚಾಲಿ	37001-43019
ಪುತ್ತೂರು	
ಕೋಕ	11000-26000
ಹೊಸತು	33500-46500
ಸಾಗರ	
ಬಿಳಿಗೋಟು	15170-33100
ಚಾಲಿ	30100-40299
ಕೋಕ	14610-36989
ಕೆಂಪುಗೋಟು	18110-38919
ರಾಶಿ	40166-52599
ಸಿಪ್ಪೆಗೋಟು	11269-23269
ಶಿವಮೊಗ್ಗ	
ಬೆಟ್ಟೆ	50069-55869
ಗೊರಬಲು	18009-39069
ರಾಶಿ	47000-52599
ಸರಕು	60019-80896
ಸಿದ್ದಾಪುರ	
ಬಿಳಿಗೋಟು	30000-34799
ಚಾಲಿ	38099-43799
ಕೋಕ	25060-35119
ಕೆಂಪುಗೋಟು	28000-34669
ರಾಶಿ	47599-50999
ತಟ್ಟಿಬೆಟ್ಟೆ	38890-48899
ಶಿರಸಿ	
ಬೆಟ್ಟೆ	39109-46999
ಬಿಳಿಗೋಟು	26009-35841
ಚಾಲಿ	34399-43907
ರಾಶಿ	41899-52899
ಯಲ್ಲಾಪುರ	
ಬಿಳಿಗೋಟು	28319-35499
ಚಾಲಿ	38010-43050
ಕೋಕ	18000-32699
ಕೆಂಪುಗೋಟು	31289-37009
ರಾಶಿ	50080-57100
ತಟ್ಟಿಬೆಟ್ಟೆ	40870-49200

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16,500	15700	16050	217.45 ಸೆಂಟ್ಸ್
ಎಸಿ	9,100	8200	8950	
ಆರ್‌ಪಿ	9,900	9500	9800	ಲಂಡನ್
ಆರ್‌ಸಿ	4,900	4500	4700	2217 ಡಾಲರ್ಸ್

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹160
ಆರ್‌ಎಸ್‌ಎಸ್-5 ₹151
ಗುಡ್ ಲಾಟ್ ₹143
(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ



ಪುತ್ತೂರು	₹4000-8500
ತುರುವೇಕೆರೆ	₹14000-14100

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹305-650
ದ್ವಿತಳಿ (ಬಿ.ವಿ) ₹391-778

ಮುಂಬೈ ಧಾರಣೆ

ಶೇಂಗಾ

18-8-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670(1670)
ಒಂದು ವಾರದ ಡೆಲಿವರಿ	1665(1665)
ಸೋಯಾ ಕಚ್ಚಾ	1200(1232)
ಪಾಮ್ ವಾರದ ಡೆಲಿವರಿ	1205(1233)
ಸೂರ್ಯಕಾಂತಿ ಎಣ್ಣೆ ಕಚ್ಚಾ	1480(1490)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51900(51700)
ಬೆಳ್ಳಿ ಕೆ.ಜಿ 57150(57700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮುಂಬೈ: ಎಲೆಕ್ಟ್ರಿಕ್ ಡಬಲ್ ಡೆಕರ್ ಬಸ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ



ಮುಂಬೈ: ದೇಶದ ಮೊದಲ ಹವಾನಿಯಂತ್ರಿತ ಎಲೆಕ್ಟ್ರಿಕ್ ಡಬಲ್ ಡೆಕರ್ ಬಸ್‌ಗೆ ಕೇಂದ್ರ ಹೆದ್ದಾರಿ ಮತ್ತು ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಗುರುವಾರ ಮುಂಬೈನಲ್ಲಿ ಚಾಲನೆ ನೀಡಿದರು.

ಬೃಹನ್ ಮುಂಬೈ ವಿದ್ಯುತ್ ಸರಬರಾಜು ಮತ್ತು ಸಾರಿಗೆ ಸಂಸ್ಥೆ (ಬಿಇಎಸ್‌ಟಿ) ಅಧೀನದಲ್ಲಿ ಈ ಬಸ್ ಕಾರ್ಯಾಚರಿಸಲಿದೆ.

ಅಶೋಕ್ ಲೇಲ್ಯಾಂಡ್‌ನ ಸ್ವಿಚ್ ಇಐವಿ22 ಬಸ್ ಅನ್ನು ಭಾರತದಲ್ಲೇ ವಿನ್ಯಾಸಗೊಳಿಸಿ ನಿರ್ಮಿಸಲಾಗಿದೆ.

‘ದೇಶದ ಸಾರಿಗೆ ವ್ಯವಸ್ಥೆಯಲ್ಲಿ ಬದಲಾವಣೆ ತರುವ ಅಗತ್ಯ ಇದೆ. ಪ್ರಯಾಣಿಕರ ಸಾಂದ್ರತೆಯನ್ನು ಗಮನದಲ್ಲಿಟ್ಟುಕೊಂಡು ಎಲೆಕ್ಟ್ರಿಕ್ ವಾಹನಗಳಿಗೆ ಉತ್ತೇಜನ ನೀಡುವ ಗುರಿಯನ್ನು ಸರ್ಕಾರ ಹೊಂದಿದೆ’ ಎಂದು ನಿತಿನ್ ಗಡ್ಕರಿ ಅವರು ಹೇಳಿದ್ದಾರೆ.

ಟ್ರಂಪ್ ಭಾರತ ಭೇಟಿ; ₹38 ಲಕ್ಷ ವೆಚ್ಚ– ಕೇಂದ್ರ ಸರ್ಕಾರ

ನವದೆಹಲಿ(ಪಿಟಿಐ): 2020ರಲ್ಲಿ ಅಮೆರಿಕದ ಅಧ್ಯಕ್ಷರಾಗಿದ್ದ ಡೊನಾಲ್ಡ್ ಟ್ರಂಪ್ ಅವರು ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅವರ 36 ಗಂಟೆಗಳ ಪ್ರವಾಸಕ್ಕೆ ₹ 38 ಕ್ಷ ವೆಚ್ಚ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಡೊನಾಲ್ಡ್ ಟ್ರಂಪ್ ಅವರ ವಾಸ್ತವ್ಯ, ಊಟ, ಪ್ರಯಾಣ, ಮತ್ತಿತರ ಸೌಕರ್ಯಕ್ಕಾಗಿ ₹ 38 ಲಕ್ಷ ವೆಚ್ಚ ಮಾಡಿರುವುದಾಗಿ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಕೇಂದ್ರ ಮಾಹಿತಿ ಆಯೋಗಕ್ಕೆ ತಿಳಿಸಿದೆ.

2020ರಲ್ಲಿ ಫೆಬ್ರುವರಿ 24–25ರಂದು ಟ್ರಂಪ್ ಭಾರತಕ್ಕೆ ಭೇಟಿ ನೀಡಿದ್ದರು. ಅವರ ಜೊತೆ ಪತ್ನಿ ಮೆಲಾನಿಯಾ, ಮಗಳು ಇವಾಂಕ, ಅಳಿಯ ಜೆರೆಡ್ ಸೇರಿದಂತೆ ಅಮೆರಿಕ ಸರ್ಕಾರದ ಉನ್ನತ ಅಧಿಕಾರಿಗಳ ತಂಡ ಭೇಟಿ ಮಾಡಿತ್ತು.

ಟ್ರಂಪ್ ಅವರು ತಮ್ಮ ಕುಟುಂಬದೊಂದಿಗೆ ರೋಡ್ ಶೇ, ಸಬರಮತಿ ಆಶ್ರಮಕ್ಕೆ ಭೇಟಿ, ಅಹಮದಾಬಾದ್‌ನಲ್ಲಿ ನಮಸ್ತೆ ಟ್ರಂಪ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಆಲ್ಟೊ ಹೊಸ ಆವೃತ್ತಿ ಬಿಡುಗಡೆ

ನವದೆಹಲಿ (ಪಿಟಿಐ): ಎಸ್‌ಯುವಿ ಮಾರುಕಟ್ಟೆ ವಿಸ್ತರಣೆ ಕಾಣುತ್ತಿರುವ ಹೊತ್ತಿನಲ್ಲಿಯೂ ದೊಡ್ಡ ಸಂಖ್ಯೆಯ ಗ್ರಾಹಕರು ಹ್ಯಾಚ್‌ಬ್ಯಾಕ್ ಕಾರುಗಳನ್ನು ಬಯಸುತ್ತಿದ್ದು, ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಸಣ್ಣ ಕಾರುಗಳ ವಿಭಾಗದಲ್ಲಿ ಹೊಸ ಉತ್ಪನ್ನಗಳನ್ನು ಪರಿಚಯಿಸುವ ಅಗತ್ಯವಿರುವುದಾಗಿ ಭಾವಿಸಿದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಹಾಗೂ ಸಿಇಒ ಹಿಸಾಶಿ ಟಕೆಯುಚಿ ಹೇಳಿದ್ದಾರೆ.

ಕಂಪನಿಯು ಗುರುವಾರ ‘ಆಲ್ಟೊ ಕೆ10’ನ ಹೊಸ ಆವೃತ್ತಿಯನ್ನು ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 3.99 ಲಕ್ಷದಿಂದ ₹ 5.83 ಲಕ್ಷದವರೆಗೆ ಇದೆ. ಕಂಪನಿಯು ಆರಂಭಿಕ ಹಂತದ ಕಾರುಗಳ ಮಾದರಿ ಸೇರಿದಂತೆ ಎಲ್ಲ ಹಂತಗಳ ಮಾದರಿಗಳ ಮೇಲೆ ಗಮನ ನೀಡುವುದಾಗಿ ಹೇಳಿದೆ.

ಹೊಸ ಆಲ್ಟೊ ಕೆ10 ಕಾರಿನಲ್ಲಿ ಮುಂದಿನ ತಲೆಮಾರಿನ ಕೆ–ಸರಣಿಯ 1 ಲೀಟರ್ ಸಾಮರ್ಥ್ಯದ ಪೆಟ್ರೋಲ್ ಎಂಜಿನ್ ಇರಲಿದೆ. ಇದು ಪ್ರತಿ ಲೀಟರ್ ಪೆಟ್ರೋಲ್‌ಗೆ 24.9 ಕಿ.ಮೀ. ಇಂಧನ ದಕ್ಷತೆ ನೀಡುತ್ತದೆ ಎಂದು ಕಂಪನಿ ಹೇಳಿದೆ.

‘ನಾವು ವಿಶ್ವಾಸಾರ್ಹ, ಕಡಿಮೆ ವೆಚ್ಚದ ಮತ್ತು ಆಧುನಿಕ ತಂತ್ರಜ್ಞಾನ ಹೊಂದಿರುವ ಕಾರುಗಳನ್ನು ಭಾರತೀಯರಿಗೆ ಒದಗಿಸುವ ಉದ್ದೇಶದಿಂದ ದೇಶದಲ್ಲಿ ಕಾರ್ಯಾಚರಣೆ ಆರಂಭಿಸಿ 2022ಕ್ಕೆ 40 ವರ್ಷಗಳು ತುಂಬಿವೆ’ ಎಂದು ಟಕೆಯುಚಿ ಅವರು ಹೇಳಿದ್ದಾರೆ.



ನವದೆಹಲಿಯಲ್ಲಿ ಗುರುವಾರ ನಡೆದ ‘ಆಲ್ಟೊ ಕೆ10’ ಹೊಸ ಆವೃತ್ತಿಯ ಬಿಡುಗಡೆ ಸಮಾರಂಭದಲ್ಲಿ ಮಾರುತಿ ಸುಜುಕಿ ಎಂ.ಡಿ. ಹಾಗೂ ಸಿಇಒ ಹಿಸಾಶಿ ಟಕೆಯುಚಿ –ಪಿಟಿಐ ಚಿತ್ರ


ಅತ್ಯಾಚಾರ ಪ್ರಕರಣ: ‘ಸುಪ್ರೀಂ’ ಮೊರೆ ಹೋದ ಶಹನವಾಜ್

ನವದೆಹಲಿ (ಪಿಟಿಐ): ಬಿಜೆಪಿ ಹಿರಿಯ ನಾಯಕ, ಕೇಂದ್ರದ ಮಾಜಿ ಸಚಿವ ಶಹನವಾಜ್ ಹುಸೇನ್ ಅವರು ತಮ್ಮ ವಿರುದ್ಧದ ಅತ್ಯಾಚಾರ ಆರೋಪ ಸಂಬಂಧ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಲು ದೆಹಲಿ ಹೈಕೋರ್ಟ್ ನೀಡಿದ ಆದೇಶ ಪ್ರಶ್ನಿಸಿ ಗುರುವಾರ ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರ ನೇತೃತ್ವದ ಪೀಠದ ಮುಂದೆ ಈ ಅರ್ಜಿಯ ಪ್ರಸ್ತಾಪ ಬಂದಾಗ, ತುರ್ತು ವಿಚಾರಣೆಗೆ ಸಮ್ಮತಿಸಿ, ಮುಂದಿನ ವಾರವೇ ವಿಚಾರಣೆ ನಡೆಸುವುದಾಗಿ ಹೇಳಿದೆ.

ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿದ್ದ ಶಹನವಾಜ್ ಅವರಿಗೆ ಬುಧವಾರ ಹೈಕೋರ್ಟ್‌ನಲ್ಲೂ ಹಿನ್ನಡೆಯಾಗಿದೆ. ನ್ಯಾಯಮೂರ್ತಿ ಆಶಾ ಮೆನನ್ ಅವರಿದ್ದ ಏಕ ಸದಸ್ಯ ಪೀಠವು, ಆರೋಪಿ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಮೂರು ತಿಂಗಳೊಳಗೆ ತನಿಖೆ ಪೂರ್ಣಗೊಳಿಸಿ, ಸೆಕ್ಷನ್ 173ರ ಅಡಿಯಲ್ಲಿ ಸಮಗ್ರ ವರದಿ ಸಲ್ಲಿಸಬೇಕೆಂದು ದೆಹಲಿ ಪೊಲೀಸರಿಗೆ ನಿರ್ದೇಶನ ನೀಡಿತ್ತು. 2018ರ ಏಪ್ರಿಲ್‌ನಲ್ಲಿ ದೆಹಲಿಯ ಫಾರ್ಮ್‌ಹೌಸ್‌ನಲ್ಲಿ ಹುಸೇನ್ ಅವರು ಮಾದಕ ದ್ರವ್ಯ ಕುಡಿಸಿ ಅತ್ಯಾಚಾರವೆಸಗಿ, ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ದೆಹಲಿಯ ಸಂತ್ರಸ್ತ ಮಹಿಳೆ ದೂರು ನೀಡಿದ್ದರು.





ಶ್ರೀಕೃಷ್ಣ ಎಂಬ ಪ್ರಸಿದ್ಧ ರಹಸ್ಯ

• ಎಸ್. ಸೂರ್ಯಪ್ರಕಾಶ ಪಂಡಿತ್

ಮತ್ತೊಮ್ಮೆ ಕೃಷ್ಣಾಷ್ಟಮಿ ಬಂದಿದೆ. ಕೃಷ್ಣಾಷ್ಟಮಿ ವರ್ಷಕ್ಕೆ ಒಮ್ಮೆ ಬರಬಹುದು; ಆದರೆ ಶ್ರೀಕೃಷ್ಣ ಮಾತ್ರ ನಮ್ಮೊಂದಿಗೆ ಎಂದೆಂದಿಗೂ ಇರುವ. ನಮ್ಮ ಪ್ರೀತಿಯಲ್ಲಿ, ಯೋಚನೆಯಲ್ಲಿ, ಯೋಜನೆಯಲ್ಲಿ, ತುಂಟಾಟದಲ್ಲಿ, ನಗುವಿನಲ್ಲಿ, ಅಳುವಿನಲ್ಲಿ, ಕದನದಲ್ಲಿ, ಸರಸದಲ್ಲಿ, ವಿರಸದಲ್ಲಿ – ಹೀಗೆ ನಮ್ಮೆಲ್ಲ ಭಾವಗಳಲ್ಲೂ ಶ್ರೀಕೃಷ್ಣತತ್ತ್ವ ಬೆಸೆದುಕೊಂಡಿರುತ್ತದೆ. ಸ್ನೇಹಿತನಾಗಿ, ಗುರುವಾಗಿ, ಪ್ರೇಮಿಯಾಗಿ, ಅಣ್ಣನಾಗಿ, ಮಗನಾಗಿ – ಹೀಗೆ ಬದುಕಿನ ಎಲ್ಲ ಭಾವಗಳ ಸಾರಥಿಯಾಗಿ ಅವನು ಒದಗುತ್ತಲೇ ಇರುತ್ತಾನೆ. ಕೃಷ್ಣನಷ್ಟು ನಮ್ಮ ಜೀವನವನ್ನು ಸಮಗ್ರವಾಗಿ ಆವರಿಸಿಕೊಂಡಿರುವ ಅಲೌಕಿಕ ವಿವರ ಇನ್ನೊಂದಿರಲಾರದು. ಸದಾ ಕಾಲ ಮನುಷ್ಯನಾಗಲು ತವಕಿಸುತ್ತಲೇ ಇರುವ ದೈವ ಎಂದರೆ ಅದು ಶ್ರೀಕೃಷ್ಣ.

ಶ್ರೀಕೃಷ್ಣ ಎಂಬುದು ಪ್ರಸಿದ್ಧ ರಹಸ್ಯ – ಎಂಬ ಡಿವಿಜಿ ಮಾತು ಮತ್ತೆ ಮತ್ತೆ ನೆನಪಾಗುತ್ತಲೇ ಇರುತ್ತದೆ. ‘ಪ್ರಸಿದ್ಧ’ ಎಂಬುದು ರಹಸ್ಯವಾಗಿರಲು ಸಾಧ್ಯವಿಲ್ಲ; ‘ರಹಸ್ಯ’ವು ಪ್ರಸಿದ್ಧವಾಗಿರಲು ಸಾಧ್ಯವಿಲ್ಲ. ಹಾಗಾದರೆ ಈ ‘ಪ್ರಸಿದ್ಧ ರಹಸ್ಯ’ ಎಂಬುದರ ಸ್ವಾರಸ್ಯವೇನು? ಶ್ರೀಕೃಷ್ಣನು ಪ್ರಸಿದ್ಧನೂ ಹೌದು, ರಹಸ್ಯನೂ ಹೌದು! ಇದು ಹೇಗೆ?



ಲೀಲಾಶುಕನ ಪದ್ಯವೊಂದು ಇಲ್ಲಿ ಒದಗುತ್ತದೆ:

ಗೋಪಾಲಾಜಿರ ಕರ್ದಮೇ ವಿಹರಸೇ
ವಿಪ್ರಾಧ್ವರೇ ಲಜ್ಜಸೇ
ಬ್ರೂಷೇ ಗೋಧನ ಹುಂಕೃತೈಃ ಸ್ತುತಿಶತೈ-
ರ್ಮೌನಂ ವಿಧತ್ಸೇ ವಿದಾಮ್
ದಾಸ್ಯಂ ಗೋಕುಲಪುಂಶ್ಚಲೀಷು ಕುರುಷೇ
ಸ್ವಾಮ್ಯಂ ನ ದಾತಾತ್ಮಸು
ಜ್ಞಾತಂ ಕೃಷ್ಣ ತವಾಂಘ್ರಿಪಂಕಜಯುಗಂ
ಪ್ರೇಮಾಚಲಂಮಂಜುಲಮ್

‘ಗೋಪಾಲರ ಅಂಗಳದ ಕೆಸರಿನಲ್ಲಿ ಆಟ ಆಡುವೆ; ಆದರೆ ಜ್ಞಾನಿಗಳ ಮಧ್ಯೆ ಸೇರಲು ಸಂಕೋಚಿಸುತ್ತೀಯೆ! ಗೋವುಗಳು ‘ಹುಂ’ ಎಂದು ಕರೆದರೂ ಸಾಕು, ಅವುಗಳೊಂದಿಗೆ ಮಾತನಾಡುತ್ತೀಯೆ; ಆದರೆ ವಿದ್ವಾಂಸರ ನೂರಾರು ಸ್ತುತಿಗಳಿಗೆ ಕಿವಿಗೊಡದೆ ಮೌನವಾಗಿರುತ್ತೀಯೆ! ಗೋಕುಲದ ಚಂಚಲೆಯರಾದ ಪ್ರಣಯಿನಿಗಳ ದಾಸನಾಗಲೂ ಸಿದ್ಧವಾಗುವೆ; ಆದರೆ ಕಠೋರ ಸಾಧಕರ ಒಡೆತನ ಬೇಡ ಎನ್ನುವೆ! ಕೃಷ್ಣ!! ತಿಳಿಯಿತು, ನಿನ್ನ ಪಾದಕಮಲಗಳ ಮಧುರವಾದ ಪ್ರೇಮದ ಗುಟ್ಟು’ – ಇದು ಈ ಪದ್ಯದ ಭಾವ.



ನಮ್ಮ ಎಣಿಕೆಗಳಿಗೆ ಮೀರಿದ ತತ್ತ್ವ ಶ್ರೀಕೃಷ್ಣತತ್ತ್ವ. ಅವನನ್ನು ನಾವು ಎಲ್ಲೆಲ್ಲೋ ಹುಡುಕುತ್ತೇವೆ; ಆದರೆ ಅವನು ಇಲ್ಲೇ, ನಮ್ಮ ಸನಿಹದಲ್ಲಿಯೇ, ನಮ್ಮಂತೆಯೇ ಸಾಮಾನ್ಯರಲ್ಲಿ ಸಾಮಾನ್ಯನಾಗಿ ನೆಲೆಗೊಂಡಿರುತ್ತಾನೆ. ಕೃಷ್ಣ ನಮ್ಮ ಬದುಕಿಗೆ ಸದಾ ಹತ್ತಿರವಾಗಿರುತ್ತಾನೆ.

ಶ್ರೀಕೃಷ್ಣನು ಪ್ರಸಿದ್ಧನಾದರೂ ಹೇಗೆ ರಹಸ್ಯನಾಗಿದ್ದಾನೆ – ಎಂಬುದನ್ನು ಲೀಲಾಶುಕನೇ ಇನ್ನೊಂದು ಪದ್ಯದಲ್ಲಿ ಸೊಗಸಾಗಿ ವರ್ಣಿಸಿದ್ದಾನೆ:

ಬಾಲೋಽಪಿ ಶೈಲೋದ್ಧರಣಾಗ್ರಪಾಣಿಃ
ನೀಲೋಽಪಿ ನೀರಂಧ್ರತಮಃ ಪ್ರದೀಪಃ
ಧೀರೋಽಪಿ ರಾಧಾನಯನಾವಬದ್ಧೋ
ಜಾರೋಽಪಿ ಸಂಸಾರಹರಃ ಕುತಸ್ತ್ವಮ್

‘ಇದು ಹೇಗೆ ಸಾಧ್ಯ – ನೀನು ಇನ್ನೂ ಚಿಕ್ಕ ಹುಡುಗ, ಆದರೆ ಕೈಬೆರಳಿನ ಕೊನೆಯಿಂದ ಪರ್ವತವನ್ನೇ ಎತ್ತಿಹಿಡಿದಿರುವೆ; ನಿನ್ನ ಮೈ ಬಣ್ಣವೇ ಕಪ್ಪು, ಆದರೆ ಗಾಢವಾದ ಕತ್ತಲಿನಲ್ಲಿಯೂ ಹೊಳೆಯುವ ಬೆಳಕಾಗಿ ತೋರುತ್ತಿರುವೆ; ನಿನ್ನನ್ನು ಯಾರೂ ಮಣಿಸಲು ಸಾಧ್ಯವಿಲ್ಲದಂಥ ಧೀರ ನೀನು, ಆದರೆ ರಾಧೆಯ ಕಣ್ನೋಟಕ್ಕೇ ಕಟ್ಟುಬಿದ್ದಿರುವೆಯಲ್ಲ? ನೀನೇ ಒಬ್ಬ ಜಾರ; ಆದರೆ ಎಲ್ಲರನ್ನೂ ಸಂಸಾರದಿಂದ ಪಾರುಮಾಡುವ ತತ್ತ್ವವಾಗಿದ್ದೀಯೆ! ಇದು ಹೇಗೆ ಸಾಧ್ಯ?!’

ಅಲೌಕಿಕ ತತ್ತ್ವದ ದಿಟವಾದ ಲಕ್ಷಣದ ಮೂರ್ತರೂಪವೇ ಶ್ರೀಕೃಷ್ಣತತ್ತ್ವ. ಇದು ಅರ್ಥವಾದಂತಿರುತ್ತದೆ; ಆದರೆ ತಿಳಿಯಲು ಪ್ರಯತ್ನಿಸಿದರೆ ಸೋಲುತ್ತೇವೆ. ಅರ್ಥವಾಗುತ್ತಿಲ್ಲ ಎಂದು ವಿಚಾರಿಸಲು ತೊಡಗಿದರೆ, ‘ಇದು ಇಷ್ಟೇ’ ಎನ್ನುವಂತೆ ಕಣ್ಣೆದುರಿನಲ್ಲಿ ನಿಂತಿರುತ್ತದೆ. ಇದು ನಮ್ಮ ಬದುಕಲ್ಲದೆ ಮತ್ತೇನು? ನಮ್ಮ ಸೋಲು–ಗೆಲುವುಗಳ ಈ ಕಣ್ಣಾಮುಚ್ಚಾಲೆಯಾಟದ ಮೂಲವಾದರೂ ಶ್ರೀಕೃಷ್ಣ ಎಂಬ ಈ ಜೀವನತತ್ತ್ವವೇ ಹೌದು. ಹೀಗಾಗಿಯೇ ‘ಗೀತೆ’ಯ ಕೊನೆಯಲ್ಲಿ ಅವನೇ ಹೇಳಿದ ಮಾತು: ‘ಎಲ್ಲ ಧರ್ಮಗಳನ್ನೂ ತೊರೆದು ನನ್ನಲ್ಲಿ ಒಂದಾಗು’. ಕೃಷ್ಣನಲ್ಲಿ ಒಂದಾಗುವುದು ಎಂದರೆ ನಮ್ಮ ಜೀವನ ಎಂಬ ‘ಪ್ರಸಿದ್ಧ ರಹಸ್ಯ’ದಲ್ಲಿ ಒಂದಾಗುವುದು. ಈ ಐಕ್ಯಾನುಭವದ ಫಲವೇ ಜೀವನದ ಉತ್ಸವ, ಸಂಭ್ರಮ. ಈ ಉತ್ಸವ–ಸಂಭ್ರಮಗಳೇ ಶ್ರೀಕೃಷ್ಣತತ್ತ್ವ. ❖

ಟಿ20: ಗುಲ್ಬರ್ಗಾ ಮಿಸ್ಟಿಕ್ಸ್‌ಗೆ ಮಣಿದ ಬೆಂಗಳೂರು ಬ್ಲಾಸ್ಟರ್ಸ್

ಮತ್ತೆ ಮಿಂಚಿದ ದೇವದತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಆಟ ಮುಂದುವರಿಸಿದ ದೇವದತ್ತ ಪಡಿಕ್ಕಲ್ ಅವರು ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಗುಲ್ಬರ್ಗಾ ಮಿಸ್ಟಿಕ್ಸ್ ತಂಡಕ್ಕೆ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ ಆರು ವಿಕೆಟ್‌ಗಳ ಜಯ ತಂದಿತ್ತರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಬ್ಲಾಸ್ಟರ್ಸ್ 20 ಓವರ್‌ಗಳಲ್ಲಿ 9ಕ್ಕೆ 144 ರನ್ ಗಳಿಸಿದರೆ, ಗುಲ್ಬರ್ಗಾ ತಂಡ 17.3 ಓವರ್‌ಗಳಲ್ಲಿ 4 ವಿಕೆಟ್‌ಗೆ 150 ರನ್ ಗಳಿಸಿ ಜಯ ಸಾಧಿಸಿತು.

ಅಜೇಯ 78 ರನ್ ಗಳಿಸಿದ ಪಡಿಕ್ಕಲ್ ಹಾಗೂ ಚುರುಕಿನ ಬೌಲಿಂಗ್ ಪ್ರದರ್ಶನ ನೀಡಿದ ವಿದ್ವತ್ ಕಾವೇರಪ್ಪ (31ಕ್ಕೆ 3) ಮತ್ತು ಮನೋಜ್ ಭಾಂಡಗೆ (23ಕ್ಕೆ 3) ಅವರು ಗುಲ್ಬರ್ಗಾ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಆಡಿದ ಏಳು ಪಂದ್ಯಗಳಲ್ಲಿ ನಾಲ್ಕನೇ ಗೆಲುವು ಪಡೆದ ಮಿಸ್ಟಿಕ್ಸ್ ತಂಡ ಎಂಟು ಪಾಯಿಂಟ್‌ಗಳೊಂದಿಗೆ ಜಂಟಿ ಎರಡನೇ ಸ್ಥಾನಕ್ಕೇರಿತು. ಸೋತರೂ ಬ್ಲಾಸ್ಟರ್ಸ್ ತಂಡ 10 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನದಲ್ಲಿದೆ.

ಸಾಧಾರಣ ಗುರಿ ಬೆನ್ನಟ್ಟಿದ ಗುಲ್ಬರ್ಗಾ ತಂಡ ರೋಹನ್ ಪಾಟೀಲ್ (1) ಅವರನ್ನು ಬೇಗನೇ ಕಳೆದುಕೊಂಡಿತು. ಆದರೆ ಪಡಿಕ್ಕಲ್ ಅವರು ಜಸ್ವಂತ್ ಆಚಾರ್ಯ (18), ಕೆ.ಎಲ್.ಶ್ರೀಜಿತ್ ಮತ್ತು ಮನೀಷ್ ಪಾಂಡೆ ನೆರವಿನಿಂದ ಇನಿಂಗ್ಸ್‌ಗೆ ಬಲ ತುಂಬಿ ಗೆಲುವಿನತ್ತ ಮುನ್ನಡೆಸಿದರು.



ಮುಖ್ಯಾಂಶಗಳು
- ಬೌಲಿಂಗ್‌ನಲ್ಲಿ ಮಿನುಗಿದ ವಿದ್ವತ್ ಕಾವೇರಪ್ಪ
- ಪಾಯಿಂಟ್ಸ್ ಪಟ್ಟಿಯಲ್ಲಿ ಜಂಟಿ 2ನೇ ಸ್ಥಾನಕ್ಕೆ ಗುಲ್ಬರ್ಗಾ

ಅಜೇಯ ಅರ್ಧಶತಕ ಗಳಿಸಿದ ದೇವದತ್ತ ಪಡಿಕ್ಕಲ್

61 ಎಸೆತಗಳನ್ನು ಎದುರಿಸಿದ ಅವರು 7 ಬೌಂಡರಿ ಮತ್ತು ನಾಲ್ಕು ಸಿಕ್ಸರ್ ಹೊಡೆದರು.

ಬ್ಯಾಟಿಂಗ್ ವೈಫಲ್ಯ: ಹಿಂದಿನ ಪಂದ್ಯದಲ್ಲಿ ಅಬ್ಬರದ ಆಟವಾಡಿದ್ದ ಬ್ಲಾಸ್ಟರ್ಸ್ ತಂಡ ಬ್ಯಾಟಿಂಗ್ ವೈಫಲ್ಯ ಅನುಭವಿಸಿತು. ನಾಯಕ ಮಯಂಕ್ ಅಗರವಾಲ್ (28) 'ಟಾಪ್ ಸ್ಕೋರರ್' ಎನಿಸಿಕೊಂಡರು.

ಕಳೆದ ಪಂದ್ಯದಲ್ಲಿ ಶತಕ ಗಳಿಸಿದ್ದ ಎಲ್.ಆರ್.ಚೇತನ್ ಕೇವಲ ಆರು ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಅನಿರುದ್ಧ ಜೋಶಿ (4) ಕೂಡಾ ಬೇಗನೇ ಔಟಾದರು.

ಮತ್ತೊಂದು ಪಂದ್ಯದಲ್ಲಿ ಪವನ್ ದೇಶಪಾಂಡೆ ಅವರ ಬ್ಯಾಟಿಂಗ್ (57) ಹಾಗೂ ವಿದ್ಯಾಧರ ಪಾಟೀಲ್ ಅವರ ಮಾರಕ ಬೌಲಿಂಗ್ (24ಕ್ಕೆ 4) ನೆರವಿನಿಂದ ಮೈಸೂರು ವಾರಿಯರ್ಸ್ ತಂಡ ಹುಬ್ಬಳ್ಳಿ ಟೈಗರ್ಸ್ ವಿರುದ್ಧ 2 ರನ್‌ಗಳ ರೋಚಕ ಜಯ ದಾಖಲಿಸಿತು.

ಸಂಕ್ಷಿಪ್ತ ಸ್ಕೋರ್: ಬೆಂಗಳೂರು ಬ್ಲಾಸ್ಟರ್ಸ್ 20 ಓವರ್‌ಗಳಲ್ಲಿ 9ಕ್ಕೆ 144 (ಮಯಂಕ್ ಅಗರವಾಲ್ 28, ಕೆ.ವಿ. ಅನೀಶ್ 20, ಎಸ್.ರಕ್ಷಿತ್ 16, ಕ್ರಾಂತಿ ಕುಮಾರ್ 17, ಜೆ.ಸುಚಿತ್ 17, ವಿದ್ವತ್ ಕಾವೇರಪ್ಪ 31ಕ್ಕೆ 3, ಮನೋಜ್ ಭಾಂಡಗೆ 23ಕ್ಕೆ 3, ಕುಶಾಲ್ ವಾಧ್ವಾನಿ 17ಕ್ಕೆ 2). ಗುಲ್ಬರ್ಗಾ ಮಿಸ್ಟಿಕ್ಸ್ 17.3 ಓವರ್‌ಗಳಲ್ಲಿ 4ಕ್ಕೆ 150 (ದೇವದತ್ತ ಪಡಿಕ್ಕಲ್ ಔಟಾಗದೆ 78, ಜೆಸ್ವಂತ್ ಆಚಾರ್ಯ 18, ಕೆ.ಎಲ್.ಶ್ರೀಜಿತ್ 12, ಮನೀಷ್ ಪಾಂಡೆ 13, ರೋನಿತ್ ಮೋರೆ 18ಕ್ಕೆ 1, ಕ್ರಾಂತಿ ಕುಮಾರ್ 16ಕ್ಕೆ 1) ಫಲಿತಾಂಶ: ಮಿಸ್ಟಿಕ್ಸ್‌ಗೆ ಆರು ವಿಕೆಟ್ ಗೆಲುವು


ಇಂದಿನ ಪಂದ್ಯಗಳು

ಹುಬ್ಬಳ್ಳಿ ಟೈಗರ್ಸ್–ಶಿವಮೊಗ್ಗ ಸ್ಟ್ರೈಕರ್ಸ್
ಮಧ್ಯಾಹ್ನ 3ರಿಂದ

ಮಂಗಳೂರು ಯುನೈಟೆಡ್–ಗುಲ್ಬರ್ಗಾ ಮಿಸ್ಟಿಕ್ಸ್
ರಾತ್ರಿ 7ರಿಂದ

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಫ್ಯಾನ್ ಕೋಡ್ ಆ್ಯಪ್

ಬಾಕ್ಸಿಂಗ್: ವಿಜೇಂದರ್‌ಗೆ ಜಯ



ರಾಯ್‌ಪುರ, ಛತ್ತೀಸಗಡ (ಪಿಟಿಐ): ಭಾರತದ ಬಾಕ್ಸರ್ ವಿಜೇಂದರ್ ಸಿಂಗ್ ಅವರು ಗೆಲುವಿನ ಹಳಿಗೆ ಮರಳಿದ್ದಾರೆ. ವಿಜೇಂದರ್ ಬುಧವಾರ ಇಲ್ಲಿ ನಡೆದ ಬೌಟ್‌ನಲ್ಲಿ ಅವರು ಘಾನಾದ ಎಲಿಯಾಸು ಸುಲ್ಲಿ ಅವರನ್ನು ಮಣಿಸಿದರು.

ವಿಜೇಂದರ್, ಆರು ಸುತ್ತುಗಳ ಸ್ಪರ್ಧೆಯಲ್ಲಿ ಎರಡನೇ ಸುತ್ತಿನಲ್ಲೇ ಜಯದ ಸಿಹಿ ಸವಿದರು. 2008ರ ಬೀಜಿಂಗ್ ಒಲಿಂಪಿಕ್ ಕಂಚಿನ ಪದಕ ವಿಜೇತ ಭಾರತದ ಬಾಕ್ಸರ್ ಐದು ನಿಮಿಷ ಏಳು ಸೆಕೆಂಡುಗಳಲ್ಲಿ ಎದುರಾಳಿಯನ್ನು ಸೋಲಿಸಿದರು.

ಕಳೆದ ವರ್ಷ ಮಾರ್ಚ್‌ನಲ್ಲಿ ನಡೆದಿದ್ದ ಬೌಟ್‌ನಲ್ಲಿ ರಷ್ಯಾದ ಆರ್ಟಿಶ್ ಲೊಪ್ಸನ್ ಎದುರು ವಿಜೇಂದರ್ ಸೋತಿದ್ದರು. ಪ್ರೊ ಬಾಕ್ಸಿಂಗ್‌ನಲ್ಲಿ ಅದೊಂದೇ ಅವರು ಸೋತಿರುವ ಬೌಟ್ ಆಗಿದೆ.

ಪ್ಯಾರಾ ಶೂಟಿಂಗ್ ರಾಹುಲ್‌ಗೆ ಚಿನ್ನ

ಚಾಂಗ್ವಾನ್, ದಕ್ಷಿಣ ಕೊರಿಯಾ (ಪಿಟಿಐ): ಭಾರತದ ರಾಹುಲ್ ಜಾಕಡ್ ಅವರು ವಿಶ್ವ ಪ್ಯಾರಾ ಶೂಟಿಂಗ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಇಲ್ಲಿ ನಡೆಯುತ್ತಿರುವ ವಿಶ್ವಕಪ್‌ನ ಮಿಕ್ಸೆಡ್ 25 ಮೀಟರ್ಸ್ ಪಿಸ್ತೂಲ್ ಎಸ್‌ಎಚ್1 ವಿಭಾಗದಲ್ಲಿ ರಾಹುಲ್ ಅವರಿಗೆ ಪದಕ ಒಲಿದಿದೆ. ಇದೇ ವಿಭಾಗದಲ್ಲಿ ಪೂಜಾ ಅಗರವಾಲ್ ಕಂಚು ಗೆದ್ದರು.

ಅವನಿ ಲೇಖರ ಮಹಿಳೆಯರ 10 ಮೀಟರ್ಸ್ ಏರ್ ರೈಫಲ್ ಎಸ್‌ಎಚ್1 ವಿಭಾಗದಲ್ಲಿ ಬೆಳ್ಳಿ ಪದಕ ಜಯಿಸಿದರು.

ಸಾಕಷ್ಟು ಬಾರಿ ಒಂಟಿತನ ಕಾಡಿದೆ: ಕೊಹ್ಲಿ

ನವದೆಹಲಿ (ಎಎಫ್‌ಪಿ): ಸುದೀರ್ಘ ಅವಧಿಯಿಂದ ಫಾರ್ಮ್ ಕಂಡುಕೊಳ್ಳಲು ಪರದಾಡುತ್ತಿರುವ ಭಾರತ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ, 'ನನ್ನನ್ನು ಬೆಂಬಲಿಸುವ ಜನರು ಸುತ್ತಲು ಇದ್ದರೂ, ಒಂಟಿತನದ ಅನುಭವ ಉಂಟಾಗಿತ್ತು' ಎಂದು ಹೇಳಿಕೊಂಡಿದ್ದಾರೆ.



ವಿರಾಟ್ ಕೊಹ್ಲಿ

ವೃತ್ತಿಜೀವನದಲ್ಲಿ ತಾವು ಎದುರಿಸಿದ ಒತ್ತಡ ಮತ್ತು ಅದರಿಂದ ಮಾನಸಿಕ ಆರೋಗ್ಯದ ಮೇಲೆ ಆಗಿರುವ ಪರಿಣಾಮಗಳ ಬಗ್ಗೆ ಅವರು ಆಂಗ್ಲ ಪತ್ರಿಕೆಯೊಂದಕ್ಕೆ ನೀಡಿರುವ ಸಂದರ್ಶನದಲ್ಲಿ ಮುಕ್ತವಾಗಿ ಮಾತನಾಡಿದ್ದಾರೆ.

'ನನ್ನನ್ನು ಬೆಂಬಲಿಸುವ ಮತ್ತು ತುಂಬಾ ಇಷ್ಟಪಡುವ ಜನರು ಕೊಠಡಿ ತುಂಬಾ ಇದ್ದರೂ, ಅವರ ನಡುವೆಯೇ ನನಗೆ ಒಂಟಿತನ ಕಾಡಿತ್ತು. ಇತರ ಸಾಕಷ್ಟು ಮಂದಿ ಇದೇ ರೀತಿಯ ಪರಿಸ್ಥಿತಿ ಎದುರಿಸಿರಬಹುದು ಎಂಬ ಭಾವನೆ ನನ್ನದು' ಎಂದಿದ್ದಾರೆ.

'ಕ್ರೀಡಾಪಟುಗಳಿಗೆ ಎದುರಾಗುವ ನಿರಂತರ ಒತ್ತಡ, ಮಾನಸಿಕ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡುತ್ತದೆ. ಖಂಡಿತವಾಗಿಯೂ ಇದೊಂದು ಗಂಭೀರ ಸಮಸ್ಯೆ. ಎಲ್ಲ ಸಂದರ್ಭಗಳಲ್ಲೂ ನಾವು ಬಲಶಾಲಿಯಾಗಿ ನಿಲ್ಲಬೇಕೆಂದು ಬಯಸಿದರೂ, ಒತ್ತಡವು ನಿಮಗೆ ಹಿನ್ನಡೆ ಉಂಟುಮಾಡಬಲ್ಲದು' ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಕ್ರೀಡಾಪಟುಗಳು ಒತ್ತಡದಿಂದ ಹೊರಬರಲು ವಿಶ್ರಾಂತಿಯ ಮೊರೆಹೋಗಬೇಕು ಎಂಬ ಸಲಹೆಯನ್ನೂ ಅವರು ನೀಡಿದ್ದಾರೆ. 2014ರ ಇಂಗ್ಲೆಂಡ್ ಪ್ರವಾಸದ ಸಂದರ್ಭದಲ್ಲಿ ನಿರೀಕ್ಷೆಯಂತೆ ರನ್ ಗಳಿಸದೇ ಇದ್ದಾಗ ಖಿನ್ನತೆಗೆ ಒಳಗಾಗಿದ್ದೆ ಎಂಬುದನ್ನು ಕೊಹ್ಲಿ ಕೆಲ ತಿಂಗಳ ಹಿಂದೆ ಬಹಿರಂಗಪಡಿಸಿದ್ದರು. ಅದಾದ ಬಳಿಕ ತಾವು ಅನುಭವಿಸುತ್ತಿರುವ ಒತ್ತಡದ ಬಗ್ಗೆ ಅವರು ಮಾತನಾಡಿದ್ದು ಇದೇ ಮೊದಲು.

ಮುಂಬರುವ ಏಷ್ಯಾಕಪ್ ಟೂರ್ನಿಗೆ ಪ್ರಕಟಿಸಿರುವ ತಂಡದಲ್ಲಿ ಅವರಿಗೆ ಸ್ಥಾನ ನೀಡಲಾಗಿದೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 14 ವರ್ಷ

ಕೊಹ್ಲಿ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿ ಆ.18ಕ್ಕೆ ಹದಿನಾಲ್ಕು ವರ್ಷಗಳು ಪೂರ್ಣಗೊಂಡವು. ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ವಿಶೇಷ ವಿಡಿಯೊವೊಂದನ್ನು ಹಂಚಿಕೊಳ್ಳುವ ಮೂಲಕ ಅವರು ಈ ಸಂಭ್ರಮವನ್ನು ಆಚರಿಸಿದ್ದಾರೆ.

'14 ವರ್ಷಗಳ ಹಿಂದೆ ಈ ಪಯಣ ಆರಂಭವಾಯಿತು. ಇವೆಲ್ಲವೂ ಹೆಮ್ಮೆಯ ವಿಚಾರವಾಗಿದೆ' ಎಂದು ವಿಡಿಯೊ ಜತೆ ಬರೆದುಕೊಂಡಿದ್ದಾರೆ. ಅವರ ವೃತ್ತಿಜೀವನದ ಸ್ಮರಣೀಯ ಗಳಿಗೆಯ ತುಣುಕುಗಳು ವಿಡಿಯೊದಲ್ಲಿದೆ.

ಕೊಹ್ಲಿ 2008ರ ಆ.18 ರಂದು ದಂಬುಲಾದಲ್ಲಿ ಶ್ರೀಲಂಕಾ ವಿರುದ್ಧದ ಏಕದಿನ ಪಂದ್ಯದೊಂದಿಗೆ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು.



ಮಲ್ನಾಡ್ ಫಾಲ್ಕನ್ಸ್ ತಂಡದ ಪೃಥ್ವಿ ರಾಯ್ (ಎಡ) ಮತ್ತು ವೆಂಕಟೇಶ್ ಪ್ರಸಾದ್

ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್: ಮಿಂಚಿದ ಮಿಥುನ್

ಮಲ್ನಾಡ್ ಫಾಲ್ಕನ್ಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ನಾಡ್ ಫಾಲ್ಕನ್ಸ್ ತಂಡವು ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್‌ನ ಸೂಪರ್ ಲೀಗ್ ಹಂತದಲ್ಲಿ ಶುಭಾರಂಭ ಮಾಡಿತು. ಗುರುವಾರ ನಡೆದ ಸೆಣಸಾಟದಲ್ಲಿ ತಂಡವು 6–1ರಿಂದ ಮಂಡ್ಯ ಬುಲ್ಸ್ ತಂಡಕ್ಕೆ ಸೋಲುಣಿಸಿತು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ (ಕೆಬಿಎ) ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಫಾಲ್ಕನ್ಸ್ ಪಾರಮ್ಯ ಮೆರೆಯಿತು.

ಫಾಲ್ಕನ್ಸ್ ಸೋಲಿನೊಂದಿಗೆ ಅಭಿಯಾನ ಆರಂಭಿಸಿತು. ಮಹಿಳಾ ಸಿಂಗಲ್ಸ್ ಹಣಾಹಣಿಯಲ್ಲಿ ಫಾಲ್ಕನ್ಸ್‌ನ ಧ್ರುತಿ ಯತೀಶ್ 15-12, 12-15, 10-15ರಿಂದ ಅನನ್ಯಾ ಪ್ರವೀಣ್ ಎದುರು ಎಡವಿದರು. ಪುರುಷರ ಡಬಲ್ಸ್‌ನಲ್ಲೂ ಪೃಥ್ವಿ ರಾಯ್–ವೆಂಕಟೇಶ್ ಪ್ರಸಾದ್ ಜೋಡಿ 5-15, 15-8, 12-15ರಿಂದ ಆಶಿತ್ ಸೂರ್ಯ–ಮಧುಸೂದನ್ ಎಂ. ವಿರುದ್ಧ ಮಣಿದರು. ಇದರೊಂದಿಗೆ ಬುಲ್ಸ್ 2–0 ಮುನ್ನಡೆ ಸಾಧಿಸಿತು.

ಈ ಹಂತದಲ್ಲಿ ಆಟ ರಂಗು ಪಡೆದುಕೊಂಡಿತು. ಪುರುಷರ ಸಿಂಗಲ್ಸ್ 'ಟ್ರಂಪ್' ಪಂದ್ಯದಲ್ಲಿ ಮಿಥುನ್ 15-7, 15-7ರಿಂದ ಅನಿರುದ್ಧ ದೇಶಪಾಂಡೆ ಅವರನ್ನು ಮಣಿಸುವ ಮೂಲಕ ಸ್ಕೋರ್ ಸಮಬಲಗೊಳಿಸಿದರು. ಈ ಜಯದಿಂದ ಉತ್ಸಾಹ ಪಡೆದ ಶಮಂತ್ ಕಿದಿಯೂರ್–ಧ್ರುತಿ ಯತೀಶ್ ಮಿಶ್ರ ಡಬಲ್ಸ್ 'ಟ್ರಂಪ್' ಹಣಾಹಣಿಯಲ್ಲಿ 13-15, 15-11, 15-14ರಿಂದ ಸಾಯಿ ಪ್ರತೀಕ್ –ಅನನ್ಯಾ ಪ್ರವೀಣ್ ಅವರನ್ನು ಅವರನ್ನು ಪರಾಭಗೊಳಿಸಿದರು. ಫಾಲ್ಕನ್ಸ್ ಮುನ್ನಡೆ ಹೆಚ್ಚಿತು. ಕೊನೆಯ 'ಸೂಪರ್' ಸೆಣಸಾಟದಲ್ಲಿ ಪೃಥ್ವಿ ರಾಯ್, ಮಿಥುನ್, ಶಮಂತ್ 21-18ರಿಂದ ಆಶಿತ್ ಸೂರ್ಯ/ಸಾಯಿ ಪ್ರತೀಕ್/ಮಧುಸೂದನ್ ಅವರನ್ನು ಮಣಿಸಿ ಫಾಲ್ಕನ್ಸ್ ಸಂಭ್ರಮವನ್ನು ಇಮ್ಮಡಿಗೊಳಿಸಿದರು.

ದಿನದ ಇನ್ನೊಂದು ಪಂದ್ಯದಲ್ಲಿ ಕೆಜಿಎಫ್ ವೊಲ್ವ್ಸ್ 4–1ರಿಂದ ಮಂಗಳೂರು ಶಾರ್ಕ್ಸ್ ತಂಡದ ವಿರುದ್ಧ ಗೆದ್ದಿತು.

ಇಂದಿನ ಪಂದ್ಯಗಳು

ಮಂಡ್ಯ ಬುಲ್ಸ್–ಕೆಜಿಎಫ್ ವೂಲ್ವ್ಸ್
ಮಧ್ಯಾಹ್ನ 3ರಿಂದ

ಮಲ್ನಾಡ್ ಫಾಲ್ಕನ್ಸ್–ಮಂಗಳೂರು ಶಾರ್ಕ್ಸ್
ಸಂಜೆ 6 ರಿಂದ

ನೇರಪ್ರಸಾರ: ಯೂರೊ ಸ್ಪೋರ್ಟ್

ಐಒಎ ಆಡಳಿತ ಸಿಒಎ ಕೈಗೆತ್ತಿಕೊಳ್ಳುವಂತಿಲ್ಲ: 'ಸುಪ್ರೀಂ'

ಯಥಾಸ್ಥಿತಿ ಕಾಪಾಡಲು ಸೂಚನೆ

ನವದೆಹಲಿ (ಪಿಟಿಐ): 'ದೆಹಲಿ ಹೈಕೋರ್ಟ್ ನೇಮಕ ಮಾಡಿರುವ ಆಡಳಿತ ಸಮಿತಿಯು (ಸಿಒಎ) ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ದೈನಂದಿನ ವ್ಯವಹಾರವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಬಾರದು' ಎಂದು ಸುಪ್ರೀಂ ಕೋರ್ಟ್ ಗುರುವಾರ ಮಧ್ಯಂತರ ಆದೇಶ ನೀಡಿದೆ.

ಸುಪ್ರೀಂ ಕೋರ್ಟ್‌ನ ಆದೇಶದಿಂದ ಐಒಎ ತಾತ್ಕಾಲಿಕವಾಗಿ ನಿಟ್ಟುಸಿರು ಬಿಡುವಂತಾಗಿದೆ. ರಾಷ್ಟ್ರೀಯ ಕ್ರೀಡಾ ನೀತಿಯನ್ನು ಜಾರಿಗೊಳಿಸದೇ ಇರುವುದಕ್ಕೆ ಐಒಎಯ ಆಡಳಿತವನ್ನು ಸಿಒಎ ಕೈಗಿತ್ತು, ದೆಹಲಿ ಹೈಕೋರ್ಟ್ ಮಂಗಳವಾರ ಆದೇಶ ಹೊರಡಿಸಿತ್ತು.

ಐಒಎ ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆಹೋಗಿತ್ತು. ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಅಂತರರಾಷ್ಟ್ರೀಯ ಒಲಿಂಪಿಕ್ ಸಂಸ್ಥೆಯು (ಐಒಸಿ) ಸಿಒಎಯಂತಹ ಚುನಾಯಿತಗೊಳ್ಳದೇ ನೇಮಕವಾಗಿರುವ ಸಮಿತಿಯನ್ನು ಒಪ್ಪಿಕೊಳ್ಳುವುದಿಲ್ಲ' ಎಂಬ ವಿಷಯವನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಮತ್ತು ನ್ಯಾಯಮೂರ್ತಿ ಸಿ.ಟಿ.ರವಿಕುಮಾರ್ ಅವರಿದ್ದ ಪೀಠದ ಮುಂದಿಟ್ಟರು.

'ಐಒಎಯು ಐಒಸಿಯ ಅಂಗ ಸಂಸ್ಥೆಯಾಗಿದ್ದು, ತನ್ನದೇ ಆದ ನಿಯಮಾವಳಿ ಪಾಲಿಸಬೇಕಿದೆ. ಐಒಎಯ ದೈನಂದಿನ ವ್ಯವಹಾರವನ್ನು ಸಿಒಎ ಕೈಗೆತ್ತಿಕೊಂಡರೆ ಅದನ್ನು ಮೂರನೇ ವ್ಯಕ್ತಿಯ ಹಸ್ತಕ್ಷೇಪ ಎಂದು ಐಒಸಿ ಪರಿಗಣಿಸುತ್ತದೆ' ಎಂದು ತಿಳಿಸಿದರು.

'ಸಿಒಎ ಅಧಿಕಾರವನ್ನು ತನ್ನ ತೆಕ್ಕೆಗೆ ತೆಗೆದುಕೊಂಡರೆ, ಐಒಸಿಯು ಐಒಎ ಮೇಲೆ ನಿಷೇಧ ಹೇರುವ ಸಾಧ್ಯತೆಯಿದೆ. ಹಾಗಾದಲ್ಲಿ ಭಾರತವು ಒಲಿಂಪಿಕ್ಸ್ ಅಥವಾ ಇತರ ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವ ಅವಕಾಶ ಕಳೆದುಕೊಳ್ಳುತ್ತದೆ' ಎಂಬುದನ್ನು ಗಮನಕ್ಕೆ ತಂದರು. ಈ ಕುರಿತು ಮಧ್ಯಂತರ ಆದೇಶ ಹೊರಡಿಸಬೇಕು ಎಂದು ಕೋರಿಕೊಂಡರು. ಅದಕ್ಕೆ ಪ್ರತಿಕ್ರಿಯಿಸಿದ ಪೀಠ, 'ಎರಡೂ ಕಡೆಯವರು ಯಥಾಸ್ಥಿತಿ ಕಾಪಾಡಿಕೊಳ್ಳಬೇಕು. ಐಒಎಯ ಆಡಳಿತವನ್ನು ಸಿಒಎಗೆ ಹಸ್ತಾಂತರಿಸ ಬಾರದು. ಈ ಪ್ರಕರಣದ ವಿಚಾರಣೆಯನ್ನು ಆ.22 ರಂದು ಸೂಕ್ತ ಪೀಠದ ಮುಂದಿಡಲಾಗುವುದು' ಎಂದು ಹೇಳಿತು.

18 ವರ್ಷದೊಳಗಿನ ಮಹಿಳಾ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಸೆ. 5ರಿಂದ

ಬೆಂಗಳೂರು: 18 ವರ್ಷದೊಳಗಿನ ಮಹಿಳಾ ಫಿಬಾ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಸೆಪ್ಟೆಂಬರ್ 5ರಿಂದ 11 ರವರೆಗೆ ಉದ್ಯಾನನಗರಿಯಲ್ಲಿ ನಡೆಯಲಿದೆ.

ಇಲ್ಲಿಯ ಕಂಠೀರವ ಕ್ರೀಡಾಂಗಣದ ಕರ್ನಾಟಕ ಒಲಿಂಪಿಕ್ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಕೆ.ಸಿ.ನಾರಾಯಣಗೌಡ ಈ ವಿಷಯ ತಿಳಿಸಿದರು.

ಕಂಠೀರವ ಹಾಗೂ ಕೋರಮಂಗಲದ ಒಳಾಂಗಣ ಕ್ರೀಡಾಂಗಣಗಳಲ್ಲಿ ಚಾಂಪಿಯನ್‌ಷಿಪ್ ನಡೆಯಲಿದೆ. ಭಾರತ, ಜಪಾನ್, ಚೀನಾ, ಇಂಡೊನೇಷ್ಯಾ, ಮಲೇಷ್ಯಾ ಸೇರಿದಂತೆ ಒಟ್ಟು 16 ತಂಡಗಳು ಭಾಗವಹಿಸಲಿವೆ. ಈ ಕ್ರೀಡಾಕೂಟದಲ್ಲಿ ಅಗ್ರ ನಾಲ್ಕು ಸ್ಥಾನ ಪಡೆದ ತಂಡಗಳು ಮುಂದಿನ ವರ್ಷ ಜುಲೈನಲ್ಲಿ ಸ್ಪೇನ್‌ನಲ್ಲಿ ನಡೆಯಲಿರುವ 19 ವರ್ಷದೊಳಗಿನ ಮಹಿಳೆಯರ ಫಿಬಾ ವಿಶ್ವಕಪ್ ಕ್ರೀಡಾಕೂಟದಲ್ಲಿ ಭಾಗವಹಿಸಲು ಅರ್ಹತೆ ಪಡೆಯಲಿವೆ ಎಂದು ಸಚಿವರು ತಿಳಿಸಿದರು.

ಇರಾನ್‌ನಲ್ಲಿ ನಡೆಯಲಿರುವ ಫಿಬಾ 18 ವರ್ಷದೊಳಗಿನವರ ಪುರುಷರ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಭಾರತ ತಂಡದ ಆಟಗಾರರಿಗೆ ಕಿಟ್‌ಗಳನ್ನು ವಿತರಿಸಲಾಯಿತು. ಟೆಹ್ರಾನ್‌ನಲ್ಲಿ ಇದೇ 21ರಿಂದ 28ರವರೆಗೆ ಈ ಚಾಂಪಿಯನ್‌ಷಿಪ್ ನಡೆಯಲಿದ್ದು, ತಂಡವನ್ನೂ ಪ್ರಕಟಿಸಲಾಯಿತು. ಕರ್ನಾಟಕದ ಸಂಕೇತ್ ಸುರೇಶ್ ಈ ತಂಡದಲ್ಲಿದ್ದಾರೆ.

ಬಿಎಫ್‌ಐ ಅಧ್ಯಕ್ಷ ಕೆ. ಗೋವಿಂದ ರಾಜು, ಪ್ರಧಾನ ಕಾರ್ಯದರ್ಶಿ ಚಂದ್ರಮುಖಿ ಶರ್ಮಾ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಗೋಪಾಲಕೃಷ್ಣ ಉಪಸ್ಥಿತರಿದ್ದರು.


18 ವರ್ಷದೊಳಗಿನವರ ಪುರುಷರ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ಗೆ ಭಾರತ ತಂಡ: ಲೋಕೇಂದ್ರ ಸಿಂಗ್ (ನಾಯಕ), ಹರ್ಷ ದಾಗರ್, ಉದಿತ್ ರವೀಶ್, ಕುಶಲ್ ಸಿಂಗ್, ಜೀತೇಂಂದ್ರಕುಮಾರ್ ಶರ್ಮಾ, ಜೈದೀಪ್ ರಾಥೋಡ್, ಶ್ರೇಯಾಂಶ್ ರಾಜ್ ಸಿಂಗ್, ಪ್ರೀತಂ ರೆಡ್ಡಿ, ಜನಮೇಜಯ್ ಸಿಂಗ್, ಅಭಿ ಜೋಷಿ, ಸಂಕೇತ್ ಸುರೇಶ್,ಲವೀಶ್. ಮುಖ್ಯ ಕೋಚ್: ವೆಸಲಿನ್ ಮ್ಯಾಟಿಚ್. ಸಹಾಯಕ ಕೋಚ್‌ಗಳು: ಮೋಹಿತ್ ಭಂಡಾರಿ, ಸತ್ಯನಾರಾಯಣ ಕೆ. ವ್ಯವಸ್ಥಾಪಕ: ಅಶೋಕ್ ಕುಮಾರ್ ಸಾಹು. ಫಿಸಿಯೊ: ಶಿವ ಷಣ್ಮುಖ ಸಿಂಗ್. ರೆಫರಿ: ರಾಕೇಶ್ ರಾಮಲಿಂಗಯ್ಯ.

ಕೊರಿಚ್‌ಗೆ ಮಣಿದ ನಡಾಲ್

ಮ್ಯಾಸನ್, ಅಮೆರಿಕ (ಎಪಿ): ಆರು ವಾರಗಳ ಬಳಿಕ ಸ್ಪರ್ಧೆಗಿಳಿದಿದ್ದ ಸ್ಪೇನ್‌ನ ಟೆನಿಸ್ ತಾರೆ ರಫೆಲ್ ನಡಾಲ್ ನಿರಾಸೆ ಅನುಭವಿಸಿದರು. ಇಲ್ಲಿ ನಡೆಯುತ್ತಿರುವ ವೆಸ್ಟರ್ನ್ ಆ್ಯಂಡ್ ಸದರ್ನ್ ಓಪನ್ ಟೂರ್ನಿಯಲ್ಲಿ ಅವರು 6 (9)–7, 6–4, 3–6ರಿಂದ ಕ್ರೊವೇಷ್ಯಾದ ಬಾರ್ನಾ ಕೊರಿಚ್ ಎದುರು ಎಡವಿದರು.

ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಈ ಪಂದ್ಯವು 2 ತಾಸು 51 ನಿಮಿಷಗಳ ಕಾಲ ನಡೆಯಿತು.

ಜುಲೈ 6ರಂದು ನಡಾಲ್, ತಮ್ಮ ಕೊನೆಯ ಪಂದ್ಯ ಆಡಿದ್ದರು. ಬಳಿಕ ಗಾಯದ ಕಾರಣ ಆಡಿರಲಿಲ್ಲ.



ಬಾರ್ನಾ ಕೊರಿಚ್

ಕೇರಳ: ಸಹ ಪ್ರಾಧ್ಯಾಪಕರ ಹುದ್ದೆಯಲ್ಲಿ ಸ್ವಜನಪಕ್ಷಪಾತ ಆರೋಪ

ವಿ.ವಿ ನೇಮಕಾತಿ: ರಾಜ್ಯಪಾಲರ ತಡೆ

ತಿರುವನಂತಪುರ (ಪಿಟಿಐ): ಕಣ್ಣೂರು ವಿಶ್ವವಿದ್ಯಾಲಯದ ಮಲಯಾಳ ವಿಭಾಗದ ಸಹ ಪ್ರಾಧ್ಯಾಪಕಿಯಾಗಿ ಪ್ರಿಯಾ ವರ್ಗೀಸ್ ಅವರ ನೇಮಕಾತಿಯನ್ನು 'ಸ್ವಜನಪಕ್ಷಪಾತದ' ಆರೋಪದ ಮೇಲೆ ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಬುಧವಾರ ತಡೆಹಿಡಿದಿದ್ದು, ರಾಜ್ಯಪಾಲರ ಈ ಕ್ರಮಕ್ಕೆ ವಿರೋಧ ಪಕ್ಷಗಳಿಂದ ಬೆಂಬಲ ವ್ಯಕ್ತವಾಗಿದೆ.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಆಪ್ತ ಕಾರ್ಯದರ್ಶಿ ಕೆ.ಕೆ. ರಾಘೇಶ್ ಅವರ ಪತ್ನಿ ಪ್ರಿಯಾ ಅವರ ನೇಮಕಾತಿಯು ರಾಜಕೀಯ ವಲಯದಲ್ಲಿ ವಿವಾದ ಎಬ್ಬಿಸಿತ್ತು. ಪ್ರಿಯಾ ಅವರು ಸಂಶೋಧನೆಯಲ್ಲಿ ಕಡಿಮೆ ಅಂಕ ಹಾಗೂ ಸಂದರ್ಶನದಲ್ಲಿ ಅಧಿಕ ಅಂಕ ಗಳಿಸಿದ್ದಾರೆ. ಆದರೆ ಆಯ್ಕೆ ಪ್ರಕ್ರಿಯೆಯಲ್ಲಿ ಅವರು ಪ್ರಥಮ ಸ್ಥಾನದಲ್ಲಿ ಇದ್ದರು. ಹೀಗಾಗಿ, ವಿ.ವಿಗಳ ಕುಲಾಧಿಪತಿಗಳೂ ಆದ ರಾಜ್ಯಪಾಲರು ತಮ್ಮ ವಿಶೇಷ ಅಧಿಕಾರ ಬಳಸಿ ಪ್ರಿಯಾ ನೇಮಕಾತಿಯನ್ನು ತಡೆಹಿಡಿದಿದ್ದಾರೆ.

ಪ್ರಿಯಾ ಅವರ ನೇಮಕಾತಿಗೆ ತಡೆಯೊಡ್ಡಿದ್ದನ್ನು ಸಮರ್ಥಿಸಿರುವ ಕೇರಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸತೀಶನ್ ಅವರು, ಕಣ್ಣೂರು ವಿ.ವಿಯಿಂದ ನಡೆಯುತ್ತಿದ್ದ ಅಕ್ರಮ ನೇಮಕಾತಿಯನ್ನು ತಮ್ಮ ಅಧಿಕಾರ ಬಳಸಿ ರಾಜ್ಯಪಾಲರು ತಡೆದಿದ್ದಾರೆ. ರಾಜ್ಯದ ಇತರ ವಿ.ವಿಗಳಲ್ಲೂ ತಮ್ಮ ಸಂಬಂಧಿಗಳಿಗೆ ಉದ್ಯೋಗ ದೊರಕಿಸಲು ಆಡಳಿತಾರೂಢ ಪಕ್ಷದ ನಾಯಕರು ಇದೇ ರೀತಿಯ ಅಕ್ರಮ ಎಸಗಿರಬಹುದು. ಹಾಗಾಗಿ, ರಾಜ್ಯದಾದ್ಯಂತ ಎಲ್ಲಾ ವಿ.ವಿಗಳಲ್ಲೂ ನೇಮಕಾತಿ ಕುರಿತು ತನಿಖೆ ನಡೆಸಲು ರಾಜ್ಯಪಾಲರು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಇರಿಸುವ ನಿಟ್ಟಿನಲ್ಲಿ ವಿ.ವಿ ನೇಮಕಾತಿಗಳ ಜವಾಬ್ದಾರಿಯನ್ನು ಸಾರ್ವಜನಿಕ ಸೇವಾ ಆಯೋಗಕ್ಕೆ(ಪಿಎಸ್‌ಸಿ) ವಹಿಸಬೇಕು ಎಂದು ಸುಶೀಲನ್ ಅವರು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದರು.

ಇದೇ ವೇಳೆ, ರಾಜ್ಯಪಾಲರ ಕ್ರಮವನ್ನು ಆಡಳಿತಾರೂಢ ಸಿಪಿಎಂ ವಿರೋಧಿಸಿದೆ. ಈ ಕುರಿತು ಸಿಪಿಎಂನ ಮುಖವಾಣಿ ಪತ್ರಿಕೆಯಾದ 'ದೇಶಾಭಿಮಾನಿ'ಯಲ್ಲಿ ಲೇಖನ ಬರೆದಿರುವ ಸಿಪಿಎಂ ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಅವರು, 'ಕೇರಳದ ಎಡರಂಗದ ಸರ್ಕಾರವನ್ನು ಇಕ್ಕಟ್ಟಿನಲ್ಲಿ ಸಿಲುಕಿಸಲು ಕೇಂದ್ರ ಸರ್ಕಾರವು ರಾಜ್ಯಪಾಲರನ್ನು ಬಳಸಿಕೊಳ್ಳುತ್ತಿದೆ. ಕೇಂದ್ರದ ಕಾರ್ಯಸೂಚಿಯಂತೆ ತಿದ್ದುಪಡಿಗಳಿಗೆ ಸಹಿ ಹಾಕಲು ರಾಜ್ಯಪಾಲರು ಹಿಂದೇಟು ಹಾಕುತ್ತಿದ್ದಾರೆ' ಎಂದು ಅವರು ಬರೆದಿದ್ದಾರೆ.

ಆ. 22 ರಂದು ಸರ್ವಪಕ್ಷ ಸಭೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರ ಮತದಾರರ ಪಟ್ಟಿಗೆ ಹೊರಗಿನ ಮತದಾರರನ್ನು ಸೇರಿಸುವ ವಿಷಯದ ಬಗ್ಗೆ ಚರ್ಚಿಸಲು ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಅವರು ಆ. 22 ರಂದು ಸರ್ವಪಕ್ಷ ಸಭೆ ಕರೆದಿದ್ದಾರೆ.

ಅಬ್ದುಲ್ಲಾ ನಿವಾಸದಲ್ಲಿ ಬೆಳಿಗ್ಗೆ 11 ಗಂಟೆಗೆ ಸಭೆ ನಡೆಯಲಿದ್ದು, ಹೊರಗಿನವರು ಮತದಾರರಾಗಿ ನೋಂದಾಯಿಸಿಕೊಳ್ಳಲು ಚುನಾವಣಾ ಆಯೋಗ ಅವಕಾಶ ನೀಡಿರುವ ಕುರಿತು ಚರ್ಚಿಸಲಾಗುವುದು.

ಬಾಂಬ್ ಸ್ಫೋಟ: ಮೃತರ ಸಂಖ್ಯೆ 21

ಕಾಬೂಲ್ (ಎಪಿ): ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿ ಸುನ್ನಿ ಸಮುದಾಯದ ಮಸೀದಿಯಲ್ಲಿ ಬುಧವಾರ ಸಂಜೆ ನಡೆದ ಬಾಂಬ್ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ 21ಕ್ಕೆ ಏರಿಕೆಯಾಗಿದೆ ಎಂದು ಕಾಬೂಲ್ ಪೊಲೀಸ್ ಮುಖ್ಯಸ್ಥರ ವಕ್ತಾರ ಖಾಲಿದ್ ಜದ್ರಾನ್ ಗುರುವಾರ ತಿಳಿಸಿದ್ದಾರೆ.

ಈ ಘಟನೆಯಲ್ಲಿ 33ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಯಾವುದೇ ಉಗ್ರ ಸಂಘಟನೆ ಈ ಬಾಂಬ್ ದಾಳಿಯ ಹೊಣೆ ಹೊತ್ತುಕೊಂಡಿಲ್ಲ ಎಂದು ಅವರು ಹೇಳಿದ್ದಾರೆ.

ಇದೊಂದು ಆತ್ಮಾಹುತಿ ದಾಳಿಯಾಗಿದೆ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ. ಘಟನೆಯಲ್ಲಿ ಮುಸ್ಲಿಂ ಧರ್ಮಗುರು ಮುಲ್ಲಾ ಅಮೀರ್ ಮೊಹಮ್ಮದ್ ಕಾಬೂಲಿ ಸಹ ಮೃತಪಟ್ಟಿದ್ದಾರೆ.



ಕಾಬೂಲ್‌ನಲ್ಲಿ ಸಂಭವಿಸಿದ ಸ್ಫೋಟದಲ್ಲಿ ಮೃತಪಟ್ಟವರನ್ನು ದಫನ ಮಾಡಿದ ಬಳಿಕ ಶೋಕತಪ್ತ ಜನರ ಪ್ರಾರ್ಥನೆ –ಎಎಫ್‌ಪಿ ಚಿತ್ರ

ಉತ್ತರ ಕಾಬೂಲ್‌ನ ಖೈರ್ ಖಾನಾ ಪ್ರದೇಶದ ಈ ಮಸೀದಿಯಲ್ಲಿ ಸಂಭವಿಸಿದ ಬಾಂಬ್ ಸ್ಫೋಟದಿಂದಾಗಿ ಸಮೀಪದ ಕಟ್ಟಡಗಳೂ ಹಾನಿಗೊಂಡಿವೆ.

ಬಿಲ್ಕಿಸ್ ಅತ್ಯಾಚಾರಿಗಳು ಬ್ರಾಹ್ಮಣರು, ಸಂಸ್ಕಾರವಂತರು: ಬಿಜೆಪಿ ಶಾಸಕ

ನವದೆಹಲಿ: ಬಿಲ್ಕಿಸ್ ಬಾನು ಮೇಲೆ ಅತ್ಯಾಚಾರ ಎಸಗಿದವರು ಬ್ರಾಹ್ಮಣ ಸಮುದಾಯಕ್ಕೆ ಸೇರಿದ್ದು, ಅವರೆಲ್ಲರೂ ಉತ್ತಮ ಸಂಸ್ಕಾರವಂತರು ಎಂದು ಗೋಧ್ರಾ ಕ್ಷೇತ್ರದ ಬಿಜೆಪಿ ಶಾಸಕ ಸಿ.ಕೆ. ರವುಲಜಿ ಅವರು ಹೇಳಿದ್ದಾರೆ ಎಂದು 'ಎನ್‌ಡಿಟಿವಿ' ವರದಿ ಮಾಡಿದೆ. ಅತ್ಯಾಚಾರಿಗಳ ಬಿಡುಗಡೆ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ರಚಿಸಲಾಗಿದ್ದ ಸಮಿತಿಯಲ್ಲಿ ರವುಲಜಿ ಅವರೂ ಇದ್ದರು.

'ಅವರು ಅಪರಾಧ ಎಸಗಿದ್ದಾರೋ, ಇಲ್ಲವೋ ನನಗೆ ಗೊತ್ತಿಲ್ಲ. ಅಪರಾಧ ಎಸಗಲು ಒಂದು ಉದ್ದೇಶ ಇರುತ್ತದೆ. ಉತ್ತಮ ಸಂಸ್ಕಾರವಂತರು ಎಂಬುದಾಗಿ ಬ್ರಾಹ್ಮಣರು ಗುರುತಿಸಿಕೊಂಡಿದ್ದಾರೆ. ಬಿಲ್ಕಿಸ್ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾಗಿ ಈಗ ಬಿಡುಗಡೆಯಾದವರು ಬ್ರಾಹ್ಮಣ ಸಮುದಾಯದವರು. ಅವರನ್ನು ಶಿಕ್ಷೆಗೆ ಒಳಪಡಿಸಬೇಕು ಎಂದು ಯಾರೋ ದುರುದ್ದೇಶ ಹೊಂದಿದ್ದಂತೆ ತೋರುತ್ತಿದೆ' ಎಂದು ಬಿಜೆಪಿ ಶಾಸಕ ಹೇಳಿದ್ದಾರೆ.

ಅತ್ಯಾಚಾರಿಗಳನ್ನು ಕ್ಷಮಾಪಣೆ ನೀತಿ ಅನ್ವಯ ಬಿಡುಗಡೆ ಮಾಡಿರುವುದು ದೇಶದ ನ್ಯಾಯಾಂಗ ವ್ಯವಸ್ಥೆ ಮೇಲಿನ ನನ್ನ ನಂಬಿಕೆಯನ್ನೇ ಬುಡಮೇಲು ಮಾಡಿದೆ.

ಬಿಲ್ಕಿಸ್ ಬಾನು, ಸಂತ್ರಸ್ತೆ

'ಸುಪ್ರೀಂ'ಗೆ 6 ಸಾವಿರ ಜನರ ಮನವಿ

ನವದೆಹಲಿ (ಪಿಟಿಐ): ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣದ 11 ಅಪರಾಧಿಗಳ ಬಿಡುಗಡೆ ಕ್ರಮ ರದ್ದುಪಡಿಸಬೇಕು ಎಂದು ಮಹಿಳೆಯರು, ಸಾಮಾಜಿಕ ಕಾರ್ಯಕರ್ತರು ಸೇರಿ 6 ಸಾವಿರಕ್ಕೂ ಅಧಿಕ ನಾಗರಿಕರು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದಾರೆ.

ಅಪರಾಧಿಗಳ ಬಿಡುಗಡೆ ಕ್ರಮವು, 'ವ್ಯವಸ್ಥೆಯ ಮೇಲೆ ವಿಶ್ವಾಸವಿಡಿ', 'ನ್ಯಾಯಕ್ಕಾಗಿ ಹೋರಾಡಿ' ಎಂಬ ಮಾತು ನಂಬಿದ್ದ ಪ್ರತಿ ಅತ್ಯಾಚಾರ ಸಂತ್ರಸ್ಥೆಯರ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ ಎಂದು ಜಂಟಿ ಹೇಳಿಕೆಯಲ್ಲಿ ಪ್ರತಿಪಾದಿಸಲಾಗಿದೆ.

ಸಾಮಾಜಿಕ ಕಾರ್ಯಕರ್ತರಾದ ಸಯೀದಾ ಹಮೀದ್, ಜಫರುಲ್ ಇಸ್ಲಾಂ ಖಾನ್, ರೂಪ್ ರೇಖಾ, ದೇವಕಿ ಜೈನ್ ಮತ್ತಿತರರು ಹೇಳಿಕೆಗೆ ಸಹಿ ಹಾಕಿದ್ದಾರೆ.

ಲಖೀಂಪುರ ಖೇರಿ: 75 ಗಂಟೆ ರೈತರ ಧರಣಿ ಆರಂಭ

ಲಖೀಂಪುರ ಖೇರಿ (ಪಿಟಿಐ): ಉತ್ತರ ಪ್ರದೇಶದ ಲಖೀಂಪುರ ಖೇರಿ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಕುಮಾರ್ ಮಿಶ್ರಾ ಅವರನ್ನು ವಜಾಗೊಳಿಸುವುದು ಸೇರಿ, ಹಲವಾರು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಲಖೀಂಪುರ ನಗರದಲ್ಲಿ ಹಮ್ಮಿಕೊಂಡಿರುವ ಧರಣಿಗೆ ಗುರುವಾರ ಬೆಳಗ್ಗೆ ಚಾಲನೆ ನೀಡಿದೆ.

75 ಗಂಟೆಗಳ ಗಂಟೆಗಳ ಈ ಧರಣಿ ಇದೇ 20ರ ವರೆಗೆ ನಡೆಯಲಿದೆ. ಭಾರತೀಯ ಕಿಸಾನ್ ಯೂನಿಯನ್‌ನ (ಬಿಕೆಯು) ರಾಷ್ಟ್ರೀಯ ವಕ್ತಾರ ರಾಕೇಶ್ ಟಿಕಾಯತ್, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಭೂದೇವ್ ಶರ್ಮ ಮತ್ತು ಇತರ ಪ್ರಮುಖ ರೈತ ನಾಯಕರು ಬುಧವಾರವೇ ಲಖೀಂಪುರಕ್ಕೆ ಆಗಮಿಸಿದರು.

ಎಸ್‌ಕೆಎಂನ ಹಲವು ನಾಯಕರು ಧರಣಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಬಿಯುಕೆ–ಟಿಕಾಯತ್ ಬಣ ತಿಳಿಸಿದೆ.

ಕಳೆದ ವರ್ಷ ಅಕ್ಟೋಬರ್ 3ರಂದು ಲಖೀಂಪುರದಲ್ಲಿ ನಡೆದ ಹಿಂಸಾಚಾರದಲ್ಲಿ ಮೃತಪಟ್ಟ ರೈತರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಹೋರಾಡುತ್ತಿದ್ದೇವೆ. ಅಜಯ್ ಮಿಶ್ರಾರನ್ನು ವಜಾಗೊಳಿಸಬೇಕು, ಮೃತ ರೈತರ ಕುಟುಂಬಗಳಿಗೆ ಪರಿಹಾರ ನೀಡಬೇಕು, ಕನಿಷ್ಠ ಬೆಂಬಲ ಬೆಲೆ ನೀಡಲು ಕಾನೂನು ರೂಪಿಸಬೇಕು, 2022ರ ವಿದ್ಯುತ್ ಶುಲ್ಕವನ್ನು ಹಿಂಪಡೆಯಬೇಕು ಎಂಬ ಅಂಶಗಳು ನಮ್ಮ ಬೇಡಿಕೆಗಳಲ್ಲಿ ಸೇರಿವೆ. ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್ ಮತ್ತು ಹರಿಯಾಣ ರಾಜ್ಯಗಳ ಹಲವಾರು ರೈತರು ಧರಣಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಬಿಕೆಯು-(ಲಾಖೆವಾಲ್) ರಾಜ್ಯ ಉಪಾಧ್ಯಕ್ಷ ಅವತಾರ್ ಸಿಂಗ್ ಮೆಹ್ಲೊ ಹೇಳಿದ್ದಾರೆ.

ಕೇಂದ್ರ ಸರ್ಕಾರದ ಜಾರಿ ಮಾಡಿದ್ದ ಮೂರು ಕೃಷಿ ನೀತಿಗಳನ್ನು ಹಿಂಪಡೆಯುವಂತೆ ಹೋರಾಟ ನಡೆಸುತ್ತಿದ್ದ ರೈತರ ಮೇಲೆ ಸಚಿವ ಅಜಯ್ ಸಿಂಗ್ ಅವರ ಪುತ್ರ ಎಸ್‌ಯುವಿ ಹರಿಸಿದ್ದರು.

ಈ ಘಟನೆ ಬಳಿಕ ಹಿಂಸಾಚಾರ ನಡೆದಿತ್ತು. ಈ ಎರಡೂ ಪ್ರಕರಣಗಳಲ್ಲಿ ಒಟ್ಟು ಎಂಟು ಜನರು ಮೃತಪಟ್ಟಿದ್ದರು.

2 ದಶಕದ ಬಳಿಕ ಆರೋಪಿ ಬಂಧನ

ಮೋತಿಹಾರಿ,ಬಿಹಾರ(ಪಿಟಿಐ): ಎರಡು ದಶಕದಿಂದ ತಲೆಮರೆಸಿಕೊಂಡಿದ್ದ ಬಿಹಾರದ ಮಾಜಿ ಶಾಸಕ ರಂಜನ್ ತಿವಾರಿಯನ್ನು ಭಾರತ–ನೇಪಾಳ ಗಡಿ ಬಳಿಯ ರಕ್ಸಾಲ್‌ನಲ್ಲಿ ಪೊಲೀಸರು ಗುರುವಾರ ಬಂಧಿಸಿದ್ದಾರೆ.

1998ರಲ್ಲಿ ಪೊಲೀಸ್ ಸಿಬ್ಬಂದಿ ಮೇಲೆ ಗುಂಡು ಹಾರಿಸಿದ ಆರೋಪ ಈತನ ಮೇಲಿದ್ದು, ಈತನ ತಲೆಗೆ ₹25 ಸಾವಿರ ಬಹುಮಾನ ಘೋಷಿಸಲಾಗಿತ್ತು.

'ಸುಪ್ರೀಂ' ಮೆಟ್ಟಿಲೇರಿದ ವೈಎಸ್‌ಆರ್‌ಸಿಪಿ

ಹೈದರಾಬಾದ್: ಬಡವರಿಗೆ ನೆರವಾಗಲು ರೂಪಿಸಲಾದ ಯೋಜನೆಗಳನ್ನು ಉಚಿತ ಕೊಡುಗೆ ಎಂದು ಬಿಂಬಿಸುವುದು ನ್ಯಾಯೋಚಿತವಲ್ಲ ಎಂದು ವೈಎಸ್‌ಆರ್‌ಸಿಪಿ ಪಕ್ಷದ ಪ್ರಧಾನ ಕಾರ್ಯದರ್ಶಿ, ರಾಜ್ಯಸಭೆ ಸದಸ್ಯ ವಿಜಯಸಾಯಿ ರೆಡ್ಡಿ ಪ್ರತಿಪಾದಿಸಿದ್ದಾರೆ.

ಈ ವಿಷಯದಲ್ಲಿ ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ. ಬಿಜೆಪಿಯ ಅಶ್ವಿನಿ ಉಪಾಧ್ಯಾಯ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ಅವರು ಕೋರ್ಟ್‌ಗೆ ಮನವಿ ಸಲ್ಲಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ರಶ್ದಿ ಮೇಲಿನ ದಾಳಿ ಸ್ವಂತ ನಿರ್ಧಾರ: ಹದಿ

ನ್ಯೂಯಾರ್ಕ್: 'ಮುಂಬೈ ಮೂಲದ ಲೇಖಕ ಸಲ್ಮಾನ್ ರಶ್ದಿ ಅವರ ಮೇಲಿನ ದಾಳಿ ನನ್ನ ಸ್ವಂತ ನಿರ್ಧಾರವಾಗಿತ್ತು' ಎಂದು ಹೇಳಿರುವ ಆರೋಪಿ ಹದಿ ಮಟರ್, ರಶ್ದಿ ಅವರು ಬದುಕುಳಿದಿರುವುದಕ್ಕೆ ಆಶ್ಚರ್ಯ ವ್ಯಕ್ತಪಡಿಸಿದ್ದಾನೆ.

ಇರಾನ್‌ನ ರೆವಲ್ಯೂಷನರಿ ಗಾರ್ಡ್ ಕೋರ್‌ನೊಂದಿಗೆ (ಐಆರ್‌ಜಿಸಿ) ಸಂಪರ್ಕದಲ್ಲಿರುವುದನ್ನು ನಿರಾಕರಿಸಿರುವ ಆತ, 'ನಾನೊಬ್ಬನೇ ಏಕಾಂಗಿಯಾಗಿ ಈ ಕೃತ್ಯ ಎಸಗಿದ್ದೇನೆ. ರಶ್ದಿ ಅಪ್ರಜ್ಞಾಪೂರ್ವಕವಾಗಿ ವರ್ತಿಸಿದ್ದಾರೆ. ಹೀಗಾಗಿ ಸ್ವಇಚ್ಛೆಯಿಂದ ದಾಳಿ ಮಾಡಿದ್ದೇನೆ' ಎಂದು ಆತ ಹೇಳಿದ್ದಾನೆ.

ಷಟೌಕ್ವಾ ಕೌಂಟಿ ಜೈಲಿನಿಂದ ನ್ಯೂಯಾರ್ಕ್ ಪೋಸ್ಟ್‌ಗೆ ನೀಡಿದ 15 ನಿಮಿಷಗಳ ವಿಡಿಯೊ ಸಂದರ್ಶನದಲ್ಲಿ ಆರೋಪಿ ಹದಿ ಮಟರ್, 'ಅವರು (ಸಲ್ಮಾನ್ ರಶ್ದಿ) ಬದುಕುಳಿದಿದ್ದಾರೆ ಎಂಬುದನ್ನು ಕೇಳಿದಾಗ ನನಗೆ ಆಶ್ಚರ್ಯವಾಯಿತು' ಎಂದು ಪ್ರತಿಕ್ರಿಯಿಸಿದ್ದಾನೆ.

ಇರಾನಿನ ಸರ್ವೋಚ್ಚ ನಾಯಕ ಅಯತೊಲ್ಲಾ ರುಹೊಲ್ಲಾ ಖೊಮೇನಿ ಅವರಿಂದ ಸ್ಫೂರ್ತಿ ಪಡೆದಿದ್ದೀರಾ ಎಂಬ ಪ್ರಶ್ನೆಗೆ ಮಟರ್ ಪ್ರತಿಕ್ರಿಯಿಸಲಿಲ್ಲ. ಆದರೆ, 'ನಾನು ಅಯತೊಲ್ಲಾ ಅವರನ್ನು ಗೌರವಿಸುತ್ತೇನೆ. ಅವರು ಮಹಾನ್ ವ್ಯಕ್ತಿ. ಅಷ್ಟು ಮಾತ್ರ ಹೇಳಬಲ್ಲೆ' ಎಂದಿದ್ದಾನೆ.

ರಶ್ದಿಯವರ ವಿವಾದಾತ್ಮಕ ಕಾದಂಬರಿಯ ಎರಡು ಪುಟಗಳನ್ನಷ್ಟೇ ಓದಿದ್ದು, ಸಂಪೂರ್ಣ ಕಾದಂಬರಿಯನ್ನು ಓದಿಲ್ಲ ಎಂದು ಆರೋಪಿ ಹೇಳಿದ್ದಾನೆ.

ತೈವಾನ್ ಜತೆ ವ್ಯಾಪಾರ ಒಪ್ಪಂದ: ಅಮೆರಿಕ

ಬೀಜಿಂಗ್ (ಎಪಿ): ತೈವಾನ್ ಜತೆಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ನಿಟ್ಟಿನಲ್ಲಿ ಮಾತುಕತೆ ನಡೆಸಲಾಗುವುದು ಎಂದು ಅಮೆರಿಕ ಘೋಷಿಸಿದೆ. ಈ ಮೂಲಕ ಸ್ವಯಂ ಆಡಳಿತ ಹೊಂದಿರುವ ದ್ವೀಪ ರಾಷ್ಟ್ರ ತೈವಾನ್‌ಗೆ ಅಮೆರಿಕ ಮತ್ತೊಂದು ಬಗೆಯ ಬೆಂಬಲ ವ್ಯಕ್ತಪಡಿಸಿದೆ.

ಅಮೆರಿಕದ ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರು ಇತ್ತೀಚೆಗೆ ತೈವಾನ್‌ಗೆ ಭೇಟಿ ನೀಡಿದ್ದನ್ನು ಕಟುವಾಗಿ ವಿರೋಧಿಸಿದ್ದ ಚೀನಾ, ತೈವಾನ್ ಸುತ್ತಲಿನ ಸಮುದ್ರದಲ್ಲಿ ಕ್ಷಿಪಣಿ ದಾಳಿ ಜತೆಗೆ ಸೇನಾ ತಾಲೀಮು ನಡೆಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ತೈವಾನ್ ಜತೆಗೆ ವ್ಯಾಪಾರ ಸಂಬಂಧ ವೃದ್ಧಿಸುವುದು ಮತ್ತು ಇತರ ಸಹಕಾರಕ್ಕೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಳ್ಳುವ ನಿಟ್ಟಿನಲ್ಲಿ ಮಾತುಕತೆ ನಡೆಸಲಾಗುವುದು ಎಂದು ಅಮೆರಿಕದ ವ್ಯಾಪಾರ ಪ್ರತಿನಿಧಿ ಪ್ರತಿಕ್ರಿಯಿಸಿದರು.

ಟ್ವಿಟರ್‌ನಲ್ಲಿ ವದಂತಿ: ಮಹಿಳೆಗೆ 34 ವರ್ಷ ಜೈಲು

ದುಬೈ (ಎಪಿ): ವದಂತಿಗಳನ್ನು ಹಬ್ಬಿಸಿದ ಮತ್ತು ಭಿನ್ನಮತೀಯ ಟ್ವೀಟ್‌ಗಳನ್ನು ಮರು ಟ್ವೀಟ್ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಸೌದಿ ಅರೇಬಿಯಾದ ಮಹಿಳೆ 34 ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿದ್ದಾರೆ.

ಬ್ರಿಟನ್‌ನ ಲೀಡ್ಸ್ ವಿಶ್ವವಿದ್ಯಾಲಯದ ವೈದ್ಯಕೀಯ ವಿಭಾಗದಲ್ಲಿ ಕೊನೆಯ ವರ್ಷದ ಸಂಶೋಧನಾರ್ಥಿಯಾಗಿರುವ ಸಲ್ಮಾ ಅಲ್ ಶೆಹಾಬ್, ಕಳೆದ ವರ್ಷ ರಜೆಯಲ್ಲಿ ಸೌದಿ ಅರೇಬಿಯಾಕ್ಕೆ ಮರಳಿದ್ದಾಗ ಬಂಧನಕ್ಕೆ ಒಳಗಾಗಿದ್ದರು.

ಚೀನಾ ಪ್ರವಾಹ: 16 ಜನರ ಸಾವು

ಬೀಜಿಂಗ್ (ಪಿಟಿಐ): ಚೀನಾದ ವಾಯುವ್ಯ ಭಾಗದ ಕ್ವಿಂಘೈ ಪ್ರಾಂತ್ಯದಲ್ಲಿ ಗುರುವಾರ ದಿಢೀರನೆ ಎದುರಾದ ಪ್ರವಾಹದಿಂದಾಗಿ ಕನಿಷ್ಠ 16 ಜನರು ಮೃತಪಟ್ಟಿದ್ದು, 36 ಜನರು ಕಾಣೆಯಾಗಿದ್ದಾರೆ ಎಂದು ಸ್ಥಳೀಯ ಆಡಳಿತ ತಿಳಿಸಿದೆ.

'ಡಾಟಾಂಗ್ ಹುಯಿ' ಮತ್ತು 'ತು' ಪ್ರದೇಶದಲ್ಲಿ ಪ್ರವಾಹ ಉಂಟಾಗಿದೆ ಎಂದು ಕ್ಸಿನ್ಹುವಾ ಸುದ್ದಿ ಸಂಸ್ಥೆ ತಿಳಿಸಿದೆ.

ಕ್ರಿಕೆಟ್: ಚಾಹರ್ ಭರ್ಜರಿ ಪುನರಾಗಮನ; ಶಿಖರ್ ಧವನ್– ಶುಭಮನ್ ಗಿಲ್ 'ಜುಗಲ್‌ಬಂದಿ'

ಭಾರತಕ್ಕೆ ಜಿಂಬಾಬ್ವೆ ಸುಲಭ ತುತ್ತು

ಹರಾರೆ (ಪಿಟಿಐ): ವೇಗಿ ದೀಪರ್ ಚಾಹರ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ತಮ್ಮ ಪುನರಾಗಮನವನ್ನು ಭರ್ಜರಿಯಾಗಿಯೇ ಆಚರಿಸಿಕೊಂಡರೆ, ಶಿಖರ್ ಧವನ್- ಶುಭಮನ್ ಗಿಲ್ ಜೋಡಿಯ ಬ್ಯಾಟಿಂಗ್ ಮೋಡಿ ಮಾಡಿತು.

ಹರಾರೆ ಸ್ಪೋರ್ಟ್ಸ್ ಕ್ಲಬ್ ಕ್ರೀಡಾಂಗಣದಲ್ಲಿ ಗುರುವಾರ ಆಟದ ಎಲ್ಲ ವಿಭಾಗಗಳಲ್ಲೂ ಪ್ರಭುತ್ವ ಮೆರೆದ ಭಾರತ ತಂಡ, ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಜಿಂಬಾಬ್ವೆಯನ್ನು 10 ವಿಕೆಟ್‌ಗಳಿಂದ ಮಣಿಸಿತು.

ಗಾಯದ ಕಾರಣ ಆರು ತಿಂಗಳಿಗೂ ಅಧಿಕ ಸಮಯ ತಂಡದಿಂದ ದೂರವುಳಿದಿದ್ದ ಚಾಹರ್ (27ಕ್ಕೆ3), ಶಿಸ್ತಿನ ದಾಳಿ ನಡೆಸಿ ಜಿಂಬಾಬ್ವೆ ಬ್ಯಾಟಿಂಗ್‌ನ ಬೆನ್ನೆಲುಬು ಮುರಿದರು. ಆತಿಥೇಯ ತಂಡವನ್ನು 40.3 ಓವರ್‌ಗಳಲ್ಲಿ 189 ರನ್‌ಗಳಿಗೆ ಆಲೌಟ್ ಮಾಡಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು.

ಬಲಿಷ್ಠ ಬ್ಯಾಟಿಂಗ್ ಕ್ರಮಾಂಕ ಹೊಂದಿರುವ ಭಾರತಕ್ಕೆ ಈ ಗುರಿ ಸವಾಲಾಗಿ ಪರಿಣಮಿಸಲೇ ಇಲ್ಲ. ಧವನ್ (ಔಟಾಗದೆ 81) ಮತ್ತು ಗಿಲ್ (ಔಟಾಗದೆ 82) ವಿಕೆಟ್ ನಷ್ಟವಿಲ್ಲದೆ ಕೇವಲ 30.5 ಓವರ್‌ಗಳಲ್ಲಿ ತಂಡವನ್ನು ಗೆಲುವಿನ ಗಡಿ ದಾಟಿಸಿದರು.

ವೆಸ್ಟ್ ಇಂಡೀಸ್ ವಿರುದ್ಧದ ಸರಣಿಯಲ್ಲೂ ಭಾರತಕ್ಕೆ ಉತ್ತಮ ಆರಂಭ ನೀಡಿದ್ದ ಧವನ್ ಮತ್ತು ಗಿಲ್ ಕಳೆದ ನಾಲ್ಕು ಪಂದ್ಯಗಳಲ್ಲಿ ತಮ್ಮ ಮೂರನೇ ಅರ್ಧಶತಕ ಗಳಿಸಿದರು. ಮೂರನೇ ಬಾರಿ ಶತಕದ ಜತೆಯಾಟ ನೀಡಿದರು.

ಧವನ್ ಎಚ್ಚರಿಕೆಯ ಆಟವಾಡಿದರೆ, ಗಿಲ್ ಆಕ್ರಮಣಕಾರಿ ಬ್ಯಾಟಿಂಗ್ ಮೂಲಕ ಎದುರಾಳಿ ಬೌಲರ್‌ಗಳ ಮೇಲೆ ಒತ್ತಡ ಹೇರಿದರು. ಎಡಗೈ ಬ್ಯಾಟರ್ ಧವನ್ 113 ಎಸೆತಗಳನ್ನು ಎದುರಿಸಿ 9 ಬೌಂಡರಿ ಹೊಡೆದರು.

72 ಎಸೆತಗಳನ್ನು ಎದುರಿಸಿದ ಗಿಲ್ 10 ಬೌಂಡರಿ ಮತ್ತು ವೆಸ್ಲಿ ಮಡೆವೆರೆ ಎಸೆತದಲ್ಲಿ ಒಂದು ಸಿಕ್ಸರ್ ಸಿಡಿಸಿದರು. ಮೊದಲ 30 ಎಸೆತಗಳವರೆಗೆ ಎಚ್ಚರಿಕೆಯ ಆಟವಾಡಿದ ಅವರು ಪರಿಸ್ಥಿತಿಗೆ ಹೊಂದಿಕೊಂಡ ಬಳಿಕ ಲೀಲಾಜಾಲವಾಗಿ ಬ್ಯಾಟ್ ಬೀಸಿದರು.

ಜಿಂಬಾಬ್ವೆ ನಾಯಕ ರೆಗಿಸ್ ಚಕಾಬ್ವಾ ಈ ಜತೆಯಾಟ ಮುರಿಯುವ ನಿಟ್ಟಿನಲ್ಲಿ ಎಂಟು ಮಂದಿಯ ಕೈಗೆ ಚೆಂಡು ನೀಡಿದರಾದರೂ, ಯಶಸ್ಸು ಸಿಗಲಿಲ್ಲ.

ಆರಂಭಿಕ ಆಘಾತ: ಟಾಸ್ ಗೆದ್ದ ನಾಯಕ ಕೆ.ಎಲ್.ರಾಹುಲ್, ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಕಳುಹಿಸಿದರು. ಬೆಳಗ್ಗಿನ ಮೋಡ ಕವಿದ ವಾತಾವರಣವು ಸ್ವಿಂಗ್ ಬೌಲಿಂಗ್‌ಗೆ ನೆರವು ನೀಡುತ್ತಿತ್ತು.

ಭಾರತದ ಆರಂಭಿಕ ಬೌಲಿಂಗ್ ಜೋಡಿ ಚಾಹರ್ ಮತ್ತು ಮೊಹಮ್ಮದ್ ಸಿರಾಜ್ (36ಕ್ಕೆ 1) ಪರಿಸ್ಥಿತಿಯ ಪೂರ್ಣ ಲಾಭ ಪಡೆದರು. ಆ ಬಳಿಕ ಪ್ರಸಿದ್ಧ ಕೃಷ್ಣ (50ಕ್ಕೆ 3) ಹಾಗೂ ಅಕ್ಷರ್ ಪಟೇಲ್ (24ಕ್ಕೆ 3) ಕೈಚಳಕ ಮೆರೆದರು.

ಅಗ್ರಕ್ರಮಾಂಕದ ಮೂವರು ಬ್ಯಾಟ್ಸ್‌ಮನ್‌ಗಳು ಚಾಹರ್‌ಗೆ ವಿಕೆಟ್ ಒಪ್ಪಿಸಿದರೆ, ಅನುಭವಿಗಳಾದ ಸೀನ್ ವಿಲಿಯಮ್ಸ್ ಮತ್ತು ಸಿಕಂದರ್ ರಝಾ ಅವರನ್ನು ಕ್ರಮವಾಗಿ ಸಿರಾಜ್ ಮತ್ತು ಪ್ರಸಿದ್ಧ ಕೃಷ್ಣ ಪೆವಿಲಿಯನ್‌ಗೆ ಅಟ್ಟಿದರು. 66 ರನ್‌ಗಳಿಸುವಷ್ಟರಲ್ಲಿ ಐದು ವಿಕೆಟ್‌ಗಳು ಬಿದ್ದವು.

ರೆಗಿಸ್ ಚಕಾಬ್ವಾ (35 ರನ್, 51 ಎ) ಮಧ್ಯಮ ಕ್ರಮಾಂಕದಲ್ಲಿ ಮರುಹೋರಾಟ ನಡೆಸಲು ಪ್ರಯತ್ನಿಸಿದರೂ, ಇತರರಿಂದ ತಕ್ಕ ಸಾಥ್ ಸಿಗಲಿಲ್ಲ. 110 ರನ್‌ಗಳಿಗೆ ಎಂಟು ವಿಕೆಟ್ ಕಳೆದುಕೊಂಡ ಜಿಂಬಾಬ್ವೆ, ಅಲ್ಪ ಮೊತ್ತಕ್ಕೆ ಕುಸಿಯುವ ಆತಂಕಕ್ಕೆ ಸಿಲುಕಿತು.

ಆದರೆ ಬ್ರಾಡ್ ಇವಾನ್ಸ್ (33) ಮತ್ತು ರಿಚರ್ಡ್ ಎನ್‌ಗರ್ವಾ (34) ಅವರು ಒಂಬತ್ತನೇ ವಿಕೆಟ್‌ಗೆ ದಾಖಲೆಯ 70 ರನ್ ಸೇರಿಸಿದ್ದರಿಂದ ತಂಡದ ಮೊತ್ತ 200ರ ಗಡಿ ಸಮೀಪ ತಲುಪಿತು.



ಜಿಂಬಾಬ್ವೆಯ ಮರುಮನಿ ವಿರುದ್ಧ ಔಟ್‌ಗೆ ಮನವಿ ಮಾಡಿದ ದೀಪಕ್ ಚಾಹರ್ —ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- ಮೊದಲ ಏಕದಿನ ಪಂದ್ಯದಲ್ಲಿ 10 ವಿಕೆಟ್ ಜಯ
- ಚಾಹರ್, ಪ್ರಸಿದ್ಧ ಕೃಷ್ಣ, ಅಕ್ಷರ್‌ಗೆ ತಲಾ 3 ವಿಕೆಟ್
- ಧವನ್ 81, ಗಿಲ್ 82 ರನ್

ಸ್ಕೋರ್ ಕಾರ್ಡ್

ಜಿಂಬಾಬ್ವೆ 189 (40.3 ಓವರ್)
ಕೈಯಾ ಸಿ ಸ್ಯಾಮ್ಸನ್ ಬಿ ಚಾಹರ್ 4 (20 ಎ), ಮರುಮನಿ ಸಿ ಸ್ಯಾಮ್ಸನ್ ಬಿ ಚಾಹರ್ 8 (22 ಎ., 4X1) ಮಡೆವೆರೆ ಎಲ್‌ಬಿಡಬ್ಲ್ಯು ಬಿ ಚಾಹರ್ 5 (12 ಎ), ವಿಲಿಯಮ್ಸ್ ಸಿ ಧವನ್ ಬಿ ಸಿರಾಜ್ 1 (3 ಎ), ಸಿಕಂದರ್ ಸಿ ಧವನ್ ಬಿ ಪ್ರಸಿದ್ಧ 12 (17 ಎ., 4X1), ಚಕಾಬ್ವಾ ಬಿ ಅಕ್ಷರ್ 35 (51 ಎ., 4X4), ಬರ್ಲ್ ಸಿ ಗಿಲ್ ಬಿ ಪ್ರಸಿದ್ಧ 11 (18 ಎ., 4X2), ಜಾಂಗ್ವೆ ಎಲ್‌ಬಿಡಬ್ಲ್ಯು ಬಿ ಅಕ್ಷರ್ 13 (23 ಎ., 4X2), ಇವಾನ್ಸ್ ಔಟಾಗದೆ 33 (29 ಎ., 4X3, 6X1), ಎನ್‌ಗರ್ವಾ ಬಿ ಪ್ರಸಿದ್ಧ 34 (42 ಎ., 4X3, 6X1), ನಯುಚಿ ಸಿ ಗಿಲ್ ಬಿ ಅಕ್ಷರ್ 8 (6 ಎ., 4X1)
ಇತರೆ 25 (ಬೈ 4, ಲೆಗ್‌ಬೈ 12, ವೈಡ್ 9) **ವಿಕೆಟ್ ಪತನ:** 1–25 (ಇನೊಸೆಂಟ್ ಕೈಯಾ; 6.4), 2–26 (ಟ್ಯಾಡಿವನಾಶೆ ಮರುಮನಿ; 8.2), 3–31 (ಸೀನ್ ವಿಲಿಯಮ್ಸ್; 9.2), 4–31 (ವೆಸ್ಲಿ ಮಡೆವೆರೆ; 10.1), 5–66 (ಸಿಕಂದರ್ ರಝಾ; 16.1), 6–83 (ರಿಯಾನ್ ಬರ್ಲ್; 20.5), 7–107 (ರೆಗಿಸ್ ಚಕಾಬ್ವಾ; 26.3), 8–110 (ಲೂಕ್ ಜಾಂಗ್ವೆ, 28.3), 9–180 (ರಿಚರ್ಡ್ ಎನ್‌ಗರ್ವಾ; 39.2), 10–189 (ವಿಕ್ಟರ್ ನಯುಚಿ; 40.3)
ಬೌಲಿಂಗ್: ದೀಪಕ್ ಚಾಹರ್ 7–0–27–3, ಮೊಹಮ್ಮದ್ ಸಿರಾಜ್ 8–2–36–1, ಕುಲದೀಪ್ ಯಾದವ್ 10–1–36–0, ಪ್ರಸಿದ್ಧ ಕೃಷ್ಣ 8–0–50–3, ಅಕ್ಷರ್ ಪಟೇಲ್ 7.3–2–24–3

ಭಾರತ ವಿಕೆಟ್ ನಷ್ಟವಿಲ್ಲದೆ 192 (30.5 ಓವರ್)
ಧವನ್ ಔಟಾಗದೆ 81 (113 ಎ., 4X9), ಗಿಲ್ ಔಟಾಗದೆ 82 (72 ಎ., 4X10, 6X1)
ಇತರೆ 29 (ಲೆಗ್‌ಬೈ8, ವೈಡ್ 21)
ಬೌಲಿಂಗ್: ರಿಚರ್ಡ್ ಎನ್‌ಗರ್ವಾ 7–0–40–0, ವಿಕ್ಟರ್ ನಯುಚಿ 4–0–17–0, ಬ್ರಾಡ್ಲಿ ಇವಾನ್ಸ್ 3.5–0–28–0, ಸೀನ್ ವಿಲಿಯಮ್ಸ್ 5–0–28–0, ಸಿಕಂದರ್ ರಝಾ 6–0–32–0, ಲೂಕ್ ಜಾಂಗ್ವೆ 2–0–11–0, ವೆಸ್ಲಿ ಮಡೆವೆರೆ 2–0–16–0, ರಿಯಾನ್ ಬರ್ಲ್ 1–0–12–0

ಫಲಿತಾಂಶ: ಭಾರತಕ್ಕೆ 10 ವಿಕೆಟ್ ಗೆಲುವು
ಪಂದ್ಯಶ್ರೇಷ್ಠ: ದೀಪಕ್ ಚಾಹರ್
ಎರಡನೇ ಪಂದ್ಯ: ಆ.20

ಚೆಸ್: ಪ್ರಗ್ನಾನಂದ ಗೆಲುವಿನ ಹ್ಯಾಟ್ರಿಕ್

ಮಿಯಾಮಿ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಗ್ನಾನಂದ ಅವರು ಎಫ್‌ಟಿಎಕ್ಸ್ ಕ್ರಿಪ್ಟೊ ಕಪ್ ಚೆಸ್ ಟೂರ್ನಿಯಲ್ಲಿ ಹ್ಯಾಟ್ರಿಕ್ ಗೆಲುವು ಪಡೆದರು. ಗುರುವಾರ ನಡೆದ ಮೂರನೇ ಸುತ್ತಿನಲ್ಲಿ ಅವರು 2.5–1.5 ಪಾಯಿಂಟ್‌ಗಳಿಂದ ಹ್ಯಾನ್ಸ್ ನೀಮನ್ ಎದುರು ಗೆದ್ದರು.

ನಾಲ್ಕು ರ್‍ಯಾಪಿಡ್ ಪಂದ್ಯಗಳ ಮೊದಲ ಹಣಾಹಣಿಯಲ್ಲಿ ಪ್ರಗ್ನಾನಂದ ಅವರು ನೀಮನ್ ಎದುರು ಸೋತರು. ಆದರೆ ಎರಡನೇ ಮತ್ತು ನಾಲ್ಕನೇ ಗೇಮ್‌ಗಳಲ್ಲಿ ಗೆದ್ದ ಅವರು ಮೂರನೇ ಗೇಮ್‌ಅನ್ನು ಡ್ರಾ ಮಾಡಿಕೊಂಡು ಪೂರ್ಣ ಪಾಯಿಂಟ್ಸ್ ಗಿಟ್ಟಿಸಿಕೊಂಡರು.

ಈ ಗೆಲುವಿನ ಮೂಲಕ ಪ್ರಗ್ನಾನಂದ, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಜತೆ ಜಂಟಿ ಅಗ್ರಸ್ಥಾನದಲ್ಲಿದ್ದಾರೆ.

ವಾರ್ವಿಕ್‌ಶೈರ್ ಪರ ಸಿರಾಜ್ ಆಟ



ಮೊಹಮ್ಮದ್ ಸಿರಾಜ್– ಎಎಫ್‌ಪಿ ಚಿತ್ರ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರು ಇಂಗ್ಲಿಷ್ ಕೌಂಟಿ ಕ್ರಿಕೆಟ್‌ನಲ್ಲಿ ಆಡಲಿದ್ದಾರೆ.

ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ವಾರ್ವಿಕ್‌ಶೈರ್ ತಂಡದ ಕೊನೆಯ ಮೂರು ಪಂದ್ಯಗಳಲ್ಲಿ ಅವರು ಕಣಕ್ಕಿಳಿಯಲಿದ್ದಾರೆ. ಸಿರಾಜ್ ಅವರು ಸದ್ಯ ಜಿಂಬಾಬ್ವೆ ಎದುರಿನ ಏಕದಿನ ಸರಣಿಯಲ್ಲಿ ಆಡುತ್ತಿದ್ದಾರೆ.

'ಮೊಹಮ್ಮದ್ ಸಿರಾಜ್ ಅವರು ನಮ್ಮ ಕ್ಲಬ್ ಪರ ಆಡಲು ಸಹಿ ಹಾಕಿದ್ದಾರೆ. ಸೆಪ್ಟೆಂಬರ್ 12ರಂದು ಅವರು ಎಜ್‌ಬಾಸ್ಟನ್‌ಗೆ ಬರಲಿದ್ದಾರೆ' ಎಂದು ವಾರ್ವಿಕ್‌ಶೈರ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಾರತ ರಾಷ್ಟ್ರೀಯ ತಂಡದ ಪರ ಮೂರೂ ಮಾದರಿಗಳೂ ಸೇರಿ ಒಟ್ಟು 26 ಪಂದ್ಯಗಳನ್ನು ಆಡಿರುವ ಸಿರಾಜ್, 56 ವಿಕೆಟ್ ಗಳಿಸಿದ್ದಾರೆ. ವೃತ್ತಿಜೀವನದಲ್ಲಿ ಆಡಿದ ಒಟ್ಟು 207 ಪಂದ್ಯಗಳಿಂದ 403 ವಿಕೆಟ್ ಅವರ ಬತ್ತಳಿಕೆ ಸೇರಿವೆ.